ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 19

ಅಕ್ಟೋಬರ್ 07, 2007

ಕನ್ನಡ ವಾರಪತ್ರಿಕೆ

ರೂ. 5/-





ಪೇಜ್ 8

ಅಭಿವೃದ್ಧಿಯ ಜಪ ಭೂಮಿ ನುಂಗಲು ನೆಪ

ಪೇಜ್ 3





ಮೈತ್ರಿಕೂಟದಲ್ಲಿ ಮುಷ್ಠಿಯುದ್ಧ

ಬಳ್ಳಾರಿ : ರಾಜಕೀಯದಲ್ಲಿ ಬಂಡವಾಳ ಹೂಡಿಕೆದಾರರು

ಪೇಜ್ 6

ಸಾರ್ವಜನಿಕ ವಲಯದ ಕಾರ್ಮಿಕರು ಸಮರಾಂಗಣದತ್ತ



ಬೆಂಗಳೂರು ಈಗ ಎ-1 ಸಿಟಿ !



ಭಗತ್ ಸಿಂಗ್ ಸ್ಫೂರ್ತಿಯ ನೆಲೆ

ಸಾಮಾನ್ಯ ಚಿತ್ರ



ಮರೆಯಾದ ಪ್ರೊಫೆಸರ್ ಎಚ್.ಜಿ. ಸಣ್ಣಗುಡ್ಡಯ್ಯ



ತುಮಕೂರಿನ ಪ್ರಗತಿಪರ ಚಿಂತಕರು ಎಡಪಂಥೀಯರ ಬದ್ಧತೆಯೊಂದಿಗೆ, ಜನಪರ ಚಳುವಳಿಗಳೊಂದಿಗೆ ಗುರುತಿಸಿಕೊಂಡು ಬದುಕಿ, ಸಮಕಾಲೀನರಾದ ಮತ್ತು ನಂತರದ ಪೀಳಿಗೆಯ ಯುವಜನರ ಮೇಲೆಗಾಢವಾದ ಪ್ರಭಾವ ಬೀರಿದ ಪ್ರೊ. ಎಚ್.ಜಿ. ಸಣ್ಣಗುಡ್ಡಯ್ಯ ಅವರು ಸೆಪ್ಟೆಂಬರ್ 17, 2007 ರಂದು ತುಮಕೂರಿನಲ್ಲಿ ತೀರಿಕೊಂಡಿದ್ದಾರೆ. ಇದರ ಬೆನ್ನ ಹಿಂದೆಯೇ ತುಮಕೂರಿನ ಮತ್ತೊಂದು ಪ್ರಗತಿಪರ ದನಿಯಾಗಿದ್ದ ಕವಿ ವೀಚಿಯವರು ನಮ್ಮನ್ನಗಲಿದ ಸುದ್ದಿ ಇದೀಗ ಬಂದಿದೆ. ಈ ಇಬ್ಬರ ಅಗಲಿಕೆಗೆ ಜನಶಕ್ತಿ ತನ್ನ ಸಂತಾಪ ಸಲ್ಲಿಸಿದೆ.



ಕನ್ನಡದ ಪ್ರತಿ ವಾರ ಪತ್ರಿಕೆಗಳನ್ನು ತಿರುವಿ ಹಾಕುತ್ತಾ ಬಂದಿದ್ದೇನೆ. ರಂಜನೆ ಮತ್ತು ಪ್ರಚೋದನೆಯ ಉದ್ದೇಶದ ಪತ್ರಿಕೆಯನ್ನು ಒಳಗೊಂಡು ಯಾವ ವಾರಪತ್ರಿಕೆಗಳೂ ಇಡೀ ಭಾರತದ ಜನರ ಭವಿಷ್ಯಕ್ಕೆ ಮಾರಕವಾಗುವ ಅಣು ಒಪ್ಪಂದದ ಬಗ್ಗೆ ಲೇಖನಗಳನ್ನು ಬರೆದಿಲ್ಲ. ಅಂದರೆ ಅವರ ಉದ್ದೇಶ ಏನು? ಈ ಬಗ್ಗೆ ವಿವರ ಮಾಹಿತಿಗಳುಳ್ಳ ಲೇಖನ ಪ್ರಕಟಿಸುತ್ತಿರುವ ಜನಶಕ್ತಿಗೆ ಧನ್ಯವಾದಗಳು. ಲೇಖನಗಳು ಇನ್ನಷ್ಟು ಬರಲಿ.

ಮುದ್ದುಕೃಷ್ಣ, ಮೈಸೂರು

★

ರಾಮಸೇತು ಹೆಸರಿನಲ್ಲಿ ಅಮಾಯಕ ಜನರನ್ನು ಬಸ್‌ನಲ್ಲಿಯೇ ಬೆಂಕಿ ಇಟ್ಟು ಸುಟ್ಟ ಪುಂಡ ಪರಿವಾರದ ಕೃತ್ಯ ಅಮಾನುಷ. ಇದಾವ ಸಂಸತಿ?

ಕೆ.ಕೋದಂಡರಾಮ, ಬೆಂಗಳೂರು

★

ನೆರೆಹಾವಳಿಯಿಂದಾಗಿ ಜನ ನಡು ನೀರಿನಲ್ಲಿ ನಿಂತಿರುವಾಗ ನೆತ್ತಿಯ ಮೇಲೆ ಸಮೀಕ್ಷೆಗಳ ವಿಮಾನಗಳು ಹಾರಿ ಮರೆಯಾದರೆ ಏನು ಪ್ರಯೋಜನ? ಕೋಟಿಗಳ ಮಾತನಾಡಿದರೆ ಕೊಚ್ಚಿ ಹೋದ ಬದುಕು ಉಳಿಯುತ್ತದೆಯೇ?

ಹೊನವಾಡ್ ಆರ್. ರೋಣ

★

ಭ್ರೂಣಹತ್ಯೆ ಕುರಿತ ಮಹಿಳಾ ಆಯೋಗದ ಕಾರ್ಯಕ್ರಮದ ವರದಿ ಓದಿದಾಗ ಚಿಡ್ಡಿ ಪಡೆ ಎಲ್ಲಿದ್ದರೂ ಅದನ್ನು ವಿಷಮಯಗೊಳಿಸಬಲ್ಲರು, ದಾಸ್ಯಕ್ಕೆ ಒಳಪಡಿಸಬಲ್ಲರು ಎಂದು ತಿಳಿದು ಬೆಚ್ಚಿದೆ.

ಮಮತಾ ಎಲ್. ಬೆಂಗಳೂರು


★

ಸಿನಿಮಾ ಜೊತೆ, ಕ್ರೀಡಾ ಬರಹ ಪ್ರಕಟವಾಗುವುದು ಸಂತೋಷವಾಯಿತು.

ಜನಾರ್ಧನ, ಕೋಲಾರ

ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ



ಹಿಂದಿನ ಸಂಚಿಕೆಯಿಂದ ರೂ.		5,65,500
ಎಲ್‌ಐಸಿ ಸಂಗಾತಿಗಳು ಧಾರವಾಡ 2ನೇ ಕಂತು		15,000
ಸಿಪಿಐ(ಎಂ) ಪಕ್ಷದ ಸದಸ್ಯರು, ಧಾರವಾಡ	9400	
ಎಲ್ಲಾ ಸಂಗಾತಿಗಳು/ಹಿತೈಷಿಗಳು ಧಾರವಾಡ	10,200	
ವಿಮಾ ಸಂಗಾತಿಗಳು ಗದಗ	1600	
ವಿಮಾ ಸಂಗಾತಿಗಳು ನವಲಗುಂದ	1500	
ವಿಮಾ ಸಂಗಾತಿಗಳು ಬೆಳಗಾಂ	2300	
ಮೊದಲ ಕಂತು 10,000 ಸೇರಿ	25,000	
ಪಿ.ಆರ್.ನಾಯ್ಕ ಅಂಕೋಲಾ		5,000
ವಿ.ಕೆ. ಶೆಟ್ಟಿ, ಮ್ಯಾನೇಜರ್, ವಿಜಯಾ ಬ್ಯಾಂಕ್, ತುಮಕೂರು		5,000
ಒಟ್ಟು		ರೂ. 5,90,500

ಜುಟ್ಟುಮುದ್ದು

'ಬಳ್ಳಾರಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತದಾರರಿಗೆ ಹಂಚಲು ಸಂಗ್ರಹಿಸಿ ಇಡಲಾಗಿದ್ದ, ಬಿಜೆಪಿಗೆ ಸೇರಿದ ಸಾವಿರಾರು ಸೀರೆಗಳು ಹಾಗೂ ಕಳಪೆ ಗುಣಮಟ್ಟದ ಮದ್ಯವನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳು ವಶಪಡಿಸಿಕೊಂಡ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ"

- ಬಿ.ಎಸ್.ಯಡಿಯೂರಪ್ಪ
ಉಪ ಮುಖ್ಯಮಂತ್ರಿಗಳು

➤ ಇಂತಹ ವಿಚಾರಗಳ ವರದಿ ತಮಗೆ ಸಿಗೋದು ಕಷ್ಟ ಬಿಡಿ.

★

'ಮಹಿಳೆಯರ ಹಿತವನ್ನು ರಕ್ಷಿಸುವ ಉದ್ದೇಶದಿಂದ ಜಾರಿಗೆ ತರಲಾದ ವರದಕ್ಷಿಣೆ ತಡೆ ಕಾಯ್ದೆ, ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ , ಮತ್ತಿತರ ಕಾನೂನುಗಳು ಬಹುತೇಕ ಸಂದರ್ಭದಲ್ಲಿ ದುರ್ಬಳಕೆ ಆಗುತ್ತಿವೆ.'

- ಕೆ.ಜಿ.ಬಾಲಕೃಷ್ಣನ್
ಸುಪ್ರಿಂಕೋರ್ಟ್ ಮುಖ್ಯ ನ್ಯಾಯಮೂರ್ತಿ

➤ ಹೌದು ಹೌದು ನಿಜಾನೇ ಇರ್ಬೇಕು. ಹೆಂಡತಿಯನ್ನು ಬಡಿಯುವವರು, ಕಡಿಯುವವರು, ಸೀಮೆಎಣ್ಣೆ ಹಾಕಿ ಸುಡುವವರೂ ಕೂಡ ಇದೇ ಮಾತು ಹೇಳ್ತಾ ಇದ್ದಾರೆ. ..

★

"ರಾಮಸೇತು ಯೋಜನೆಯ ಬೀಜ ಬಿತ್ತಿದ್ದೇ ಎನ್‌ಡಿಎ ಸರ್ಕಾರ. ಸಾಧ್ಯತಾ ವರದಿ ಸಿದ್ಧಪಡಿಸಲು ಅದು ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ತೆಗೆದಿರಿಸಿತ್ತು"

- ಸೀತಾರಾಂ ಯೆಚೂರಿ
ಸಿಪಿಐ(ಎಂ)ಪೊಲಿಟ್‌ಬ್ಯೂರೋ ಸದಸ್ಯರು

➤ ಪಾಪ, ಆಗ ಅಧಿಕಾರದಲ್ಲಿದ್ದರು. ಈಗ ಅಧಿಕಾರ ಕಳಕೊಂಡಿದ್ದಾರೆ. ಅಭಿಪ್ರಾಯ ಬದಲಾಗುವುದಿಲ್ಲವೆ?

★

"ರಾಮನನ್ನು ನಿರಾಕರಿಸಿದರೆ ದೇಶವನ್ನು ನಿರಾಕರಿಸಿದಂತೆ, ಕರುಣಾನಿಧಿ ಅವರಿಗೆ ಹೆಚ್ಚಿನ ಬುದ್ಧಿ ಹಾಗೂ ತಿಳುವಳಿಕೆ ನೀಡಲೆಂದು ದೇವರಲ್ಲಿ ಪ್ರಾರ್ಥಿಸಿ ಕೊಳ್ಳುತ್ತೇವೆ"

- ಕಲ್ಯಾಣ ಸಿಂಗ್, ಬಿಜೆಪಿ ಮುಖಂಡ

➤ ರಾಮನ ಹೆಸರಲ್ಲಿ ಮುಗ್ಧ ಜನರನ್ನು ಸುಡದಂತೆ ಸದ್ಬುದ್ಧಿ ಕೊಡು ದೇವರೇ ಅಂತಲೂ ಮುಗ್ಧ ರಾಮಭಕ್ತರು ಇಲ್ಲಿ ಬೇಡಿಕೊಳ್ಳುತ್ತಿದ್ದಾರೆ ಸ್ವಾಮಿ.

★

'ಜಾಗತೀಕರಣದಿಂದ ಅನುಕೂಲ'

- ರಾಮೇಶ್ವರ ಠಾಕೂರ್
ಕರ್ನಾಟಕ ರಾಜ್ಯಪಾಲರು

➤ ಇಲ್ಲ ಅಂದೋರು ಯಾರು? ಅನುಕೂಲ ಯಾರಿಗೆ ಅನ್ನೋದಷ್ಟೇ ನಮ್ಮ ಪ್ರಶ್ನೆ.

★

'ಪ್ರಸ್ತುತ ಬ್ರಾಹ್ಮಣ ಸಮಾಜ ರಾಷ್ಟ್ರದ ಹಾಗೂ ರಾಜ್ಯಗಳ ರಾಜಕಾರಣದ ವಿದ್ಯಮಾನಗಳಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿದೆ. ಪ್ರತಿದಿನ 'ಸರ್ವೇಜನಾ ಸುಖಿನೋಭವಂತು' ಎಂದು ಪ್ರಾರ್ಥಿಸುತ್ತಾ ಗುರುವರ್ಗದಲ್ಲಿದ್ದ ಈ ಸಮಾಜಕ್ಕೆ ಪ್ರಜಾಪ್ರಭುತ್ವದ ಆಡಳಿತದಲ್ಲಿ ದುರಂತ ಸ್ಥಿತಿಯಾಗಿದೆ'

- ಮಾಸ್ಟರ್ ಹಿರಣ್ಣಯ್ಯ
ಅಖಿಲ ಭಾರತ ಚಾಣಕ್ಯ ಬ್ರಾಹ್ಮಣರ ಸಂಘ ಸ್ಥಾಪನಾ ಸಮಾರಂಭದಲ್ಲಿ

➤ ಅಂದರೇನು?
1.ತಾವು ಯಾವತ್ತೂ ಗುರು ಸ್ಥಾನದಲ್ಲೇ ಇರಬೇಕು.
2. ಪ್ರಜಾಪ್ರಭುತ್ವ ಬಂದಿರುವುದರಿಂದ ಅದಕ್ಕೆ ಧಕ್ಕೆ ಆಗಿದೆ. ಇದೇ ಅಲ್ವೆ ತಾವು ಹೇಳುತ್ತಿರೋದು?

ತಿದ್ದುಪಡಿ - ಮಾಹಿತಿ

ಜನಶಕ್ತಿ ಸಂಚಿಕೆ 18ರ ಪುಟ 2 ರಲ್ಲಿ ಪ್ರಕಟವಾಗಿರುವ 'ಕವಿ ಶಿವೇಶ್ವರ ದೊಡ್ಡಮನಿ ನೆನಪು' ಎಂಬ ಜಿ.ಬಿ.ತೋರಗಲ್ ಅವರು ಬರೆದ ಪತ್ರದಲ್ಲಿ, ಜನಶಕ್ತಿ ಪತ್ರಿಕೆಯ ಆರಂಭವಾದದ್ದು ಮೇ, 1947 ಎಂದಿರಬೇಕಾದದ್ದು, ಕಣ್ತಪ್ಪಿನಿಂದಾಗಿ, ಮೇ 1, 1847 ಎಂದಾಗಿದೆ.

ಜನಶಕ್ತಿಯ ಸಂಚಿಕೆ 17 ರಲ್ಲಿ ಪುಸ್ತಕ ಪರಿಚಯ ಕಾಲಂನಲ್ಲಿ ಪರಿಚರಿಸಲಾಗಿರುವ 'ದುಡಿಯುವ ಕೈಗಳ ಹೋರಾಟದ ಕಥೆ' ಪುಸ್ತಕದ ಪ್ರಕಾಶಕರು 'ಡಾ:ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ(ರಿ), ಅಂಕೋಲಾ(ಉ.ಕ)'. ಗಮನಿಸಲು ಕೋರಲಾಗಿದೆ.

- ಸಂ.

ಬರಹಗಾರರು, ವರದಿಗಾರರ ಗಮನಕ್ಕೆ

'ಜನಶಕ್ತಿ ವಾರಪತ್ರಿಕೆ'ಯ ಮೇಲೆ ಅಭಿಮಾನವಿಟ್ಟು ಪತ್ರಿಕೆಗೆ ಲೇಖನ ಮತ್ತು ವರದಿಗಳನ್ನು ಕಳುಹಿಸುತ್ತಿರುವ ವರದಿಗಾರರು-ಲೇಖಕರು ಈ ಕೆಳಗಿನ ಸೂಚನೆಗಳನ್ನು ಗಮನಿಸುವಂತೆ ಕೋರಲಾಗಿದೆ.

ಸೂಚನೆಗಳು :

1. 'ಜನಶಕ್ತಿ'ಯು ದಿನ ಪತ್ರಿಕೆಯಲ್ಲ ವಾರ ಪತ್ರಿಕೆ
2. ವರದಿ-ಲೇಖನಗಳು ವಾರಪತ್ರಿಕೆಗೆ ತಕ್ಕಂತಿರಲಿ.
3. ಕಡಿಮೆ ವಾಕ್ಯಗಳಲ್ಲಿ, ಸ್ವಾರಸ್ಯಕರವಾಗಿ ವಿಚಾರ ಹೇಳುವ ಕಡೆ ಗಮನ ಕೊಡಿ.
4. ವಿಷಯದ-ಹೋರಾಟದ ಪ್ರಾಮುಖ್ಯತೆಗೆ ತಕ್ಕಂತೆ ಲೇಖನ-ವರದಿಯ ಗಾತ್ರವನ್ನೂ ನಿರ್ಧರಿಸಿ, ಸುದೀರ್ಘ ಬರಹಗಳಿಗೆ ಜಾಗ ಹೊಂದಿಸುವುದು ಕಷ್ಟ.
5. ವರದಿ-ಲೇಖನದೊಂದಿಗೆ ಸಾಧ್ಯವಾದಷ್ಟು ವಿಷಯಕ್ಕೆ ಸಂಬಂಧಿಸಿದ ಫೋಟೋಗಳನ್ನು ತಪ್ಪದೇ ಕಳಿಸಿ.
6. ಕೈಬರವಣಿಗೆಯಾದರೆ ಯಾರಿಗೆ ಆದರೂ ಅರ್ಥವಾಗುವಂತೆ ಬಿಡಿಸಿ ಸ್ಫುಟವಾಗಿ ಬರೆಯಿರಿ, ಕಂಪ್ಯೂಟರ್‌ನಲ್ಲಿ ಟೈಪ್ ಮಾಡುವುದಿದ್ದರೆ, ಅದನ್ನು ಟೈಪ್‌ಮಾಡಿಸಿ ಈ-ಮೇಲ್ ಮೂಲಕ ಕಳುಹಿಸುವುದು ತುಂಬಾ ಅನುಕೂಲಕರ.

ಈ-ಮೇಲ್ ವಿಳಾಸ

: js_weekly@yahoo.com
: kriya_ramu@yahoo.com

ಸಂಪರ್ಕಕ್ಕಾಗಿ :

ಎಸ್.ವೈ.ಗುರುಶಾಂತ್ 9448230114 /
ಆರ್. ರಾಮಕೃಷ್ಣ 9448505789

ಸಂಪಾದಕೀಯ

ಅಕ್ರಮಗಳಿಗೆ ಕಡಿವಾಣವೆಲ್ಲಿ?

209 ಸ್ಥಳೀಯ ಸಂಸ್ಥೆಗಳ ಆಯ್ಕೆಯ ಮತದಾನವೀಗ ಮುಗಿದಿದೆ. ಮತದಾನದ ಕಾಲಕ್ಕೆ ಅಲ್ಲಲ್ಲಿ ಸಂಭವಿಸಿದ ಗಲಭೆ ಹಾಗೂ ಮುಕ್ತ ಮತದಾನಕ್ಕೆ ಅಡ್ಡಿಯುಂಟಾದ ಕೆಲವೆಡೆಗಳಲ್ಲಿ ಮರು ಮತದಾನ 29 ರಂದು ನಡೆಸಲಾಗುತ್ತಿದೆ. ಪತ್ರಿಕೆ ಮುದ್ರಣಕ್ಕೆ ಹೋಗುತ್ತಿರುವಾಗ ಎಲ್ಲರ ದೃಷ್ಟಿ ಫಲಿತಾಂಶದತ್ತ.

ಕೋಮುವಾದಿ ಬಿಜೆಪಿಯು ಸರ್ಕಾರದಲ್ಲಿ ಭಾಗಿದಾರನಾಗಿ, ಮುಂದೆ ಅಧಿಕಾರದ ಚುಕ್ಕಾಣಿ ಹಿಡಿಯುವ ಆತುರದಲ್ಲಿರುವ ಸನ್ನಿವೇಶದ ಹಿನ್ನೆಲೆಯಲ್ಲಿ ಈ ಚುನಾವಣೆಗೆ ಮಹತ್ವವಿದೆ. ಅಧಿಕಾರಕ್ಕೆ ಬರಲೆಂದು ಮತ್ತು ಈಗಿರುವ ಅಧಿಕಾರವನ್ನು ತನ್ನ ಕೋಮುವಾದಿ ಫ್ಯಾಶಿಸ್ಟ್ ಅಜೆಂಡಾ ಜಾರಿಗೆ ಸಕ್ರಿಯವಾಗಿ ಬಳಸುತ್ತಿರುವ ಸಂದರ್ಭದಲ್ಲಿ ಕೋಮುವಾದಿ ಶಕ್ತಿಗಳನ್ನು ಜನತೆ ತಿರಸ್ಕರಿಸಿ ಸೋಲಿಸಬೇಕಾದದ್ದು. ಕರ್ನಾಟಕವನ್ನು ಸೌಹಾರ್ದತೆಯ, ಜಾತ್ಯಾತೀತೆಯ ನೆಲೆಯಾಗಿ ಕಾಯುವ ಐತಿಹಾಸಿಕ ಹೊಣೆ ಜನತೆಯ ಮುಂದಿತ್ತು. ಹೀಗಾಗಿ ಚುನಾವಣೆ ಹೋರಾಟವೂ ತೀವ್ರವಾಗಿತ್ತು. ಈ ಗುರಿ ಸಾಧಿತವಾಗಿದೆಯೇ ಕರ್ನಾಟಕದ ಭವಿಷ್ಯವೇನು ಎಂಬುದನ್ನು ಫಲಿತಾಂಶಗಳ ನಂತರವೇ ವಿಶ್ಲೇಷಿಸಬಹುದು.


ಪ್ರಸಕ್ತವಾಗಿ ಒಟ್ಟು ರಾಜ್ಯದಲ್ಲಿ ಸರಾಸರಿಯಾಗಿ ಶೇ.62 ರಷ್ಟು ಮತದಾನವಾದ ವರದಿಗಳಿವೆ. ಮೈಸೂರು, ಮಲೆನಾಡು, ಕರಾವಳಿ, ಮುಂತಾದ ಕಡೆಗಳಲ್ಲಿ ಮತದಾನ 50ರ ಆಸುಪಾಸಿನಲ್ಲಿದೆ ಕೇವಲ ಮೊತ್ತ ಶೇ.70 ರಷ್ಟು ಆದ ವರದಿಗಳಿದ್ದು ಅಲ್ಲೆಲ್ಲಾ ಖೊಟ್ಟಿ ಮತದಾನದ ಆರೋಪಗಳೂ ಕೇಳಿಬಂದಿವೆ. ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಕಡಿಮೆ ಮತದಾನವಾದದ್ದು ಯಾಕೆ ಎಂದು ಯೋಚಿಸಬೇಕಾಗಿದೆ. ಪ್ರಜಾಸತ್ತಾತ್ಮಕ ಆಡಳಿತದ ಆಯ್ಕೆಯಲ್ಲಿ ಜನರ ಭಾಗವಹಿಸುವಿಕೆಗೆ ಮಹತ್ವವಿದೆಯಾದರೂ ಜನ ಯಾಕೆ ಮತ ನೀಡಲು ನಿರಾಸಕ್ತಿ ವಹಿಸಿದ್ದಾರೆ? ಹೀಗೆ ಮತದಾನದಿಂದ ದೂರವೇ ಉಳಿಯುವ ಮೂಲಕ ಜನತೆ ಆಳುವ ವರ್ಗಗಳ ಈ ಪಕ್ಷಗಳನ್ನು ಪರೋಕ್ಷವಾಗಿ ತಿರಸ್ಕರಿಸಿದ್ದಾರೆ. ಇದು ರಾಜಕೀಯ ಪಕ್ಷಗಳ ಬಗ್ಗೆ ಜನತೆಗಿರುವ ಅಸಹನೆಯ ಅಭಿವ್ಯಕ್ತಿಯಾಗಿದೆ. ಬಲಪಂಥೀಯ ಪಕ್ಷಗಳ ಆಡಳಿತವಿರುವಲ್ಲಿ ಹೀಗಿದ್ದರೆ ಎಡಪಕ್ಷಗಳ ನೇತೃತ್ವದ ಸರ್ಕಾರಗಳಿರುವ ಕೇರಳ, ಪಶ್ಚಿಮಬಂಗಾಳ, ತ್ರಿಪುರಾಗಳಲ್ಲಿ ಜನತೆಯ ಭಾಗಿತ್ವ ಅತ್ಯಧಿಕ. ಆಡಳಿತ, ಯೋಜನೆಯ ಪ್ರತಿ ಹಂತಗಳಲ್ಲಿಯೂ ಜನತೆಯನ್ನು ಬಲಪಂಥೀಯ ಸರ್ಕಾರಗಳು ದೂರವಿಟ್ಟಿದ್ದಾರೆ. ಎಡರಂಗಗಳು ಅಧಿಕಾರ ಇರುವಲ್ಲಿ ಜನರನ್ನು ಪ್ರತಿ ಹಂತದಲ್ಲಿಯೂ ಒಳಗೊಳ್ಳುವುದು, ರಾಜಕೀಯ ಪ್ರಜ್ಞೆ ಬೆಳೆಸುವುದು ಅಪಾರ ಜನಸ್ಪಂದನಕ್ಕೆ ಮುಖ್ಯವಾದ ಒಂದು ಕಾರಣ.

ಏನೆಲ್ಲಾ ನಿಯಮ ಹೇಳಿದರೂ ಈ ಬಾರಿಯೂ ವಿಪರೀತವಾದ ಚುನಾವಣಾ ಅಕ್ರಮಗಳು ನಡೆದಿರುವ ವರದಿಯಾಗಿವೆ. ಅಕ್ರಮ-ನಕಲಿ ಮತದಾನ, ಮತದಾನದ ವೇಳೆ ಹಿಂಸಾಚಾರ, ಘಟಿಸಿವೆ. ಮತದಾನ ಪೂರ್ವದಲ್ಲಿಯೂ ವಿಪರೀತವಾದ ಹಣ ಹಂಚಿಕೆ, ಹೆಂಡ ಸರಬರಾಜು ಅಲ್ಲದೇ ಸೀರೆ, ಟಿ.ವಿ. ಇತ್ಯಾದಿ ವಸ್ತುಗಳನ್ನು ನೀಡಿ ಆಮಿಷ ಒಡ್ಡಲಾಗಿದೆ. ವಿಶೇಷವಾಗಿ ಬಳ್ಳಾರಿ ಪಾಲಿಕೆ ಚುನಾವಣೆಯಲ್ಲಿ ಒಂದು ಮತಕ್ಕೆ ಸಾವಿರಾರು ರೂಪಾಯಿಗಳನ್ನು ನೀಡಿ ಮತ ಖರೀದಿಸಲು ಪ್ರಯತ್ನಿಸಲಾಗಿದೆ. ಬಿಜೆಪಿ ಶಾಸಕ ಜನಾರ್ಧನರೆಡ್ಡಿ, ಸಚಿವ ಶ್ರೀರಾಮುಲು ರವರೇ ಅಕ್ರಮವಾಗಿ ಹಂಚಲು ತಂದಿದ್ದ ಸೀರೆ ಬಟ್ಟೆಗಳನ್ನು ಮಾಲು ಸಮೇತ ಸಿಕ್ಕಿಬಿದ್ದಿವೆ. ಬಹಿರಂಗ ಕಾದಾಟಗಳು ನಡೆದಿವೆ. ನೆರೆಯ ರಾಜ್ಯದಿಂದ ರೌಡಿಗಳನ್ನು ಕರೆತಂದ ವರದಿಗಳಿವೆ. ಉಪ ಮುಖ್ಯಮಂತ್ರಿ ಯಡಿಯೂರಪ್ಪನವರ ಉಸ್ತುವಾರಿಯಲ್ಲಿ ಶಿವಮೊಗ್ಗದಲ್ಲಿ ಹೆಂಡ, ಹಣ ಇತ್ಯಾದಿ ಆಮಿಷ ಎಗ್ಗಿಲ್ಲದೇ ಹರಿಸಿದ ವರದಿಗಳಿವೆ. ಇವು ಕೆಲವು ಉದಾಹರಣೆಗಳು ಮಾತ್ರ. ಈ ಪಕ್ಷಗಳು ಪ್ರಕಟಿಸಿದ ಪ್ರಣಾಳಿಕೆ ಕಸದ ಬುಟ್ಟಿಗೆ ಸೇರಿದೆ.

ಇಂದು ಚುನಾವಣೆಯೆಂದರೆ ಅಪಾರ ಹಣ, ತೋಳ್ಬಲ ಎನ್ನುವಂತಾಗಿರುವುದು ದುರಂತ. ಈ ಕ್ರಮ ಪ್ರಜಾಸತ್ತಾತ್ಮಕ ಪದ್ಧತಿಯನ್ನು, ಇರುವ ಅವಕಾಶಗಳನ್ನು ಕುಗ್ಗಿಸುವ ಕ್ರಮಗಳಾಗಿವೆ. ವಿಶೇಷವಾಗಿ ನಗರ ಪಟ್ಟಣಗಳ ಪ್ರದೇಶಗಳಲ್ಲಿ ಭೂಮಿಗೆ ಅತ್ಯಧಿಕ ಬೇಡಿಕೆ ಇರುವುದರಿಂದಾಗಿ ಈ ಸಂಸ್ಥೆಗಳಲ್ಲಿ ಅಧಿಕಾರ ಹಿಡಿದರೆ ತಮ್ಮ ಭೂ ದಂಧೆ, ಭೂ ಕಬಳಿಕೆ ನಿರಾತಂಕವಾಗಿ ನಡೆಯಬಹುದೆಂದು ಕೆಲವರು ಭಾವಿಸಿರುವುದು ಬಹಳಷ್ಟು ಕಡೆಯ ವಾಸ್ತವ. ಇಂಥಹವರೇ ಆರಿಸಿಬಂದರೆ ಜನತೆಯ ಸ್ಥಿತಿ ಹೇಗಾದೀತು. ಜನತೆಯ ಪ್ರಶ್ನೆಗಳ ಆಧಾರದಲ್ಲಿ ಅಥವಾ ಅವರು ಮಾಡಿದ ಕೆಲಸಗಳ ಆಧಾರದಲ್ಲಿ ಮತ ಕೇಳಲು ಮುಖವಿಲ್ಲದವರು ಆಮಿಷಗಳಿಂದ ಅಧಿಕಾರ ಹಿಡಿಯಲು ಹವಣಿಸುತ್ತಿರುವ ದಾಗಿದೆ. ಇದರಲ್ಲಿ ಅಕ್ರಮ ಮಾರ್ಗಗಳಿಂದ ಸಂಗ್ರಹಿಸಿದ ಹಣವೇ ಇಲ್ಲಿ ಪ್ರಧಾನ ವಾಗಿದೆ. ಇಂತಹವುಗಳಿಗೆ ನಿರ್ಬಂಧ ವಿಧಿಸಿರುವುದಾಗಿ ಚುನಾವಣಾ ಆಯೋಗ ಹೇಳಿಕೊಂಡರೂ, ಕಡಿವಾಣ ಹಾಕದೇ ವಿಫಲವಾಗಿರುವುದು ಸಹ ಗಮನಾರ್ಹವೇ.

ಇಂತಹ ಅನೇಕ ನಕಾರಾತ್ಮಕ ಅಂಶಗಳಿದ್ದರೂ ಆಡಳಿತ ವಿಕೇಂದ್ರೀಕರಣದ ಹಾದಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಿರುವುದು ಸ್ವಾಗತಾರ್ಹ. ಈ ಚುನಾವಣೆಯಲ್ಲಿ ಗಂಭೀರವಾದ ಫಲಿತಾಂಶವನ್ನು ಜನತೆಯಿಂದ ನಿರೀಕ್ಷಿಸಬಹುದು.

ಮೈತ್ರಿಕೂಟದಲ್ಲಿ ಮುಷ್ಠಿಯುದ್ಧ



ಅಕ್ಟೋಬರ್ 3, ಅದು 'ಜಾತ್ಯಾತೀತ-ಕೋಮುವಾದಿಗಳ' ಮೈತ್ರಿಕೂಟದ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರ ಅವಧಿ ನಿಗದಿಯಾಗಿರುವಂತೆ ಮುಗಿಯಬೇಕಾದ ದಿನ. ನಂತರ ಮೈತ್ರಿಕೂಟದ ಇನ್ನೊಂದು ಭಾಗೀದಾರ ಬಿಜೆಪಿಗೆ ಆ ಸ್ಥಾನ ಬಿಡಬೇಕೆಂಬ ಒಪ್ಪಂದ. ಹೌದು, ಇನ್ನೇನು ಗಡುವಿನ ದಿನ ಮುಟ್ಟಲು ಕೈಚಾಚಿದರೆ ಸಾಕಾದೀತು? ಆದರೆ ಇಂದಿನ ವಿದ್ಯಮಾನಗಳನ್ನು ಗಮನಿಸಿದರೆ ಅದು ಅಷ್ಟು ಸುಲಭದ ಕೆಲಸವೇನಲ್ಲ ಎನ್ನಿಸುತ್ತದೆ. ಮೈತ್ರಿಕೂಟದ ಪಕ್ಷಗಳೊಳಗೆ ಸಂಘರ್ಷ ತಾರಕ ಸ್ವರೂಪಕ್ಕೆ ತಿರುಗುತ್ತಿದೆ. ಸಂಪುಟದ ಸಚಿವನೇ ಮುಖ್ಯಮಂತ್ರಿಗಳ ಮೇಲೆ ತನ್ನನ್ನು ಕೊಲೆ ಮಾಡಿಸಲು ಭಾಗಿಯಾಗಿದ್ದಾರೆಂದು ಎಂದು ಆರೋಪಿಸಿರುವುದು ಆಸ್ಫೋಟಕ ಸಂಗತಿಯೀಗ!

ಅಂತರ?

ಈ ಕೆಲವು ತಿಂಗಳ ಹಿಂದೆಯೇ ಆರಂಭಗೊಂಡ ಈ ಸಂಘರ್ಷ ನಗರಸಭೆ, ಮಹಾನಗರ ಪಾಲಿಕೆ ಮುಂತಾದ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂದರ್ಭದಲ್ಲಿ ತೀಕ್ಷ್ಣಗೊಂಡವು. ಈಗಾಗಲೇ ಕೋಮುವಾದಿ ಬಿಜೆಪಿಯೊಂದಿಗೆ ಮಾಡಿಕೊಂಡ ಅಧಿಕಾರ ಮೈತ್ರಿಯಿಂದಾಗಿ ಜೆಡಿ(ಎಸ್)ನ ಜಾತ್ಯಾತೀತೆಯ ಸ್ವರೂಪ, ಕಲ್ಪನೆಯೇ ವಿಕೃತಗೊಂಡಿತು. ಮಾತ್ರವಲ್ಲ ಅನೇಕ ಪ್ರಗತಿಪರರು, ಬಿಜೆಪಿ-ಕಾಂಗ್ರೆಸ್‌ಗೆ ವಿರೋಧವಾಗಿದ್ದವರು, ಅಲ್ಪಸಂಖ್ಯಾತರು ಗಳ ಬೆಂಬಲವನ್ನು ಜೆಡಿ(ಎಸ್) ಕಳೆದುಕೊಳ್ಳಬೇಕಾಯ್ತು. ಚಾಮುಂಡೇಶ್ವರಿ, ಹಾಗೂ ಉಳ್ಳಾಲ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಇದರ ಕಹಿ ಫಲವನ್ನು ಜೆಡಿ(ಎಸ್) ಅನುಭವಿಸಿತು. ವಿಶೇಷವಾಗಿ ಪಟ್ಟಣ-ನಗರ ಪ್ರದೇಶಗಳಲ್ಲಿ ಹೆಚ್ಚಾಗಿರುವ ಅಲ್ಪಸಂಖ್ಯಾತರು ಈಗಲೂ ದೂರ ಸರಿಯುವ ಭಯ ಅದಕ್ಕೆ ಒಂದೆಡೆ, ಇನ್ನೊಂದಡೆ ಬಿಜೆಪಿಯೊಂದಿಗೆ ತಾತ್ಕಾಲಿಕವಾದರೂ ಚುನಾವಣಾ ಮೈತ್ರಿ, ಏರ್ಪಟ್ಟಲ್ಲಿ ಒಂದು ವೇಳೆ ಕೆಲವು ಸ್ಥಾನ ಸಿಗಬಹುದಾದರೂ (ಅದು ಅಷ್ಟು ಸುಲಭವಲ್ಲ ನಿಜ ಆದರೂ...) ಅಂತಿಮವಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಆತಂಕವು ಇತ್ತು. ಹೀಗಾಗಿ ತಾಂತ್ರಿಕ ಕಾರಣಗಳಿಗಾದರೂ ಬಿಜೆಪಿಯಿಂದ ಅಂತರವನ್ನು ಕಾಪಾಡಿಕೊಳ್ಳುವುದು ಅದಕ್ಕೆ ಅನಿವಾರ್ಯ ಅಗತ್ಯವೂ ಆಗಿತ್ತು. ಮುಖ್ಯಮಂತ್ರಿ ಸ್ಥಾನ ಬಿಡುವ ಸಂದರ್ಭಕ್ಕಂತೂ ಈ ಅಂತರ ಇದು ಹೊಸ ಸ್ವರೂಪವನ್ನು ಪಡೆಯದೇ ಇರಲಿಲ್ಲ ಹಾಗೇ ಉಳಿಯಲು ಸಾಧ್ಯವಿರಲಿಲ್ಲ.



ಸಚಿವ ಶ್ರೀರಾಮುಲು ಪೋಲಿಸ್ ಅಧಿಕಾರಿ ಕಾಲು ಹಿಡಿದಿದ್ದು - ನಾಟಕದ ಒಂದಂಕ

ಸಚಿವನಿಂದಲೇ ಮುಖ್ಯಮಂತ್ರಿ ಮೇಲ ದೂರು

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ತಮ್ಮ ನೆಲೆ ಬಲ ಹೆಚ್ಚಿಸಿಕೊಳ್ಳುವ ತೀವ್ರ ಹಣಾಹಣಿ ಎಲ್ಲಾ ಪಕ್ಷಗಳ ನಡುವೆ ಏರ್ಪಟ್ಟಿದ್ದಿತು. ಇದು ಮುಂದಿನ ಚುನಾವಣೆಗಳಿಗೆ ತಾಲೀಮಿನಂತೆಯೂ ಪರಿಗಣಿತವಾಯಿತು. ಮತ ಸೆಳೆಯುವ ಅಕ್ರಮ ವಿಧಾನಗಳು ಗರಿಗೆದರಿದವು. ಇದರ ಮೇರು ಸ್ವರೂಪ ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಕಂಡಿತು. ಕೆಡಿಎಫ್ ಮೈತ್ರಿ ಕೂಟದ ಎರಡು ಪಕ್ಷಗಳ ನಡ್ಡುವೆಯೇ ತೀವ್ರ ಪೈಪೋಟಿ ಏರ್ಪಟ್ಟಿತು. ಇದರಲ್ಲಿ ಬಿಜೆಪಿಯ ಗಣಿ ಹಗರಣದ ಜನಾರ್ಧನ ರೆಡ್ಡಿ, ಅವರ ಬಂಟ ಸಚಿವ ಶ್ರೀರಾಮುಲು, ಜೆಡಿ(ಎಸ್) ಮೇಲೆ ಮೇಲುಗೈ ಸಾಧಿಸಲು ಹಣಬಲ- ತೋಳ್ಬಲ ಯಥೇಚ್ಛ ಬಳಸಿದರು. ಇದನ್ನು ವಿರೋಧಿಸಿದವರ ಮೇಲೆ ಹರಿಹಾಯ್ದರು. ಸಚಿವರು ತಮ್ಮ ಅಂಗರಕ್ಷಕರಿಂದಲೇ ಗುಂಡು ಹಾರಿಸಿ ತಮ್ಮನ್ನು ಕೊಲ್ಲಲು ಯತ್ನಿಸಲಾಯಿತು ಎಂದು 'ಸನ್ನಿವೇಶ ಸೃಷ್ಟಿಸಿ' ದೂರನ್ನು ದಾಖಲಿಸಿದರು. ಮುಖ್ಯಮಂತ್ರಿಗಳೇ ಇದಕ್ಕೆ ಹೊಣೆಯೆಂದು ಬಹಿರಂಗವಾಗಿ ಆರೋಪಿಸಿ ಅವರ ಮೇಲೂ ದೂರು ನೀಡಲಾಗಿದೆ. ಸಂಪುಟದ ಸಹೋದ್ಯೋಗಿಯೇ ಮುಖ್ಯಮಂತ್ರಿಗಳ ಮೇಲೆ ಇಂತಹ ಆರೋಪ ಹೊರೆಸಿದ್ದು ಒಂದು ವಿಚಿತ್ರವಾದ ಪ್ರಸಂಗವೇ ಆಗಿದೆ. ರಾಷ್ಟ್ರದಲ್ಲಿ ಇದು ಮೊದಲು ಎಂದೂ ಹೇಳಲಾಗುತ್ತಿದೆ. ಇದು ಸಹಜವಾಗಿಯೇ ಕುಮಾರಸ್ವಾಮಿ ಹಾಗೂ ಜೆಡಿ(ಎಸ್) ನಾಯಕರಾದ ದೇವೆಗೌಡರನ್ನು ಕೆರಳಿಸಿದೆ. ಅಧಿಕಾರ ವರ್ಗಾವಣೆಯ ಪೂರ್ವಭಾವಿ ಮಾತುಕತೆಗೆಂದು ದೆಹಲಿಗೆ ತೆರಳಿದ್ದ ದೇವೇಗೌಡರು ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥಸಿಂಗ್‌ರನ್ನು ಭೇಟಿ ಮಾಡದೇ ಪ್ರತಿಭಟಿಸಿ ವಾಪಸ್ಸು ಬಂದರು. ಇದಾದ ಬಳಿಕ ಬಿರುಸಿನ ವಾಗ್ದಾಳಿಗಳು ನಡೆದಿವೆ. ಈ ಅವಧಿಯ ಕೊನೆಯಲ್ಲಿ 'ತಮಗೆ ಮಿತ್ರ ಪಕ್ಷ ನೀಡಿದ ಮರೆಯಲಾಗದ ಕಾಣಿಕೆ' ಎಂದು ಕುಮಾರಸ್ವಾಮಿ ಹೇಳಿದ್ದಾರೆ, 3 ರಂದು ರಾಜೀನಾಮೆ ನೀಡುವುದಿಲ್ಲ ಶಾಸಕರ ಸಭೆಯಲ್ಲಿ ನಿರ್ಧರಿಸುವುದಾಗಿ ಹೇಳಿರುವುದು ವಿಷಯವನ್ನು ಒಂದು ಹೆಜ್ಜೆ ಮುಂದಕ್ಕೆ ಒಯ್ದಿದೆ.

ಬಾಯಿ ಮುಚ್ಚಿರುವುದು ಯಾಕೆ?

ವಿಶೇಷವೆಂದರೆ, ಇಷ್ಟೆಲ್ಲಾ ಬಳ್ಳಾರಿ ಪ್ರಸಂಗ ನಡೆಯುತ್ತಿರುವಾಗ ಬಿಜೆಪಿ ನಾಯಕರು ವಹಿಸಿದ ಪಾತ್ರ! ಮೈತ್ರಿಕೂಟದ ಮುಖ್ಯಮಂತ್ರಿಗಳ ಮೇಲೆಯೇ ಶತೃಭಾವದ ಧಾಳಿಯನ್ನು ಬಳ್ಳಾರಿ ಬಿಜೆಪಿ ನಾಯಕರು ನಡೆಸಿದಾಗ ಅದನ್ನು ತಹಬಂದಿಗೆ ತರಲು ಕಿಂಚಿತ್ತೂ ಕ್ರಮವಹಿಸಲಿಲ್ಲ ಮಾತ್ರವಲ್ಲ ಸ್ವತಃ ಬಿಜೆಪಿ ಅಧ್ಯಕ್ಷ ಸದಾನಂದಗೌಡರೇ ಬಳ್ಳಾರಿ ಅಕ್ರಮ-ಹಗರಣ ಗೊತ್ತಿದ್ದೂ ಚುನಾವಣೆಯ ಆಯೋಗಕ್ಕೆ ದೂರು ನೀಡಿ ಸಮರ್ಥಿಸಿಕೊಂಡರು, ಇಲ್ಲಿಯವರೆಗೂ ಬಿಜೆಪಿ ಯಾವ ನಾಯಕರೂ ರೆಡ್ಡಿ-ಶ್ರೀರಾಮುಲು ಕ್ರಮಗಳನ್ನು ಕನಿಷ್ಟ ತಪ್ಪು ಎಂದೂ ಹೇಳಿಲಿಲ್ಲ. ಸರಿಪಡಿಸಲೂ ಮುಂದಾಗಲಿಲ್ಲ. ಅಂದರೆ ಕಾದಾಟಕ್ಕೆ ಸಮ್ಮತಿ ಇದೆಯೆಂದು ಅರ್ಥವಲ್ಲವೇ? ಅಥವಾ ಜನಾರ್ಧನರೆಡ್ಡಿಯವರ 'ಕೈ' ಬಿಜೆಪಿ ನಾಯಕರ ಬಾಯಿ ಮುಚ್ಚುವಷ್ಟು ದೊಡ್ಡದೇ?

ಏನಾದೀತು?

ಇಂತಹ ಸ್ಥಿತಿಯಲ್ಲಿ ಕೇಂದ್ರ ಬಿಜೆಪಿ ನಾಯಕ ಯಶವಂತ ಸಿನ್ಹಾ ಅಧಿಕಾರ ವರ್ಗಾವಣೆಯ ಪೂರ್ವ ಪ್ರಕ್ರಿಯೆಗಾಗಿ ಬೆಂಗಳೂರಿಗೆ ಬಂದಿಳಿದಿದ್ದಾರೆ. ಈ ಬೆಳವಣಿಗೆಗಳಿಂದ ತೀವ್ರ ಘಾಸಿಗೊಂಡಂತಿರುವ ದೇವೇಗೌಡರು ಒಂದು ತೀರ್ಮಾನಕ್ಕೆ ಬಂದಿದ್ದಾರೆ ಎಂದೂ ಹೇಳಲಾಗುತ್ತಿದೆ. ಹೀಗಾಗಿ ಹಸ್ತಾಂತರವಾಗಲಿದೆಯೇ, ವಿಧಾನಸಭೆ, ವಿಸರ್ಜಿಸಲಾಗುವುದೇ, ಅಥವಾ ಒಪ್ಪಂದ ಜಾರಿಯಾದರೂ ಸರ್ಕಾರ ಎಷ್ಟು ದಿನ? ಇವೆಲ್ಲ ಪ್ರಶ್ನೆಗಳು ಸುತ್ತುತ್ತಿವೆ. ಕೊನೆಗೆಂದು ಮಾತು ಬಿಜೆಪಿಗೆ ಅಧಿಕಾರ ಹಸ್ತಾಂತರ ಆಗದಂತೆ ಈಗಲೂ ಜೆಡಿ(ಎಸ್) ಮೈತ್ರಿಯಿಂದ ಹೊರಬಂದಿತೇ? ○

ಮಾಧ್ಯಮ ವ್ಯಕ್ತಿಗಳಿಗೆ ಶಿಕ್ಷೆ

ತಪ್ಪು ಎಂದರೆ ನಿಂದನೆಯಾಗುತ್ತದೆಯೇ?

ಇತ್ತೀಚೆಗೆ ನಾಲ್ಕು ಮಾಧ್ಯಮ ವ್ಯಕ್ತಿಗಳಿಗೆ ನ್ಯಾಯಾಲಯ ನಿಂದನೆ ಮಾಡಿದ್ದಾರೆಂದು ದಿಲ್ಲಿ ಹೈಕೋರ್ಟ್ ಶಿಕ್ಷೆ ವಿಧಿಸಿತು. ಈ ಘಟನೆ ಹಲವೆಡೆ ಗಂಭೀರ ಆತಂಕಗಳನ್ನು ಉಂಟು ಮಾಡಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಒಂದು ಹಲ್ಲೆಯಲ್ಲವೇ ಎಂದು ಕೆಲವರು ಪ್ರಶ್ನಿಸಿದ್ದಾರೆ.

ಹಿಂದೆ ಸುಪ್ರಿಂಕೋರ್ಟ್ ಮುಖ್ಯ ನ್ಯಾಯಾಧೀಶರಾಗಿದ್ದ ಸಬರ್‌ವಾಲ್ ಮೇಲೆ 'ನ್ಯಾಯಾಂಗ ಜವಾಬುದಾರಿಕೆ ಮತ್ತು ನ್ಯಾಯಾಂಗ ಸುಧಾರಣೆ ಪ್ರಚಾರಾಂದೋಲನ' ಕೆಲವು ತಿಂಗಳಿಂದೆ ಕೆಲವು ಆಪಾದನೆಗಳನ್ನು ಮಾಡಿತ್ತು. ನಿವೃತ್ತಿಯಾದ ನಂತರ ಸಬರ್‌ವಾಲ್‌ರವರು ಇದನ್ನು ಮುದ್ರಣ ಮಾಧ್ಯಮದಲ್ಲಿ ಅಲ್ಲಗಳೆದಿದ್ದರು. ಆದ್ದರಿಂದ ಈ ಆಪಾದನೆಗಳ ಸತ್ಯಾಸತ್ಯತೆಯನ್ನು ಒಂದು ವಿಚಾರಣೆ ಅಥವಾ ಮಾನನಷ್ಟ ಮೊಕದ್ದಮೆಯ ಮೂಲಕ ನಿರ್ಧರಿಸಬಹುದಾಗಿತ್ತು. ಆದರೆ ಹೀಗೆ ಮಾಡದೆ ದಿಲ್ಲಿ ಹೈಕೋರ್ಟ್ ತಾನೇ ಸುಪ್ರೀಂಕೋರ್ಟ್‌ನ್ನು ರಕ್ಷಿಸುವ ಜವಾಬ್ದಾರಿ ವಹಿಸಿಕೊಂಡು ನಾಲ್ವರು ಮಾಧ್ಯಮ ವ್ಯಕ್ತಿಗಳಿಗೆ ನಾಲ್ಕು ತಿಂಗಳ ಶಿಕ್ಷೆ ವಿಧಿಸಿದೆ. ಮಾಜಿ ಮುಖ್ಯ ನ್ಯಾಯಾಧೀಶರ ಮೇಲಿನ ಆಪಾಧನೆಗಳು ನಿಜವೋ ಅಲ್ಲವೋ ಎಂಬುದನ್ನಲ್ಲಿ ಪರಿಶೀಲಿಸಬೇಕಾಗಿಲ್ಲ. ಏಕೆಂದರೆ ಆ ಮೂಲಕ ಸುಪ್ರೀಂಕೋರ್ಟ್‌ನ ಮೇಲೆ ಟೀಕೆಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅದು ತನ್ನ ತೀರ್ಪಿನಲ್ಲಿ ಹೇಳಿದೆ.

ಇಲ್ಲಿ ಎರಡು ಕಾರಣಗಳಿಂದಾಗಿ ಸಮಸ್ಯೆಗಳು ಉಂಟಾಗಿವೆ ಎಂಬುದು ಪರಿಣಿತರ ಅಭಿಪ್ರಾಯ. ಮೊದಲನೆಯದಾಗಿ, ಭಾರತ ಸಂವಿಧಾನ ಹೈಕೋರ್ಟಿಗೆ ತನ್ನ ವಿರುದ್ಧ ನಿಂದನೆಯನ್ನು ಪರಿಶೀಲಿಸುವ ಅಧಿಕಾರ ನೀಡಿದೆ. ಆದರೆ ಇಲ್ಲಿ ದಿಲ್ಲಿ ಹೈಕೋರ್ಟ್ ತನ್ನ ಪರಿಧಿಯನ್ನು ಮೀರಿದೆ ಏಕೆಂದರೆ ಸುಪ್ರಿಂಕೋರ್ಟ್‌ಗೆ ಮಾತ್ರ ಅದರ ವಿರುದ್ಧ ಟೀಕೆಯನ್ನು ಪರಿಶೀಲಿಸಲು ಅಧಿಕಾರ ಇದೆ. ಎರಡನೆಯದಾಗಿ, 2006ರಲ್ಲಿ ನ್ಯಾಯಾಲಯ ನಿಂದನೆ ಕಾನೂನಿಗೆ ಒಂದು ತಿದ್ದುಪಡಿ ತರಲಾಗಿತ್ತು. ಅದರಲ್ಲಿ ನ್ಯಾಯಾಲಯ ನಿಂದನೆ ಮೊಕದ್ದಮೆಗಳನ್ನು ಸತ್ಯ ಸಂಗತಿಗಳನ್ನು ರಕ್ಷಣೆಯಾಗಿ ಬಳಸಲು ಅವಕಾಶ ನೀಡಲಾಗಿತ್ತು. ಮುಖ್ಯ ನ್ಯಾಯಾಧೀಶರ ಮೇಲೆ ಆಪಾದನೆ ಮಾಡಿರುವವರು ಇದಕ್ಕೆ ತಮ್ಮ ಬಳಿ ಪುರಾವೆಗಳಿವೆ ಎಂದಿದ್ದರು. ಆದರೆ ಅದನ್ನು ಪ್ರಸ್ತಾಪಪಡಿಸಲು ಅವಕಾಶವಿರಲಿಲ್ಲ.



ವಿಷಾದವೇನೂ ಇಲ್ಲದೆ ಶಿಕ್ಷೆ ಅನುಭವಿಸಲು ತೆರಳುತ್ತಿರುವ 'ಮಿಡ್ ಡೇ' ಪತ್ರಿಕೆಯ ಪತ್ರಕರ್ತರು

ಈಗ ಈ ವಿವಾದ ಸರ್ವೋಚ್ಚ ನ್ಯಾಯಾಲಯದ ಮುಂದಿದೆ. ಇಲ್ಲಿ ಕೆಲವು ವರ್ಷಗಳ ಹಿಂದೆ ನ್ಯಾಯಾಂಗ ವ್ಯವಸ್ಥೆಯ ಕೆಲವು ಪ್ರಗತಿಪರ, ಪ್ರಜಾಪ್ರಭುತ್ವವಾದಿಗಳು ನಡೆಸಿದ ಒಂದು ವಿಚಾರ ಸಂಕಿರಣವನ್ನು ನೆನಪಿಸಿಕೊಳ್ಳಬಹುದು. 'ನ್ಯಾಯಾಧೀಶರ ಬಗ್ಗೆ ತೀರ್ಪು' ಎಂಬ ಈ ವಿಚಾರ ಸಂಕಿರಣದಲ್ಲಿ ನ್ಯಾಯಾಲಯ ನಿಂದನೆಯ ಸಂದರ್ಭಗಳು ಪ್ರಶ್ನೆಗಳ ಬಗ್ಗೆ ಚರ್ಚಿಸಲಾಗಿತ್ತು. ನ್ಯಾಯಾಧೀಶರ ವರ್ತನೆಯನ್ನು ಪ್ರಶ್ನಿಸಿದರೆ ಅದು ಅವರ ಸಮಗ್ರತೆಯನ್ನು ಪ್ರಶ್ನಿಸುವಂತೆ ಎಂದೇನೂ ಭಾವಿಸಬೇಕಾಗಿಲ್ಲ. ನಿಜ, ನ್ಯಾಯಾಧೀಶರೂ ತಪ್ಪು ಮಾಡಬಹುದಲ್ಲವೇ ಎಂದು ಪ್ರಶ್ನಿಸಿದಂತಾಗುತ್ತದೆ. ಇದರಲ್ಲಿ ತಪ್ಪೇನೂ ಇಲ್ಲವಲ್ಲ ಎಂಬ ಅಭಿಪ್ರಾಯ ಆ ವಿಚಾರ ಸಂಕಿರಣದಲ್ಲಿ ಬಂದಿತ್ತು. ನ್ಯಾಯಾಂಗ ವರ್ತನೆಯನ್ನು ಪ್ರಶ್ನೆಯನ್ನು ಉತ್ತರದಲ್ಲಿ ಕೆಲವು ಪರಿಮಿತಿಗಳನ್ನು ಹಾಕಬಹುದು, ಆದರೆ ಹಾಗೆ ಎತ್ತಲೇಬಾರದು ಎನ್ನುವುದು ಸರಿಯಾಗುತ್ತದೆಯೇ. ಯಾವುದೇ ರೀತಿಯಲ್ಲಿ ನ್ಯಾಯಾಂಗದ ಅಧಿಕಾರ ಅಭಿವ್ಯಕ್ತಿ ಸ್ವಾತಂತ್ರ್ಯ ವನ್ನು ಹರಣ ಮಾಡಲು ಬಿಡಬಾರದು ತಾನೇ ಎಂದು ಹಲವರು ಪ್ರಶ್ನಿಸಿದ್ದರು.

1970ರ ದಶಕದಲ್ಲಿ ಇ.ಎಂ.ಎಸ್. ನಂಬೂದರಿಪಾಡ್‌ರವರು ನ್ಯಾಯಾಧೀಶರಲ್ಲೂ ಒಂದು ವರ್ಗ ಪಕ್ಷಪಾತವಿದೆ ಎಂದುದನ್ನು ನ್ಯಾಯಾಲಯ ನಿಂದನೆ ಎಂದು ಪರಿಗಣಿಸಲಾಗಿತ್ತು. ನಂತರ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಕಾನೂನು ಮಂತ್ರಿ ಪಿ.ಶಾಂತಶಂಕರ್ ಮೇಲೂ ಇಂತಹ ಆಪಾದನೆ ಹಾಕಲಾಗಿತ್ತು. ನ್ಯಾಯಾಲಯಗಳು ಮುಷ್ಕರಗಳನ್ನು ಮತ್ತು ಪ್ರಜಾಸತ್ತಾತ್ಮಕ ಪ್ರತಿಭಟನೆಗಳ ಅಭಿವ್ಯಕ್ತಿಗಳನ್ನು ನಿಷೇಧಿಸಿವೆ, ಕಾರ್ಮಿಕ ವರ್ಗಕ್ಕೆ ಕೆಲ ಸಂದರ್ಭದಲ್ಲಿ 'ಕೆಲಸ ಮಾಡದಿದ್ದರೆ ಸಂಬಳ ಇಲ್ಲ' ಎಂಬ ನೀತಿಯನ್ನು ಉಚ್ಚರಿಸಿದೆ. ಆದರೆ ಇತ್ತೀಚೆಗೆ ಓಬಿಸಿಗಳಿಗೆ ಮೀಸಲಾತಿಯನ್ನು ವಿರೋಧಿಸಿ ದಿಲ್ಲಿಯ ವೈದ್ಯರುಗಳು ಮುಷ್ಕರ ನಡೆಸಿ ರೋಗಿಗಳ ಸಂಕಟಗಳನ್ನು ಹೆಚ್ಚಿಸಿದ್ದರೂ ಮುಷ್ಕರದ ಅವಧಿಯ ಅವರ ಸಂಬಳಗಳನ್ನು ಮುರಿದು ಕೊಳ್ಳಬಾರದು ಎಂದು ನ್ಯಾಯಾಲಯ ನಿರ್ದೇಶನ ನೀಡಿತು. ಇಂತಹ ಅಸಂಗತತೆಗಳು ಜಾತಿ, ವರ್ಗ ಪಕ್ಷಪಾತವನ್ನು ತೋರಿಸುವುದಿಲ್ಲವೇ? ಅದನ್ನು ಹೇಳಿದರೆ ನ್ಯಾಯಾಲಯ ನಿಂದನೆ ಎಂದು ಪರಿಗಣಿಸಬಹುದೇ?

ಸ್ವತಃ ಸುಪ್ರಿಂಕೋರ್ಟ್‌ನ ಒಂದು ಪೀಠ ಈ ಬಗ್ಗೆ ಟಿಪ್ಪಣಿ ಮಾಡಿರುವುದನ್ನು ಗಮನಿಸುವುದು ಒಳ್ಳೆಯದು. ನ್ಯಾಯಮೂರ್ತಿ ಆರ್.ವಿ.ರವೀಂದ್ರನ್ ಮುಖ್ಯಸ್ಥರಾಗಿದ್ದ ಈ ಪೀಠ ಇಂತಹ (ನಿಂದನೆಯ) ಅಧಿಕಾರದ ಚಲಾವಣೆ ನ್ಯಾಯಾಲಯಗಳ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನು ಮೂಡಿಸುವ ಬದಲು ಅದಕ್ಕೆ ಹಾನಿಗೊಳಿಸುತ್ತದೆ ಎಂಬುದನ್ನು ಗಮನಿಸಬೇಕು ಎಂದಿತ್ತು. ಇತರ ಎಲ್ಲರಂತೆ ನ್ಯಾಯಾಧೀಶರೂ ಕೂಡ ಗೌರವವನ್ನು ಸಂಪಾದಿಸಬೇಕೇ ವಿನಃ ತಮ್ಮ ಅಧಿಕಾರ ಬಳಸಿ ಅದನ್ನು ಗಿಟ್ಟಿಸಬಾರದು ಎಂದೂ ಅದು ಹೇಳಿತ್ತು.

ಇವನ್ನೆಲ್ಲಾ ಈಗ ಮತ್ತೆ ಗಮನಿಸಬೇಕು ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳ ಅಭಿಪ್ರಾಯ. ಮಾಜಿ ಮುಖ್ಯ ನ್ಯಾಯಾಧೀಶ ಸಬರ್‌ವಾಲ್‌ರವರು ತಮ್ಮ ಕ್ರಿಯೆಗಳನ್ನು ಸಾರ್ವಜನಿಕವಾಗಿ ಸಮರ್ಥಿಸಿಕೊಂಡಿದ್ದಾರೆ. ಸಂಬಂಧಪಟ್ಟ ಮಾಧ್ಯಮದ ವಕ್ತಾರರು ತಾವು ಮಾಡಿರುವ ಆಪಾದನೆಗಳನ್ನು ಸಾಬೀತುಪಡಿಸುವವರಿದ್ದಾರೆ. ಆದ್ದರಿಂದ ಸತ್ಯ ಏನು ಎಂಬುದನ್ನು ಸ್ಥಾಪಿಸಲು ಒಂದು ಸೂಕ್ತ ವಿಚಾರಣೆ ನಡೆಯಲಿ ಎಂಬುದು ಪ್ರಜಾಪ್ರಭುತ್ವವಾದಿಗಳ ಆಶಯ. ಈ ಹಿಂದೆ ನಾಗರೀಕರ ಹಕ್ಕುಗಳನ್ನು ರಕ್ಷಿಸಿ, ವಿಸ್ತರಿಸಿ ಹಾಗೂ ಕಾರ್ಯಾಂಗದ ಅವರ ಉಪಯೋಗವನ್ನು ತಪ್ಪಿಸಿ ದೇಶಕ್ಕೆ ಸೇವೆ ಸಲ್ಲಿಸಿರುವ, ಮುಂದೆಯೂ ಸಲ್ಲಿಸಲಿರುವ ನ್ಯಾಯಾಂಗದ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಬಲಗೊಳಿಸುತ್ತವೆ ಎಂಬುದು ಪ್ರಜಾಪ್ರಭುತ್ವವಾದಿಗಳ ಅಭಿಪ್ರಾಯ.

ಈಗ ಸುಪ್ರೀಂ ಕೋರ್ಟ್ ದೆಹಲಿ ಹೈಕೋರ್ಟ್ ತೀರ್ಪಿಗೆ ತಡೆಯಾಜ್ಞೆ ನೀಡಿದ ವರದಿ ಬಂದಿದೆ.

■ ಕೆ.ವೇದರಾಜ್

ರಾಮನ ಕಡೆಯವರೋ, ರಾವಣನ ಕಡೆಯವರೋ ?

ವಿ. ಶ್ರೀನಿವಾಸ

"ಛೇ ನೋಡ್ಲ ಎಂತ ಅನಾವುತ ಮಾಡ್ತಾವ್ರಂತೆ" ಎಂದ ನಾಣಿ,

"ಏನ್ಲಾ ಅದು ಅನಾವುತ?" ಕೇಳಿದ ವೆಂಕ.

"ರಾಮನ ಸೇತುವೆ ಕೆಡವಿ ಹಾಕ್ತಾರಂತೆ ಕಣ್ಲಾ" ಎಂದ ನಾಣಿ

"ಯಾರ್ಲ ಅದು ಕೆಡವಿ ಹಾಕೋರು?" ಎಂದು ಕೇಳಿದ ವೆಂಕ.

"ರಾವಣನ ಕಡೆಯೋರಂತೆ ಕಣ್ಲಾ" ಎಂದ ನಾಣಿ.

"ಯಾವ ರಾವಣ ನೀನೇಳ್ತಿರೋದು"? ಕೇಳಿದ ವೆಂಕ.

"ಇದೇನ್ಲ ವೆಂಕ ರಾತ್ರಿಯೆಲ್ಲ ರಾಮಾಯಣ ಕೇಳಿ ರಾಮಂಗೂ ಸೀತೆಗೂ ಏನು ಸಂಬಂಧ ಅಂದಂಗೆ ಯಾವ ರಾಮ ಯಾವ ರಾವಣ ಅಂತ ಕೇಳ್ತಿದೀಯಲ್ಲ, ರಾಮಾಯಣದ ರಾಮ ರಾವಣ ಕಣ್ಲಾ" ಎಂದ ನಾಣಿ.

"ಔದಾ ಏನು ಸೇತುವೆ ಮೇಲೆ ಜನ ಈಗ್ಲೂ ಓಡಾಡ್ತಾರಾ?" ಎಂದ ವೆಂಕ.

"ಔದಂತೆ ಯಾವಾಗ್ಲೂ ಟ್ರಾಫಿಕ್ ಜಾಮಂತೆ" ಎಂದ ನಾಣಿ.

ಲೇ..ಲೇ ಸರ್‍ಯಾಗಿ ಇಸ್ಯಾ ಗೊತ್ತಿಲ್ದೆ ಬಾಯಿಗೆ ಬಂದಂತೆ ಮಾತಾಡ್‌ಬೇಡಿ ಸುಮ್ಗೆ ಬಾಯ್ ಮುಚ್‌ಕಂಡು ಕುತ್ಕಳ್ಳಿ' ಎಂದು ಅಲ್ಲಿಗೆ ಬಂದ ಸೀನ.

"ಯಾಕ್ಲ ಸೀನ? ಏನ್ಲಾ ತಪ್ಪು?" ಎಂದರು ಇಬ್ಬರೂ.

"ಆ ಸೇತುವೆ ಮೇಲೆ ಜನ ಓಡಾಡಕಿಲ್ಲ ಕಣ್ರಲಾ. ಅದು ಇರಾದು ಸಮುದ್ರದ ಒಳಗೆ" ಎಂದ ಸೀನ.

"ಔದಾ ನಾನೆಲ್ಲೋ ರಾಮನ ಕಡೆಯೋರು ಆದ್ರು ಮೇಲೆ ಓಡಾಡ್ತಾರೆ ಅಂದ್ಕೊಂಡಿದ್ದೆ" ಎಂದ ನಾಣಿ. ರಾಮನ ಕಡೆಯೋರು ಅಂದ್ರೆ ಯಾರೇಳು?" ಎಂದು ಕೇಳಿದ ಸೀನ.

"ಅದೇ ಸುಗ್ರೀವ, ಜಾಂಬುವಂತ ಹನುಮಂತ ಮತ್ತೆ ಕಪಿ ಸೈನ್ಯ" ಎಂದ ನಾಣಿ.

"ಮತ್ತೆ ರಾವಣನ ಕಡೆಯೋರು ಯಾರು? ಕೇಳಿದ ಸೀನ.

'ಅದೇ ರಾಕ್ಷಸರು, ಕುಂಭಕರ್ಣ, ಮಾರೀಚ ಅಂತೋರು' ಎಂದ ನಾಣಿ.

"ಸೇತುವೆ ಕಟ್ಟಿದೋರು ಯಾರು" ಕೇಳಿದ ಸೀನ

"ರಾಮನ ಕಡೆಯೋರು ಅದೇ ಹನುಮಂತ ಕಪಿ ಸೈನ್ಯ" ಎಂದ ವೆಂಕ.

"ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿದೋರು ಯಾರು?" ಕೇಳಿದ ಸೀನ.

"ಏನ್ಲಾ ಸೀನ ನಮಗೆ ಕ್ವಿಜ್ ಮಾಡ್ತಿದೀಯಾ? ನಮ್ಗೇನು ಅಷ್ಟೂ ಗೊತ್ತಿಲ್ಲ ಅನ್ಕೊಂಡಿದ್ದೀಯ? ಬಾಲಕ್ಕೆ ಬೆಂಕಿ ಹಚ್ಚಿದೋರು ರಾವಣನ ಕಡೆಯೋರು" ನಾಣಿ. ಅಯೋಧ್ಯೆಲಿ ಮಸೀದಿ ಕೆಡವಿ ಹಾಕಿದೋರು ಯಾವ ಕಡೆಯವರು?" ಕೇಳಿದ ಸೀನ. "ನಾನೇಳ್ತೀನಿ, ರಾಮನ ಕಡೆಯವರು' ಎಂದ ವೆಂಕ. 'ಬೆಂಗ್ಳೂರಲ್ಲಿ ಇಬ್ರು ಮನುಷ್ಯರ ಸಮೇತ ಬಸ್‌ಗೆ ಬೆಂಕಿ ಹಚ್ಚಿದೋರು ಯಾರ ಕಡೆಯುವರು?" ಕೇಳಿದ ಸೀನ. 'ರಾಮನ ಕಡೆಯೋರು' ಎಂದು ನಾಣಿ. 'ಅಂದೆಂಗ್ರೆಲಾ ಆಯ್ತದೆ ಕಟ್ಟೋದು ಬೆಳಸೋದು ಬಿಟ್ಟು, ಕೆಡವೋದು ಬೆಂಕಿ ಹಚ್ಚೋದು ಮಾಡೋರು ರಾಮನ ಕಡೆ ಹೆಂಗೆ ಆಗ್ತಾರೆ? ಅವರು ರಾವಣನ ಕಡೆಯುವರು ಅಲ್ವ? ಎಂದು ಕೇಳಿದ ಸೀನ. 'ಏ ಸುಮ್ಗಿರಪ್ಪ ನಮ್ಗೆ ಕನ್‌ಫ್ಯೂಜ್ ಮಾಡ್ಬೇಡ' ಎಂದರು ಇಬ್ಬರೂ. 'ಅಲ್ರಪ ರಾಮ ಅಷ್ಟೊಂದು ವರ್ಷ ಕಾಡಲ್ಲಿದ್ದ. ಇದು ರಾಮ ಇದ್ದ ಕಾಡು. ಇದನ್ನು ಕಡಿಬೇಡಿ ಹಾಳು ಮಾಡಬೇಡಿಅಂತ ರಾಮನ ಕಡೆಯೋರು ರಾಮನ ಹೆಸರಿನಲ್ಲಿ ಒಂದು ಕಾಡಾದ್ರೂ ಯಾಕೆ ಉಳಿಸಿಲ್ಲ' ಕೇಳಿದ ಸೀನ.

'ಏನಡ್ಕಪ್ಪ ಇವ್ನಿಗೆ ಏನೋ ಆಗಿದೆ ಏನೇನೋ ಕೇಳಿ ಮೆದುಳಿಗೆ ಕೈ ಹಾಕ್ತಾನೆ' ಅಂತ ವೆಂಕ ನಾಣಿ ಇಬ್ಬರೂ ಅಲ್ಲಿಂದ ನಿರ್ಗಮಿಸಿದರು.

ಬಳ್ಳಾರಿ : ರಾಜಕೀಯದಲ್ಲಿ ಬಂಡವಾಳ ಹೂಡಿಕೆದಾರರು

ಇಲ್ಲಿ ರಾಜಕೀಯವೀಗ ಒಂದು ದಂಧೆಯಾಗಿದೆ. ಗಣಿ ವ್ಯವಹಾರದಲ್ಲಿ ದೋಚಿದ ಹಣವನ್ನು ರಾಜಕೀಯ ರಂಗದಲ್ಲಿ ತೊಡಗಿಸಿ ಸೂಪರ್ ಲಾಭ ಪಡೆಯುವ ಜಿದ್ದಾಜಿದ್ದಿ ಪೈಪೋಟಿಯಲ್ಲಿ ರಾಜ್ಯದ ರಾಜಕೀಯ ನಲುಗಿದೆ

ಯು.ಬಸವರಾಜು

ಬಳ್ಳಾರಿ ಜಿಲ್ಲೆಯ ವಿಧಾನಸಭಾ/ ಲೋಕಸಭಾ ಕ್ಷೇತ್ರಗಳಲ್ಲಿ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾವಣಾ ಆಯೋಗ ಮೀಸಲಾತಿಗೊಳಪಡಿಸಿರುವುದು ಮೇಲ್ಜಾತಿಗಳ ರಾಜಕಾರಣಿಗಳಿಗೆ ಅದರಲ್ಲೂ ಕಾಂಗ್ರೆಸ್, ಜೆಡಿ(ಎಸ್) ನಾಯಕರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಆದರೆ ಅದೇ ಬಿಜೆಪಿಗೆ ಅಥವಾ ಬಳ್ಳಾರಿ ಜನಾರ್ಧನರೆಡ್ಡಿ ಪಕ್ಷಕ್ಕೆ ಅನುಕೂಲವಾಗಿರುವುದು ಬಳ್ಳಾರಿ ಜಿಲ್ಲೆಯ ಜನತೆಯ ದುರಾದೃಷ್ಟವಾಗಿದೆ.

ಆದಾಯ ಅಜ-ಗಜ ಅಂತರ

ಬಳ್ಳಾರಿ ಜಿಲ್ಲೆ, ಅಲ್ಲಿ ಸಿಗುವ ಮ್ಯಾಂಗನೀಸ್ ಸಂಪನ್ಮೂಲದ ಸೂಪರ್ ಲಾಭದ ಮೂಲಕ ಜಗತ್ತಿಗೆ ಚಿರಪರಿಚಿತವಾಗಿದೆ. ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರು ರಾಜ್ಯ ಸರ್ಕಾರದ ರಚನೆಯಲ್ಲಿ ರಾಜಕೀಯ ಪಕ್ಷಗಳನ್ನು ಮುನ್ನಡೆಸುವಲ್ಲಿ ಪ್ರಧಾನಪಾತ್ರ ವಹಿಸುತ್ತಿರುವುದು ತಿಳಿದ ವಿಷಯವೇ ಆಗಿದೆ. ಗಣಿ ಹಗರಣ ಸಿಡಿಸಿದ ಶಾಸಕ ಜನಾರ್ಧನರೆಡ್ಡಿ ಅದರ ಅಬ್ಬರದ ವಾಗ್ಝರಿ ಯಾರಿಗೆ ತಿಳಿದಿಲ್ಲ. ಮುಖ್ಯವಾಗಿ ಚೈನಾ ದೇಶಕ್ಕೆ ರಫ್ತಾಗುವ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರು ಜಿಲ್ಲೆಯ ಸಾಮಾನ್ಯರ ಹಾಗೂ ಈ ಕಂಪನಿಗಳ ಆದಾಯದ ನಡುವೆ ಭಾರಿ ಅಂತರವನ್ನು ನಿರ್ಮಿಸಿದೆ. ಬಳ್ಳಾರಿ ಜಿಲ್ಲೆಯ ದಲಿತ ಕುಟುಂಬದ ಪ್ರತಿದಿನದ ಆದಾಯ ಸರಾಸರಿ 10 ರೂ ಮಾತ್ರವೇ ಆಗಿದ್ದರೆ ಜಿಂದಾಲ್ ಸ್ಟೀಲ್ಸ್ ಮುಂತಾದ ಗಣಿಗಾರಿಕೆ ಕಂಪನಿಗಳ ಆದಾಯ ಪ್ರತಿದಿನ 10 ಕೋಟಿಯಾಗಿದೆ. ಹೀಗೆ ಸಾಮಾನ್ಯನ ಹಾಗೂ ಗಣಿ ಕಂಪನಿಗಳ ಆದಾಯದ ನಡುವಿನ ವ್ಯತ್ಯಾಸ 1 ಕೋಟಿ ಪಟ್ಟಾಗಿದೆ.

ಬಳ್ಳಾರಿ ಜಿಲ್ಲೆಯ ಆದಾಯ ಒಟ್ಟು ಆದಾಯ 2002, 03ರಲ್ಲಿ ಒಟ್ಟು 2000 ಕೋಟಿ ಆಗಿದ್ದರೆ ಕೇವಲ ಗಣಿಗಾರಿಕೆಯ ಆದಾಯ ಪ್ರತಿವರ್ಷ 15,000 ಕೋಟಿ ಮೀರಿದೆ. ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ಪ್ರತಿವರ್ಷ ಸುಮಾರು 150 ಮಿಲಿಯನ್ ಟನ್ ಅದಿರು ಹೊರಸಾಗುತ್ತಲಿದೆ.


ರಾಜಕೀಯದಲ್ಲಿ 'ಬಂಡವಾಳ ಹೂಡಿಕೆ'

ಗಣಿಗಾರಿಕೆಯಲ್ಲಿನ ಸೂಪರ್ ಲಾಭವು ರಾಜ್ಯದ ಪ್ರಮುಖ ಬಂಡವಾಳಶಾಹಿ ರಾಜಕಾರಣಿಗಳನ್ನು ಸೆಳೆದಿದೆ. ಗೌಡರ ಕುಟುಂಬ, ಡಿ.ಕೆ.ಸಿಯವರ ಕುಟುಂಬವು ಗಣಿಗಾರಿಕೆಯಲ್ಲಿ ತೊಡಗಿದೆ. ದೇಶದ ಹಲವು ರಾಜ್ಯಗಳ ಪ್ರಮುಖ ರಾಜಕಾರಣಿಗಳು ಇಲ್ಲಿ ತಳವೂರಿದ್ದಾರೆ.

ಜನಾರ್ಧನರೆಡ್ಡಿಯವರು ಉತ್ತರಕನ್ನಡದ 100 ಎಂ.ಎಲ್.ಎ.ಗಳನ್ನು ಗೆಲ್ಲಿಸಿಕೊಡುವುದಾಗಿ ಹೇಳಿ ಚುನಾವಣಾ ಕಾಂಟ್ರಾಕ್ಟ್ ಪಡೆದಿದ್ದಾರೆಂಬ ವಿಚಾರವೀಗ ಬಳ್ಳಾರಿಯ ಗಲ್ಲಿಗಲ್ಲಿಗಳಲ್ಲಿ ಚರ್ಚೆಯ ವಿಷಯ. ಹೌದು ರಾಜಕೀಯದಲ್ಲಿ ಅವರು ಹೂಡುವ ಬಂಡವಾಳಕ್ಕೆ ಕಾಂಗ್ರೆಸ್, ಜೆಡಿ(ಎಸ್) ರಾಜಕಾರಣಿಗಳು ಬೆದರಿ ಬಸವಳಿದಿದ್ದಾರೆ.

ಬಿಜೆಪಿಯಲ್ಲಿ ಜನಾರ್ಧನರೆಡ್ಡಿ ಮತ್ತವರ ಕುಟುಂಬ ಏಕೈಕ ಅನಭಿಶಕ್ತವಾಗಿದೆ. ಕರ್ನಾಟಕದ 100 ಎಂ.ಎಲ್.ಎ.ಗಳನ್ನು ಗೆಲ್ಲಿಸಿಕೊಳ್ಳಬೇಕು. ರಾಜ್ಯ ಸರ್ಕಾರದ ಮುಖ್ಯಮಂತ್ರಿ ಇಲ್ಲವೆ ಉಪಮುಖ್ಯಮಂತ್ರಿಯ ಹಾದಿ ಹಿಡಿಯುವ ಮಹತ್ವಾಕಾಂಕ್ಷೆಯು ಆಗಾಗ್ಗೆ ಅವರಿಂದ ಹೊರಬಿದ್ದಿದೆ. ಅಲ್ಲಿ ಎದುರಾಳಿಯೇ ಇಲ್ಲವೇನೋ.

ಇದಕ್ಕೆ ಸರ್ವಸಿದ್ಧತೆ ಎಂಬಂತೆ 8 ಜಿಲ್ಲೆಗಳ ಟಿ.ವಿ. ಚಾನಲ್ ನೆಟ್‌ವರ್ಕ್‌ಗಳನ್ನು ಈ ರೆಡ್ಡಿಗಾರು ಖರೀದಿಸಿಯೂ ಆಗಿದೆ. ಅಂದರೆ ರೆಡ್ಡಿ ತೋರಿಸಿದರೆ ಉಂಟು ಇಲ್ಲವಾದರೆ ಇಲ್ಲ ಎಂಬಂತಹ ಸ್ಥಿತಿ ಒಂದೊಮ್ಮೆ ಉಂಟಾಗಬಹುದು. ಆದರೆ ಜಿಲ್ಲೆಯ ಕಾಂಗ್ರೆಸ್, ಜೆ.ಡಿ(ಎಸ್) ಒಡೆದ ಮನೆಗಳಾಗಿವೆ. ಇಂತಹ 'ಮಹತ್ವಾಕಾಂಕ್ಷೆ'ಯ ಗುರಿಗಳಿರುವ ನಾಯಕರಿಲ್ಲ. ಚುನಾವಣೆಯಲ್ಲಿ 'ಬಂಡವಾಳ ಹೂಡುವ' ಪ್ರಶ್ನೆ ಬಂದಾಗ ಅದು ತಮ್ಮ ಕ್ಷೇತ್ರಕ್ಕೆ ಮಾತ್ರ ಉಳಿದೆಡೆ ತಮಗೆ ಸಂಬಂಧವಿಲ್ಲವೆಂಬಂತೆ ಇದ್ದಾರೆ. ಕಾಂಗ್ರೆಸ್‌ನಲ್ಲಿ ಗಣಿ ಮಾಲೀಕರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದ್ದರೂ ಅವರಲ್ಲಿ ಒಗ್ಗಟ್ಟಿಲ್ಲವಾಗಿದೆ. 'ಬಂಡವಾಳ ಹೂಡಲು' ತಯಾರಿಲ್ಲದ ಸ್ಥಿತಿಯಿದೆ. ಜೆಡಿ(ಎಸ್) ಪರವಾಗಿ



ಜನಾರ್ಧನ ರೆಡ್ಡಿಯವರು ಉತ್ತರ ಕರ್ನಾಟಕದ 100 ಎಂಎಲ್‌ಎಗಳನ್ನು ಗೆಲ್ಲಿಸಿಕೊಡುವುದಾಗಿ ಹೇಳಿ ಚುನಾವಣಾ ಕಾಂಟ್ರಾಕ್ಟ್ ಪಡೆದಿದ್ದಾರೆಂಬ ವಿಚಾರವೀಗ ಬಳ್ಳಾರಿಯ ಗಲ್ಲಿಗಲ್ಲಿಗಳಲ್ಲಿ ಚರ್ಚೆಯ ವಿಷಯ. ಹೌದು ರಾಜಕೀಯದಲ್ಲಿ ಅವರು ಹೂಡುವ ಬಂಡವಾಳಕ್ಕೆ ಕಾಂಗ್ರೆಸ್, ಜೆಡಿ(ಎಸ್) ರಾಜಕಾರಣಿಗಳು ಬೆದರಿ ಬಸವಳಿದಿದ್ದಾರೆ. ಏನು ನಡೆದಿದೆ ರಾಜ್ಯ ರಾಜಕಾರಣದಲ್ಲಿ!

ಜಿಲ್ಲೆಯಲ್ಲಿ ಅಂತಹ ಪೈಪೋಟಿ ನೀಡುವ- ಕಳೆದ ಚುನಾವಣೆಯ ಮೂಲಕ 'ಹೊರ ಹೊಮ್ಮಿದ' ರೆಡ್ಡಿ ಯಾ ನಾರಾಯಣರೆಡ್ಡಿ ಲಾಡ್ ಕುಟುಂಬದಿಂದ ಬಂದಿದ್ದು ತಾಕತ್ತಿದ್ದರೂ 'ದುರಾದೃಷ್ಟವಶಾತ್' ಅವರು ತಮ್ಮ ಕ್ಷೇತ್ರಗಳಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸುವಂತಿಲ್ಲ. ಈ ಎಲ್ಲವೂ ಎಸ್‌ಸಿ, ಎಸ್‌ಟಿಗಳಿಗೆ ಮೀಸಲಾಗಿವೆ.

ಜರೂರೇನಿದೆ?

ಜಿಲ್ಲೆಯ ಹೊಸ 10 ವಿಧಾನಸಭಾ ಕ್ಷೇತ್ರಗಳಲ್ಲಿ ಬಳ್ಳಾರಿ ಹೊಸಪೇಟೆ ಬಿಟ್ಟರೆ ಉಳಿದೆಲ್ಲವೂ ಎಸ್‌ಸಿ/ ಎಸ್‌ಟಿ ಸ್ಥಾನಗಳಾಗಿವೆ. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಹಣ ಹೂಡಿ ಗೆಲ್ಲಿಸುವ ಜರೂರೇನಿದೆ. ಬೇಕಿದ್ದವರು ಮತ ನೀಡಲಿ ಎಂದುಬಿಡುವುದು ಸಾಧ್ಯವಿದೆ.


ಆದರೆ ಮಹತ್ವಾಕಾಂಕ್ಷಿ ಜನಾರ್ಧನರೆಡ್ಡಿ ಪಕ್ಷದವರಿಗೆ ಎಲ್ಲವನ್ನೂ ಗೆಲ್ಲುವ, ಜಿಲ್ಲೆಯಲ್ಲಿ ಹಿಡಿತ ಬಲಗೊಳಿಸುವ ಜರೂರಿದೆ. ಮೀಸಲು ಕ್ಷೇತ್ರಗಳಲ್ಲಿ ಎಸ್‌ಟಿ ಸ್ಥಾನಗಳು 06 ಆಗಿದ್ದು, ವಾಲ್ಮೀಕಿ ಸಂಘವು ಶ್ರೀರಾಮುಲು ನೇತೃತ್ವದಲ್ಲಿ ಕ್ರೋಢೀಕರಣಗೊಳ್ಳುತ್ತಿರುವುದು ಮಹತ್ವಾಕಾಂಕ್ಷೆಗೆ ಸಹಕಾರಿಯಾಗಿದೆ.

ಇದರೊಂದಿಗೆ ಜಿಲ್ಲಾ ಪಂಚಾಯತ್ ಹಾಗೂ ಬಳ್ಳಾರಿ ನಗರ ಪಾಲಿಕೆ ಹಲವು ತಾಲ್ಲೂಕು ಪಂಚಾಯತ್‌ಗಳು ಬಿಜೆಪಿ ಹಿಡಿತದಲ್ಲಿವೆ.

ಎಂ.ಪಿ. ಕರುಣಾಕರರೆಡ್ಡಿ (ಬಿಜೆಪಿ) ಬಳ್ಳಾರಿಯಿಂದ ಕೊಪ್ಪಳಕ್ಕೆ ನೆಗೆಯುವ ಆಲೋಚನೆಯಲ್ಲಿದ್ದರೆ ಜೆಡಿ(ಎಸ್) ಎನ್.ಎಸ್.ರೆಡ್ಡಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಕ್ಷೇತ್ರವನ್ನು ಸಿದ್ಧಗೊಳಿಸುತ್ತಿದ್ದಾರೆಂಬ ಅಭಿಪ್ರಾಯಗಳಿವೆ. ಹೀಗಾಗಿ ಕಾಂಗ್ರೆಸ್, ಜೆಡಿ(ಎಸ್) ಮುಖಂಡರುಗಳಿಗೆ ಈ ಜಿಲ್ಲೆಯನ್ನು ನೆಲೆ ಮಾಡಿಕೊಂಡು ರಾಜ್ಯ ಸರ್ಕಾರದಲ್ಲಿ ಮಹತ್ವಾಕಾಂಕ್ಷೆ ಹುದ್ದೆ ಪಡೆಯುವ ಹಂಬಲವಿಲ್ಲ. ಅದಕ್ಕೆ ಅವರು ಬೇರೆ ಮಾರ್ಗಗಳನ್ನು ಆರಿಸಿಕೊಂಡಿದ್ದಾರೆ.

ಬಂಪರ್ ಲಾಟರಿ ಹೊಡೆದ ಕೋಮುವಾದಿಗಳು

Ennoble India ಬಿಕ್ಕಟ್ಟಿನಲ್ಲಿದ್ದಾಗ ಈ ಕುಳವನ್ನು ನೆಲೆ ಮಾಡಿಕೊಂಡ ಬಿಜೆಪಿ ಸಂಘ ಪರಿವಾರಕ್ಕೆ ಜನಾರ್ಧನರೆಡ್ಡಿಯವರೀಗ ಬಂಪರ್ ಲಾಟರಿಯ ಏರು ಏಣಿಯಾಗಿದ್ದಾರೆ. ರೆಡ್ಡಿಯ ಜೊತೆ ಕೆಳ ವಿಭಾಗಕ್ಕೆ ಸೇರಿದ ಶ್ರೀರಾಮುಲು, ಅವರ ವಾಲ್ಮೀಕಿ ಸಮುದಾಯವು ಸಂಘ ಪರಿವಾರಕ್ಕೆ ಅಲ್ಪಸಂಖ್ಯಾತರ ವಿರುದ್ಧ ಬಳಸಲು ಭಾರಿ ಬಡಿಗೆಯಾಗಿ ಕಾಣುತ್ತಿದೆ.



ಶಾಸಕ ಅನಿಲ್ ಲಾಡ್

ಸಂಘಪರಿವಾರವು ಹಂಪಿಯನ್ನೂ ರಾಜ್ಯದ 2ನೇ ವಿವಾದದ ಕೇಂದ್ರ ಮಾಡಲು ಯತ್ನಿಸುತ್ತಿರುವಾಗ, ಜಿಲ್ಲೆಯಲ್ಲಾಗುತ್ತಿರುವ ಈ ರಾಜಕೀಯ ಬೆಳವಣಿಗೆ ಪ್ರಗತಿಪರ, ಜಾತ್ಯಾತೀತ ಶಕ್ತಿಗಳಿಗೆ ಆತಂಕಕಾರಿಯಾಗಿದೆ.

ಬಳ್ಳಾರಿ ನಗರಸಭೆ ಚುನಾವಣೆಯಲ್ಲಿ ಈಗಾಗಲೇ ಬಳ್ಳಾರಿ ಜನಾರ್ಧನ ರೆಡ್ಡಿ ಪಕ್ಷ (ಬಿಜೆಪಿ) ಹೈಟೆಕ್ ಪ್ರಚಾರ ಹರಿಬಿಟ್ಟಿದೆ. ಮೊಬೈಲ್ ಉಪಯೋಗ ವ್ಯವಸ್ಥಿತವಾಗಿ ನಡೆದಿದೆ. ಬಳ್ಳಾರಿ ನಗರಸಭೆಯನ್ನು ಖಂಡಿತವಾಗಲೂ ಹಿಡಿಯುತ್ತೇವೆಂಬ ಬಲವಾದ ಭರವಸೆಯೊಂದಿಗೆ ಬಿಜೆಪಿ ಮುಂದೆ ಸಾಗಿದರೆ, ಬೆದರಿ ಬಸವಳಿದ ವಿರೋಧಿ ರಾಜಕೀಯ ಶಕ್ತಿಗಳು ಜಂಟಿ ಕಾರ್ಯತಂತ್ರ ಹೆಣೆದ ಹಾಗೆ ಕಾಣುತ್ತಿದೆ. ಸೂರ್ಯನಾರಾಯಣರೆಡ್ಡಿಯವರು ಬಳ್ಳಾರಿ ನಗರ ಪಾಲಿಕೆ ಕಡೆ ಕಣ್ಣು ಹಾಯಿಸಿ ಜೆಡಿ(ಎಸ್) ಪಕ್ಷದ ಹುರಿಯಾಳುಗಳನ್ನು ಕಣಕ್ಕಿಳಿಸುತ್ತಿದ್ದಾರೆ. ಗಟ್ಟಿ ಪೋಟಿ ನೀಡುವವರನ್ನೇ ಹುಡುಕಿ ಬೆಂಗಾವಲಾಗಿದ್ದಾರೆ.

ಕೇವಲ ಚುನಾವಣೆಯಲ್ಲಿ ಹೂಡುವ ಭಾರೀ ಬಂಡವಾಳವೇ ವಿಜಯದ ಸರಮಾಲೆ ತರಬಲ್ಲದೇ ಎಂಬ ಪ್ರಶ್ನೆಯು ಇದೆ. ಇದು ಬಂಡವಾಳ ಹೂಡುವವರಿಗೂ ಗೊತ್ತಿದೆ. ಯಾಕೆಂದರೆ ಹೆಚ್ಚಿನ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಎಲ್ಲಾ ಬಡವರಿಗೆ ಮುಖ್ಯವಾಗಿ ಹಣ ಹಂಚುವುದು ಸಾಮಾನ್ಯ. ಎಲ್ಲರಿಂದ ಹಣ ಪಡೆದ ಮತದಾರ ಹಣಕ್ಕಾಗಿ ಮತ ನೀಡಿದನೆಂದು ಹೇಳುವುದು ಸಾಧ್ಯವೇ ?

ಕಳೆದ ಚುನಾವಣೆಯಲ್ಲಿ ಏನೆಲ್ಲಾ ಅಬ್ಬರದ ಪ್ರಚಾರ ಭಾರಿ ಬಂಡವಾಳ ಹೂಡಿದ ಬಿಜೆಪಿ ಕೇಂದ್ರದಲ್ಲಿ ಮಣ್ಣು ಮುಕ್ಕಿದರೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಕನಸು ಕನಸಾಗಿಯೇ ಉಳಿದು ಈಗ ಇನ್ನೊಂದು ಅನೈತಿಕ ಏ'ರ್ಪಾ'ಡ'ಲ್ಲಿ ಅಧಿಕಾರದಲ್ಲಿದೆ. ಜಾತಿ ಸಂಘಗಳು, ಜಾತಿ ಭಾವನೆಯು ಲಾಭ ಪಡೆಯುವವರೆಂದರೂ, ಸಾಮಾನ್ಯ ಜನ ಕಳೆದ ಬಾರಿ ಯಾವ ಪಕ್ಷಕ್ಕೂ ಬಹುಮತ ನೀಡಲಿಲ್ಲವೆಂದರೆ ಅದು ಜನರ ತಿಳುವಳಿಕೆಯಲ್ಲಾಗುತ್ತಿರುವ ಬೆಳವಣಿಗೆ. ಜನಗಳಲ್ಲಿ ತಮ್ಮ ಸಮಸ್ಯೆ, ಸಂಕಟಗಳಿಗೆ ಪರಿಹಾರ ಸಿಗಲಿಲ್ಲವೆಂಬ ಅಸಂತೃಪ್ತಿ ಪ್ರಧಾನ ಪಾತ್ರ ವಹಿಸುತ್ತಿರುವಾಗ ಇದನ್ನು ಇನ್ನಷ್ಟು ವಿಶಾಲಗೊಳಿಸುವ ಅಗತ್ಯ ಪ್ರಗತಿಪರ, ಜಾತ್ಯಾತೀತ ಶಕ್ತಿಗಳ ಮೇಲಿದೆ. ಹೀಗಾಗಿ ಬಳ್ಳಾರಿ ಜಿಲ್ಲೆಯ ಆತಂಕದ ನಡುವೆಯೇ ಆಶಾವಾದವು ಉಳಿದಿದೆ.

ಆತಂಕದ ಕಾರ್ಮೋಡ

ಕಳೆದ ಬಳ್ಳಾರಿಯ ವಿಧಾನಸಭಾ ಚುನಾವಣೆಯಲ್ಲಿ ಜನತೆ ಪಕ್ಷಗಳಿಗಿಂತ ಸ್ಥಳೀಯ ಹಿತಾಸಕ್ತಿಗೆ ಮತ ನೀಡಿದ್ದು ಸ್ಪಷ್ಟವಿತ್ತು. ದಿವಾಕರಬಾಬು ಬೇಡವೆಂದು ರೋಸಿದವರು ಶ್ರೀರಾಮುಲುರವರಿಗೆ ಮತ ನೀಡಿದರೆ, ಇವರು ಬೇಡವೆಂದು ರೋಸಿದವರು ಅವರಿಗೆ ಮತ ನೀಡಿದ್ದರು. ಇವರಿಬ್ಬರ ನಡುವೆ ಜೆಡಿ(ಎಸ್) ಕರಗಿಹೋಗಿತ್ತು. ಈ ಸ್ಥಳೀಯ ಕಾರಣದಿಂದಾಗಿಯೇ ಕಾಂಗ್ರೆಸ್ ಜಿಲ್ಲೆಯಲ್ಲಿ ದೊಡ್ಡ ಮತಗಳನ್ನು ಈ ಕ್ಷೇತ್ರದಲ್ಲಿ ಪಡೆದಿತ್ತು. ಈಗ ಜನಾರ್ಧನ ರೆಡ್ಡಿ ಮತ್ತದರ ಬೆಂಬಲಿಗರು ದೊಡ್ಡ, ದೊಡ್ಡ ಅಧಿಕಾರಿಗಳನ್ನು, ದೊಡ್ಡ ದೊಡ್ಡ ರಾಜಕಾರಣಿಗಳನ್ನು ಕಂಡಕಂಡಂಗೆ ಹೆದರಿಸುವವರೆಂದು, ಇದರಿಂದಾಗಿ ಇವರನ್ನು ಪ್ರಶ್ನಿಸಿ ಬದುಕಲು ಸಾಧ್ಯವೇ ಎಂಬ ಜನತೆಯ ಆತಂಕದಂತೆ ಕಾರ್ಮೋಡವು ಕವಿದಿದೆ. ಈ ಕಾರ್ಮೋಡವು ಬಳ್ಳಾರಿ ಜನಾರ್ಧನರೆಡ್ಡಿ ಪಕ್ಷಕ್ಕೆ ತಿರುಗೇಟಾಗುವ ಸಾಧ್ಯತೆಯೂ ಇದೆ.

ಚೈನಾ ದೇಶಕ್ಕೆ ರಫ್ತಾಗುವ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರು ಜಿಲ್ಲೆಯ ಸಾಮಾನ್ಯರ ಹಾಗೂ ಈ ಕಂಪನಿಗಳ ಆದಾಯದ ನಡುವೆ ಭಾರಿ ಅಂತರವನ್ನು ನಿರ್ಮಿಸಿದೆ. ಬಳ್ಳಾರಿ ಜಿಲ್ಲೆಯ ದಲಿತ ಕುಟುಂಬದ ಪ್ರತಿದಿನದ ಆದಾಯ ಸರಾಸರಿ 10 ರೂ. ಮಾತ್ರವೇ ಆಗಿದ್ದರೆ ಜಿಂದಾಲ್ ಸ್ಟೀಲ್ಸ್ ಮುಂತಾದ ಗಣಿಗಾರಿಕೆ ಕಂಪನಿಗಳ ಆದಾಯ ಪ್ರತಿದಿನ 10ಕೋಟಿಯಾಗಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ

ಬೆಂಗಳೂರು ಈಗ ಎ-1 ಸಿಟಿ ?

ಬೆಂಗಳೂರು ಮಹಾನಗರ ಏ-1 ನಗರ ಎಂದು ಘೋಷಣೆಯಾಗಿದೆ. ದುಡಿಯುವ ವರ್ಗಕ್ಕೆ ಇದರ ಲಾಭವೇನು? ಇದರ ಹಿಂದೆ ಯಾರ ಶ್ರಮವಿದೆ?

ಬಾಲಕೃಷ್ಣ ಶೆಟ್ಟಿ

ಬಂಡವಾಳವನ್ನು ಆಕರ್ಷಿಸುವ ನಗರ ಬೆಂಗಳೂರು. ಅದು ಕೇವಲ ದೇಶೀಯ ಬಂಡವಾಳದಾರರು ಮಾತ್ರವಲ್ಲ, ವಿದೇಶಿ ಬಂಡವಾಳದಾರರೂ ದೊಡ್ಡ ಸಂಖ್ಯೆಯಲ್ಲಿ ಬೆಂಗಳೂರು ನಗರಕ್ಕೆ ದಾಳಿ ಇಟ್ಟಿದ್ದಾರೆ. ಅವರಿಗಾಗಿ ದೊಡ್ಡ ಕಟ್ಟಡಗಳು, ಹೆದ್ದಾರಿಗಳು, ಮೇಲು ಸೇತುವೆಗಳು, ಮನರಂಜನಾ ಕೇಂದ್ರಗಳು ನಿರ್ಮಾಣವಾಗುತ್ತದೆ. ದೊಡ್ಡ ಜನರು ಬಂದಾಗ ಸಣ್ಣಪುಟ್ಟ ಕೆಲಸಗಳೂ ಇರುತ್ತವೆ. ಅದಕ್ಕೆಂದೇ ಕೆಲಸವಿಲ್ಲದ ಅಥವಾ ಲಾಭದಾಯಕ ಕೆಲಸಗಳಿಲ್ಲದ ಹಳ್ಳಿ ಜನ ಬೆಂಗಳೂರಿಗೆ ಧಾವಿಸುತ್ತಾರೆ. ಜನಸಂಖ್ಯೆ ಜಾಸ್ತಿಯಾಗುತ್ತದೆ. ಜೀವನ ನಿರ್ವಹಣೆ ವೆಚ್ಚವೂ ಸಹ.

ಆದ್ದರಿಂದಲೇ ಕ್ಷೇತ್ರ ಪುನರ್ ವಿಂಗಡಣೆಯ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅಸೆಂಬ್ಲಿ ಕ್ಷೇತ್ರಗಳ ಸಂಖ್ಯೆ ಕಡಿಮೆಯಾದರೆ, ಬೆಂಗಳೂರು ನಗರದಲ್ಲಿ ದುಪ್ಪಟ್ಟಾಗಿದೆ.



ಈ ನಗರಕ್ಕೀಗ 'ಎ-1 ಸಿಟಿ'ಯ ಪಟ್ಟ ದೊರತಿದೆ. ಅಂದರೆ 2004ರಲ್ಲಿ ಪ್ರಕಟಗೊಂಡ 2001ರ ಜನಗಣತಿ (ಸೆನ್ಸಸ್)ಯ ಪ್ರಕಾರ ಬೆಂಗಳೂರು ನಗರದ ಜನಸಂಖ್ಯೆ 50 ಲಕ್ಷ ದಾಟಿದೆ. ಆದ್ದರಿಂದ ಇದು 'ಎ-1 ಸಿಟಿ'. ಆದರೆ ನಮ್ಮ ದೇಶದ ಕಾನೂನೇ ಒಂದು ತರಹ. ಎಲ್ಲಾ ಅಧಿಕಾರಗಳೂ ಕೇಂದ್ರ ಸರ್ಕಾರದ ಕಪಿ ಮುಷ್ಠಿಯಲ್ಲಿದೆ. ಆರು ವರ್ಷಗಳ ಹಿಂದೆಯೇ ಜನಸಂಖ್ಯೆ 50 ಲಕ್ಷ ದಾಟಿದೆ ಎಂದು ಗೊತ್ತಾಗಿದ್ದರೂ 3 ವರ್ಷಗಳ ಹಿಂದೆಯೇ ಅದು ಅಧಿಕೃತವಾಗಿ ಪ್ರಕಟವಾಗಿದ್ದರೂ ಬೆಂಗಳೂರು 'ಎ-1 ಸಿಟಿ' ಎಂದು ಆದೇಶ ಘೋಷಿತವಾಗಿರಲಿಲ್ಲ. ಇದರಿಂದಾಗಿ ಕೇಂದ್ರ ಸರ್ಕಾರಿ ನೌಕರರು, ಸಾರ್ವಜನಿಕ ಉದ್ದಿಮೆಯ ನೌಕರರು ಮತ್ತು ಈ ಆದೇಶಕ್ಕೆ ಒಳಪಡುವ ಇನ್ನಿತರ ನೌಕರರು ತಮಗೆ ನ್ಯಾಯಯುತವಾಗಿ ಸಿಗಬೇಕಾಗಿದ್ದ ಮನೆ ಬಾಡಿಗೆ ಭತ್ಯೆ, ನಗರ ಭತ್ಯೆಗಳಿಂದ ವಂಚಿತರಾಗಿದ್ದರು. ಏ-1 ನಗರವೆಂದು ಘೋಷಿಸಲು ಒತ್ತಾಯಿಸುತ್ತಾ ಬಂದಿದ್ದರು. ಈಗ ಆದೇಶ ಹೊರಡಿಸಿದ್ದಾರೆ.

ಜನಸಂಖ್ಯೆ ಹೆಚ್ಚಿದಂತೆಲ್ಲ ಮನೆಗಳ ದೊರೆಯುವಿಕೆ ಕಡಿಮೆಯಾಗುತ್ತದೆ. ಆಗ ಬಾಡಿಗೆ ಜಾಸ್ತಿಯಾಗುತ್ತದೆ. ಸಾಗಾಣಿಕೆ ಖರ್ಚು, ಅಗತ್ಯವಸ್ತುಗಳ ದರ ಇತ್ಯಾದಿಗಳೂ ಹೆಚ್ಚುತ್ತವೆ. ಈ ದರ ಹೆಚ್ಚಳಕ್ಕೆ ಪ್ರತಿಯಾಗಿ ಸ್ವಲ್ಪವಾದರೂ ಪರಿಹಾರ ಸಿಗಲಿ ಎಂಬುದು ಇದರ ಹಿಂದಿನ ಉದ್ದೇಶ.

ಇದರಿಂದ ಹೆಚ್ಚಾಗಿ ಲಾಭ ದೊರೆಯುವುದು ಕೇಂದ್ರ ಸರ್ಕಾರಿ ನೌಕರರಿಗೆ, ಅವರಿಗೆ ಸದ್ಯಕ್ಕೆ ದೊರಕುತ್ತಿರುವ ಮನೆ ಬಾಡಿಗೆ ಶೇ.15 ಅಂದರೆ ಒಬ್ಬ ಕೇಂದ್ರ ಸರ್ಕಾರಿ ನೌಕರರಿಗೆ ಮೂಲ ವೇತನ (ಬೇಸಿಕ್ ಪೇ) 5000 ಬಂದಿದ್ದರೆ ಮನೆ ಬಾಡಿಗೆ ತಿಂಗಳಿಗೆ ರೂ.750/- ದೊರಕುತ್ತಿತ್ತು. ಅಕ್ಟೋಬರ್ 1 ರಿಂದ ಅದು ಶೇ.30ಕ್ಕೆ ಏರಿದೆ. ಅಂದರೆ 1500 ರೂ.ಸಿಗುತ್ತದೆ. ಹಾಗೆಯೇ ನಗರ ಭತ್ಯೆಯಲ್ಲಿಯೂ ಸಹ (ಸಿಸಿಎ) ಅಲ್ಪ ಏರಿಕೆಯಾಗಲಿದೆ.

ಸಾರ್ವಜನಿಕ ಉದ್ದಿಮೆಯ ನೌಕರರೂ ಈ ಆದೇಶಕ್ಕೆ ಒಳಪಡುತ್ತಾರೆ. ಆದರೆ ಅಲ್ಲಿನ ನೌಕರರು ಸಂಘಟನೆಗಳು ದ್ವಿಪಕ್ಷೀಯ ಒಪ್ಪಂದದ ಮೂಲಕ ಈಗಾಗಲೇ ಶೇ.25 ಮನೆ ಬಾಡಿಗೆ ಭತ್ಯೆ ಪಡೆಯುತ್ತಿದ್ದು, ಅಕ್ಟೋಬರ್ 1 ರಿಂದ ಶೇ 5 ರಷ್ಟು ಜಾಸ್ತಿಯಾಗಲಿದೆ. ಹಾಗೆಯೇ ದ್ವಿಪಕ್ಷೀಯ ಒಪ್ಪಂದಕ್ಕೊಳಪಟ್ಟಿರುವ ಬ್ಯಾಂಕು, ವಿಮಾ ಮೊದಲಾದ ಮಧ್ಯಮ ವರ್ಗದ ನೌಕರರಿಗೂ ಸ್ವಲ್ಪ ಹೆಚ್ಚಳವಾಗಲಿದೆ.

ಆದರೆ ರಾಜ್ಯ ಸರ್ಕಾರಿ ನೌಕರರಿಗೆ ಇದರಿಂದ ಸದ್ಯಕ್ಕೆ ಯಾವುದೇ ಹೆಚ್ಚಳವಾಗುವುದಿಲ್ಲ. ರಾಜ್ಯ ಸರ್ಕಾರವು ತನ್ನ ಇಲಾಖೆಯ ನೌಕರರಿಗೂ ಇದನ್ನು ಅನ್ವಯಗೊಳಿಸಿ ಪ್ರತ್ಯೇಕ ಆದೇಶ ಹೊರಡಿಸದರೆ ಮಾತ್ರ ಅಲ್ಲಿನ ನೌಕರರಿಗೆ ಈ ಸೌಲಭ್ಯ ದೊರಕಲಿದೆ. ಸರ್ಕಾರಿ ನೌಕರರ ಚಳುವಳಿ ದುರ್ಬಲವಾಗಿರುವ ಕರ್ನಾಟಕದಲ್ಲಿ ಇದು ಯಾವಾಗ ದೊರಕುತ್ತದೆ. ಎಂದು ಈಗಲೇ ಹೇಳುವುದು ಕಷ್ಟ. ಏಕೆಂದರೆ ಕೇಂದ್ರ ಸರ್ಕಾರಿ ನೌಕರರಿಗೆ ಆರನೇ ವೇತನ ಆಯೋಗದ ಮಧ್ಯಂತರ ಶಿಫಾರಸ್ಸುಗಳು ಜಾರಿಯಾಗುತ್ತಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಸರ್ಕಾರಿ ನೌಕರರು ಐದನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿಯಲ್ಲೇ ತೃಪ್ತಿಪಡಬೇಕಾಯ್ತು. ಅಂದರೆ ಇಲ್ಲಿನ ರಾಜ್ಯ ಸರ್ಕಾರಿ ನೌಕರರು ಸತತವಾಗಿ ವೇತನ ಹೆಚ್ಚಳ ಮತ್ತು ಇತರೆ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಇತ್ತೀಚಿಗೆ ನಡೆಸಿದ ಸಮಾವೇಶದಲ್ಲಿ 'ಎ-1 ಸಿಟಿ' ಯ ಆದೇಶವು ಅನ್ವಯವಾಗಬೇಕೆಂದು ಒತ್ತಾಯಿಸಿದೆ. ಹಾಗೆಯೇ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವೂ ಮನೆ ಬಾಡಿಗೆ ಭತ್ಯೆಯನ್ನು ಹೆಚ್ಚಿಸಬೇಕೆಂದು ಸರ್ಕಾರವನ್ನು ಕೇಳಿಕೊಂಡಿದೆ.

ನೌಕರರ ಕಾಳಜಿ ಇಲ್ಲದೆ, ತಮ್ಮ ಅಧಿಕಾರ ಕುರ್ಚಿಗೆ ಅಂಟಿಕೊಂಡಿರುವ ಸರ್ಕಾರಕ್ಕೆ ಈ ಕೂಗು ಕೇಳಿಸೀತೆ ಎನ್ನುವುದು ಸಂಶಯಾಸ್ಪದ. ಈ ನಿಟ್ಟಿನಲ್ಲಿ ನೌಕರರನ್ನು ಒಗ್ಗೂಡಿಸುವ ವಿವಿಧ ಹಂತಗಳ ಚಳುವಳಿ ಅವಶ್ಯ.

ಹೋರಾಟ ಮತ್ತು ಸಿಐಟಿಯು ಪಾತ್ರ: 'ಎ-1 ಸಿಟಿ' ಯ ಆದೇಶ ಹೊರ ಬೀಳುವುದಕ್ಕೂ ಹಲವು ಹಂತದ ಹೋರಾಟಗಳು ನಡೆದಿವೆ. ಕೇಂದ್ರ ಸರ್ಕಾರಿ ನೌಕರರು ತಮ್ಮ ಕೇಂದ್ರ ಸಂಘಟನೆಯ ನೇತೃತ್ವದಲ್ಲಿ ಹೈದರಾಬಾದ್ ಮತ್ತು ಬೆಂಗಳೂರು ನಗರಗಳಿಗೆ ಎ-1 ಸಿಟಿ ಯ ಆದೇಶ ಹೊರಡಿಸಬೇಕೆಂದು ಒತ್ತಾಯಿಸಿತು. ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಹಾಗೂ ರಾಜ್ಯ ಸಭಾ ಸದಸ್ಯರಾದ ತಪನ್ ಸೇನ್ ಸತತವಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಒತ್ತಾಯ ಮಾಡಿದ್ದರು.

ಬೆಂಗಳೂರಿನ ಸಾರ್ವಜನಿಕ ಉದ್ದಿಮೆ ನೌಕರರ ಜಂಟಿ ಕ್ರಿಯಾ ಸಮಿತಿಯು ಹಲವಾರು ಒತ್ತಾಯಗಳನ್ನು ತಂದಿರುವುದು ಮಾತ್ರವಲ್ಲದೆ, ಧರಣಿ ಕೂಡಾ ನಡೆಸಿತ್ತು.

ಕರ್ನಾಟಕ ರಾಜ್ಯ ಸರ್ಕಾರವು ಬೆಂಗಳೂರು ನಗರ ಕಾರ್ಪೊರೇಷನ್ನಿಗೆ 6 ಸಿಎಂಸಿ, 1 ಟಿಎಂಸಿ ಹಾಗೂ 100 ಗ್ರಾಮಗಳನ್ನು ಸೇರಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ರಚನೆಯ ಆದೇಶ ಹೊರಡಿಸಿದ ನಂತರ ಕೇಂದ್ರ ಸರ್ಕಾರವು ಕೇಳಿದ ಕೆಲವು ಸ್ಪಷ್ಟನೆಗಳಿಗೆ ಕ್ಷಿಪ್ರ ಸಮಯದಲ್ಲಿ ಉತ್ತರ ನೀಡಿರಲಿಲ್ಲ. ಈ ಸಂದರ್ಭದಲ್ಲಿ ಬಿಇಎಲ್ ನೌಕರರ ಸಂಗಟನೆಯ ಗೌರವ ಅಧ್ಯಕ್ಷ ಹಾಗೂ ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿ ಮತ್ತು ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಪ್ರಸನ್ನಕುಮಾರ್ ಮೊದಲಾದವರ ಪ್ರಯತ್ನವೂ ಈ ಆದೇಶ ಬೇಗ ಹೊರಬೀಳಲು ಸಹಾಯವಾಗಿದೆ.

ಯೋಜನೆಗಳಿಗೆ ಹೆಚ್ಚುವ ಹಣ: ಎ-1 ಸಿಟಿಯ ಆದೇಶದಿಂದಾಗಿ ಕೇಂದ್ರ ಸರ್ಕಾರವು ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡುವ ಹಣದಲ್ಲಿಯೂ ಕೂಡಾ ಹೆಚ್ಚಳವಾಗಲಿದೆ. ಇದರಿಂದ ಈ ನಗರಕ್ಕೆ ಲಾಭವಾಗಲಿದೆಯೇ ಎಂದು ಕಾದು ನೋಡಬೇಕಾಗಿದೆ.

ಭಿಕ್ಷುಕರ ಪರದಾಟ

ಎ-1 ಸಿಟಿಯ ಘೋಷಣೆಯಿಂದಾಗಿ ಕೆಲವೊಂದು ನೌಕರರಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯ ದೊರೆತರೂ ಭಿಕ್ಷುಕರಿಗೆ ತೊಂದರೆಯಾಗಿದೆ. ಕಾಕತಾಳೀಯವೆಂಬಂತೆ, ಬೆಂಗಳೂರು ನಗರದಲ್ಲಿರುವ ಭಿಕ್ಷುಕರನ್ನು ಬಂಧಿಸಿ..... ಕಳುಹಿಸಿಕೊಟ್ಟಿದೆ. ಉದ್ಯೋಗವನ್ನು ನೀಡಲಾಗದ ಸರ್ಕಾರ, ತಮ್ಮ ಹೊಟ್ಟೆ ತುಂಬಿಕೊಳ್ಳಲು ಭಿಕ್ಷೆ ಬೇಡುತ್ತಿರುವವರನ್ನು ಜಾಗ ಖಾಲಿ ಮಾಡಿಸಿದರೆ ಭಿಕ್ಷಾಟನಾ ಸ್ಥಿತಿ ಮಾಯವಾದೀತೆ?

ಕರೆಯುವ ಹಸು ಕೊಟ್ಟು, ಒದೆಯುವ ಕೋಣ ತಂದ ಕತೆ ಇದು

ಯಾಕೆ? ಭಾರತಕ್ಕೆ ಇರಾನ್‌ನ ಅಗ್ಗದ ಅನಿಲ ಬೇಡವೇ? ಅಮೇರಿಕಾದ ದುಬಾರಿ ಅಣುವಿದ್ಯುತ್ತೇ ಬೇಕೆ?

ಭಾರತ ಅಮೇರಿಕಾದೊಂದಿಗೆ ಅಣು ಒಪ್ಪಂದ ಮಾಡಿಕೊಳ್ಳುವುದರಿಂದ ದೇಶದ ಜನ ಭವಿಷ್ಯದಲ್ಲಿ ಎಂತಹ ಪ್ರಾಣ ಸಂಕಟಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂಬುದಕ್ಕೆ ಇಗೋ ಇಲ್ಲಿದೆ ಒಂದು ಸಾಕ್ಷಿ. ಈ ಅಣು ಒಪ್ಪಂದದಿಂದಾಗಿ ಆಮೇರಿಕಾದಿಂದ ಅಣು ರಿಯಾಕ್ಟರ್‌ನ್ನು ಭಾರತಕ್ಕೆ ಆಮದು ಮಾಡಿಕೊಂಡು ಉತ್ಪಾದಿಸುವ ಅಣು ವಿದ್ಯುತ್‌ನ ಬೆಲೆ ಎಷ್ಟು ಗೊತ್ತೆ? ಒಂದು ಯೂನಿಟ್‌ಗೆ 11 ರೂಪಾಯಿ. ಬೆಚ್ಚಿ ಬೀಳಬೇಡಿ ನಿಜ ಇದು. ಎಡಪಕ್ಷಗಳ ವಿರೋಧಕ್ಕೆ ಇದೂ ಒಂದು ಕಾರಣ.

ಎಡಪಕ್ಷಗಳ ವಿರೋಧ ಎದುರಿಸಲು ಸರ್ಕಾರ ಇಂಧನ ಭದ್ರತೆಯ ಪ್ರಶ್ನೆಯನ್ನು ಮುಂದೆ ಮಾಡುತ್ತಿದೆ. ಎಡಪಕ್ಷಗಳೇನೂ ಬರೀ ಕುರುಡು ವಿರೋಧ ತೋರಿಸುತ್ತಿಲ್ಲ. ಇಂಧನ ಭದ್ರತೆಯ ದೃಷ್ಟಿಯಿಂದ 'ಇರಾನ್ -ಪಾಕಿಸ್ಥಾನ್-ಭಾರತ' ಅನಿಲ ಕೊಳವೆಯ ಕುರಿತ ಮಾತುಕತೆಯನ್ನು ಶೀಘ್ರವಾಗಿ ಅಂತಿಮಗೊಳಿಸಿ ಎಂದು ಒತ್ತಾಯಿಸುತ್ತಲೇ ಬರುತ್ತಿವೆ. ಎಡಪಕ್ಷಗಳ ಒತ್ತಾಯಕ್ಕೆ ಮಣಿದು ಕೊಂಚ ಮುಂದುವರಿದಂತೆ ನಟಿಸುವ ಕೇಂದ್ರ ಸರ್ಕಾರ ವಾಸ್ತವವಾಗಿ ಯೋಜನೆಯಿಂದ ಹಿಂದಕ್ಕೆ ಸರಿಯುತ್ತಿದೆ.

ಕೊಳವೆ ಮಾರ್ಗದ ಮೂಲಕ ಇರಾನ್‌ನ ಅನಿಲ ಭಾರತಕ್ಕೆ ಬರುವಂತಾದರೆ ಅದರಿಂದ ವಿದ್ಯುತ್ ಉತ್ಪಾದನೆ ಸೇರಿದಂತೆ ಭಾರತಕ್ಕೆ ಅಗತ್ಯವಾದ ಇಂಧನ ಧಾರಾಳವಾಗಿ ದೊರಕುತ್ತದೆ. ಭಾರತಕ್ಕೆ ಬಾರಿ ಪ್ರಯೋಜನವಾಗುತ್ತದೆ. ದುಬಾರಿ ಪೆಟ್ರೋಲ್-ಡೀಸೆಲ್‌ಗೂ ಅನಿಲ ಬಹುಮಟ್ಟಿಗೆ ಒಂದು ಪರ್ಯಾಯ ವಾಗಲಿದೆ. ಭಾರತಕ್ಕೆ ಭಾರಿ ಪ್ರಯೋಜನವಾದರೆ ಅಮೇರಿಕಾಕ್ಕೇನು ಲಾಭ.! ಈ ಅನಿಲ ಯೋಜನೆಯಿಂದ ಗಳಿಸುವ ಲಾಭವನ್ನು ಇರಾನ್ ಅಣ್ವಸ್ತ್ರಗಳ ತಯಾರಿಗೆ ಬಳಸುತ್ತದೆ ಎಂಬ ಕಾರಣ ಒಡ್ಡಿ ಈ ಯೋಜನೆಗೆ ಅಮೇರಿಕಾ ನಿರಂತರವಾಗಿ ಅಡ್ಡಿಪಡಿಸುತ್ತಿದೆ. ಅಮೇರಿಕಾದ ಈ ಒತ್ತಡಕ್ಕೆ ಭಾರತದ ಸರ್ಕಾರ ಮಣಿಯುತ್ತಿರುವಂತೆ ಕಾಣುತ್ತಿದೆ. ಇದೇ ಸೆಪ್ಟೆಂಬರ್ 24 ರಿಂದ 26 ರವರೆಗೆ ಯೋಜನೆಯ ಸಂಬಂಧವಾಗಿ ಚರ್ಚಿಸಲು ಇರಾನ್ ರಾಜಧಾನಿ ತೆಹರಾನ್‌ನಲ್ಲಿ ಇರಾನ್-ಪಾಕಿಸ್ಥಾನ್-ಭಾರತ ದೇಶಗಳ ವಕೀಲರು ಮತ್ತು ತಜ್ಞರ ಸಭೆಯನ್ನು ಕರೆಯಲಾಗಿತ್ತು. ಭಾರತ ಈ ಸಭೆಗೆ ತನ್ನ ಪ್ರತಿನಿಧಿಗಳನ್ನು ಕಳಿಸಲೇ ಇಲ್ಲ.

ಭಾರತ ಇದೇ ರೀತಿ ವಿಳಂಬ ಮಾಡುತ್ತಿದ್ದರೆ ಪಾಕಿಸ್ಥಾನದೊಂದಿಗೆ ತಾನು ಯೋಜನೆಯನ್ನು ಅಂತಿಮಗೊಳಿಸುತ್ತೇನೆ ಎಂದು ಇರಾನ್ ಸ್ಪಷ್ಟಪಡಿಸಿದೆ. ಭಾರತ ಮೊದಲು ಪಾಕಿಸ್ಥಾನದೊಂದಿಗೆ ಆ ದೇಶದ ಮೂಲಕ ಅನಿಲ ಸಾಗಿಸುವುದಕ್ಕೆ ಕೊಡಬೇಕಾದ ಶುಲ್ಕದ ಬಗೆಗೆ ಚರ್ಚಿಸಬೇಕು ... ಇತ್ಯಾದಿ ನೆಪ ಹೇಳುತ್ತಿದೆ. ಹೇಗೂ ನಷ್ಟ ಎದುರಿಸಬೇಕಾದದರು ಜನರಲ್ಲವೇ? ಇವರಿಗೇನು?

ನಿಮಗಿದು ಗೊತ್ತೆ

ನಮ್ಮ ಸಂಸತ್ತಿನ ಪ್ರತಿ ಒಂದು ದಿನದ ಕಲಾಪಕ್ಕೆ ಸರ್ಕಾರದ ಬೊಕ್ಕಸಕ್ಕೆ 90 ಲಕ್ಷ ರೂ ವೆಚ್ಚವಾಗುತ್ತದೆ. ಅಂದರೆ ಸಂಸತ್ ಕಲಾಪದ ಪ್ರತಿಯೊಂದು ನಿಮಿಷಕ್ಕೆ 2500 ರೂಪಾಯಿಗಳು ಖರ್ಚಾಗುತ್ತವೆ.

ಬಿಜೆಪಿ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಅವಕಾಶ ನೀಡದೆ ನಡೆಸುತ್ತಿರುವ ಗದ್ದಲದ ಬೆಲೆ ಎಷ್ಟು ನೀವೇ ಲೆಕ್ಕಮಾಡಿ ನೋಡಿ.

ಸಂಘ ಪರಿವಾರ

ಚಾತುವರ್ಣ ಮತ್ತೊಮ್ಮೆ ತರುವುದಕೆ ನೋಡಿ
ಹೊರಟಿಹರು ಕೆಲವು ಜನ ಒಂದಾಗಿ ಕೂಡಿ
ಹೀಗಾಗಿ ಪಡೆಯುವುದಕೆ ಪೂರ್ಣ ಅಧಿಕಾರ
ಏನೆಲ್ಲ ಮಾಡುತಿದೆ ಸಂಘ ಪರಿವಾರ

- ವಿಡಂಬಾರಿ


ಸಾಚಾರ್ ಸಮಿತಿ ಶಿಫಾರಸ್ಸು ಜಾರಿಯಲ್ಲಿ ನಿರುತ್ಸಾಹ

ಕೇಂದ್ರ ಯುಪಿಎ ಸರ್ಕಾರವು ಸಾಚಾರ್ ಸಮಿತಿಯ ಶಿಫಾರಸ್ಸು ಜಾರಿ ಮಾಡುವಲ್ಲಿ ಗಂಭೀರ ನಿರ್ಲಕ್ಷ್ಯ ತೋರುತ್ತಿದೆ. ಮುಸ್ಲೀಮರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಪ್ರಗತಿಗೆ ಅಗತ್ಯವಾದ ಇಚ್ಛಾಶಕ್ತಿ ತೋರುತ್ತಿಲ್ಲ...

ಸಾಚಾರ್ ಸಮಿತಿಯ ವರದಿ ಅಲ್ಪಸಂಖ್ಯಾತರ ತುಷ್ಟೀಕರಣ ನಡೆಯುತ್ತಿದೆ ಎಂಬ ಸಂಘಪರಿವಾರದ ಮಾತು ಕೇವಲ ಅಪಪ್ರಚಾರ ಎಂಬುದನ್ನು ವೈಜ್ಞಾನಿಕವಾಗಿ ಸಂಗ್ರಹಿಸಿದ ಸಾಕ್ಷಿಗಳ ಮೂಲಕ ಸಾಬೀತುಪಡಿಸಿತ್ತು. ಅಷ್ಟೇ ಅಲ್ಲ, ಅಲ್ಪಸಂಖ್ಯಾತರು, ಅದರಲ್ಲೂ ಮುಸ್ಲಿಮರು ವಂಚಿತರಾಗಿದ್ದಾರೆ. ವಿವಿಧ ರೀತಿಗಳಲ್ಲಿ ಪಕ್ಷಪಾತವನ್ನು ಎದುರಿಸುತ್ತಿದ್ದಾರೆ ಎಂದೂ ಅದು ಹೇಳಿತ್ತು. ಆದರೂ ಬಿಜೆಪಿ ನಾಚಿಕೆಯಿಲ್ಲದೆ ತನ್ನ ಮಂತ್ರೋಚ್ಚಾರಣೆಯನ್ನು ಮುಂದುವರೆಸಿದೆ, ಸಾಚಾರ್ ಸಮಿತಿಯ ಶಿಫಾರಸುಗಳ ಜಾರಿಯನ್ನು ವಿರೋಧಿಸುತ್ತದೆ. ಅತ್ತ ಯುಪಿಎ ಸರಕಾರ ಕೂಡಾ ಈ ಶಿಫಾರಸುಗಳ ಜ್ಯಾರಿಗೆ ಬಹಳ ಉತ್ಸುಕತೆಯನ್ನೇನು ತೋರುತ್ತಿಲ್ಲ ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳಿಗೆ ಬೇಸರ ತಂದಿರುವ ಸಂಗತಿ.

ಮಹತ್ವದ ವಿಷಯಗಳೇ ಮಾಯ

ಆಗಸ್ಟ್ 31, 2007 ರಂದು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಸಾಚಾರ ಸಮಿತಿಯ ಶಿಫಾರಸುಗಳನ್ನು ಅನುಸರಿಸಿ ಕೈಗೊಂಡ ಕ್ರಮಗಳ ಬಗ್ಗೆ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿತು. ಇದನ್ನು ನೋಡಿದರೆ ಯುಪಿಎ ಸರಕಾರ ಈ ನಿಟ್ಟಿನಲ್ಲಿ ಬಹಳ ಹಿಂದೆಬಿದ್ದಿದೆ ಎಂದೆನಿಸುತ್ತದೆ. ಇದರಲ್ಲಿ ಶಿಫಾರಸ್ಸುಗಳ ಜ್ಯಾರಿಗೆ ಒಂದು ಸಮಯ ಚೌಕಟ್ಟನ್ನೂ ಹಾಕಿಲ್ಲ, ಅಲ್ಲದೆ ಅವುಗಳ ಜ್ಯಾರಿಗೆ ನೀಡಿರುವ ನಿರ್ದಿಷ್ಟ ಹಣಕಾಸು ನೀಡಿಕೆಯ ಸಂಕೇತ ಕೂಡಾ ಈ ವರದಿಯಲ್ಲಿಲ್ಲ. ಕೆಲವು ಮಹತ್ವದ ವಿಷಯಗಳ ಪ್ರಸ್ತಾಪವೇ ಈ ಸರಕಾರದ ವರದಿಯಲ್ಲಿ ಕಾಣುತ್ತಿಲ್ಲ. ಕೋಮುವಾದಿ ಹಿಂಸಾಚಾರದಿಂದ ಸಂಕಟಗ್ರಸ್ತರಿಗೆ ನ್ಯಾಯ ನೀಡಿಕೆಯ ಪ್ರಸ್ತಾಪವಿಲ್ಲ, ಭೂಹೀನ, ವಸತಿಹೀನ ಅಲ್ಪಸಂಖ್ಯಾತ ಭೂಮಿ ನೀಡಿಕೆ, ಮನೆ ನಿವೇಶನ ನೀಡಿಕೆಯ ಮಾತೂ ಇಲ್ಲ. ಒಬಿಸಿ ಪಟ್ಟಿಯಲ್ಲಿ ಒಬಿಸಿ ಮುಸ್ಲಿಮರನ್ನು ಸೇರಿಸುವ ಬಗ್ಗೆಯೂ ಏನೂ ಇಲ್ಲ. ಸಿಪಿಐ(ಎಂ) ಮತ್ತು ಇತರ ಸಂಘಟನೆಗಳು ಮುಸ್ಲಿಂ ಮತ್ತು ಕ್ರಿಶ್ಚಿಯನ್ ದಲಿತರಿಗೂ ಮೀಸಲಾತಿ ನೀಡಬೇಕು ಎಂದು ಮುಂದಿಟ್ಟಿರುವ ಬೇಡಿಕೆಯ ಬಗ್ಗೆಯೂ ಪ್ರಸ್ತಾಪವಿಲ್ಲ.



ಇದು ಅಲ್ಪಸಂಖ್ಯಾತರಿಗೆ ನ್ಯಾಯ ದೊರಕಿಸುವ ಯುಪಿಎ ಸರ್ಕಾರದ ವಚನಕ್ಕೆ ಅನುಗುಣವಾಗಿಲ್ಲ. ಒಂದೆಡೆ ಬಿಜೆಪಿಯ ದುಷ್ಟ ಅಲ್ಪಸಂಖ್ಯಾತ ವಿರೋಧಿ ಪ್ರಚಾರ, ಇನ್ನೊಂದೆಡೆ ಯುಪಿಎ ಸರಕಾರದ ನಾಮಮಾತ್ರದ ಕ್ರಮ ಇವೆರಡರ ನಡುವೆ ಸಾಚಾರ್ ಸಮಿತಿಯ ಶಿಫಾರಸುಗಳನ್ನು ಸಮುದ್ರಕ್ಕೆ ಎಸೆಯಲಾಗುತ್ತಿದೆಯೇ ಎಂಬ ಸಂದೇಹ ಬಂದರೆ ಆಶ್ಚರ್ಯವಿಲ್ಲ. ಸೆಪ್ಟೆಂಬರ್ 24ರಂದು ಒಂದು ಪತ್ರಿಕಾ ಹೇಳಿಕೆ ನೀಡಿರುವ ಸಿಪಿಐ(ಎಂ)ನ ಸಂಸತ್ ಸದಸ್ಯರಾದ ಬೃಂದಾ ಕಾರಟ್ ಹಾಗೂ ಮುಹಮ್ಮದ್ ಸಲೀಂ ಈ ಸಂದೇಹವನ್ನು ನಿರ್ದಿಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಶಿಕ್ಷಣ ಮತ್ತು ಸಾಲ ನೀಡಿಕೆ, ಸಾಚಾರ್ ಸಮಿತಿಯ ಶಿಫಾರಸುಗಳಲ್ಲಿ ಮುಖ್ಯವಾದ ಈ ಎರಡು ವಲಯಗಳನ್ನು ನಿಕಟವಾಗಿ ಪರಿಶೀಲಿಸಿದರೆ ಯುಪಿಎ ಸರಕಾರಕ್ಕೆ ಸಾಚಾರ್ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುವ ರಾಜಕೀಯ ಇಚ್ಛಾಶಕ್ತಿಯಿಲ್ಲ ಎಂಬುದು ಕಾಣುತ್ತದೆ ಎಂದು ಅವರು ಹೇಳಿದ್ದಾರೆ.

ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ರಾಜ್ಯಮಂತ್ರಿ ಎಂ.ಎ.ಎ. ಫಾತ್ಮಿ ಅಡಿಯಲ್ಲಿನ ಉನ್ನತಮಟ್ಟದ ಸಮಿತಿ ಸಾಚಾರ್ ಸಮಿತಿಯ ಶಿಫಾರಸುಗಳನ್ನು ಕುರಿತಂತೆ ಒಂದು ಕಾರ್ಯಯೋಜನೆಯನ್ನು ತಯಾರಿಸಿತು. ಸರಕಾರ ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದಂತೆ ಕಾಣುತ್ತದೆ. ಅದೇಕೋ ಗೊತ್ತಿಲ್ಲ.

ಈ ಉನ್ನತ ಮಟ್ಟದ ಸಮಿತಿ ಜನವರಿ 2007ರಲ್ಲೇ ತನ್ನ ವರದಿ ಸಲ್ಲಿಸಿತ್ತು. ಅಲ್ಪಸಂಖ್ಯಾತರು ಹೆಚ್ಚಾಗಿರುವ ಜಿಲ್ಲೆ (ಎಂಸಿಡಿ)ಗಳಲ್ಲಿ ಒಂದು ನಿರ್ದಿಷ್ಟ ಗುರಿಯ ಸಾಕ್ಷರತಾ ಪ್ರಚಾರ, ಜನಶಿಕ್ಷಣ ಸಂಸ್ಥೆಗಳ ರಚನೆ, ಪ್ರತಿಯೊಂದು ಅಲ್ಪಸಂಖ್ಯಾತರು ಹೆಚ್ಚಿರುವ ಬ್ಲಾಕ್‌ನಲ್ಲಿ ಕಸ್ತೂರ ಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ)ಗಳಂತ ಹಾಗೂ ಮದರಸಾಗಳ ವಿಸ್ತರಣೆ ಹಾಗೂ ಆಧುನೀಕರಣ ಅದು ಸೂಚಿಸಿದ ಕಾರ್ಯಯೋಜನೆಯ ಮುಖ್ಯ ಅಂಶಗಳು. ಇವಕ್ಕೆ ಎಷ್ಟೆಷ್ಟು ಹಣ ಬೇಕಾದೀತು ಎಂದೂ ಸೂಚಿಸಲಾಗಿತ್ತು. ಇದರ ಒಟ್ಟು ಮೊತ್ತ 5434-30 ಕೋಟಿ ರೂಪಾಯಿಗಳಾಗುತ್ತದೆ. ಆದರೆ 2007 - 08ರ ಬಜೆಟ್ಟಿನಲ್ಲಿ ಈ ಶಿಫಾರಸನ್ನು ಪೂರ್ಣವಾಗಿ ನಿರ್ಲಕ್ಷಿಸಲಾಯಿತು.

ಬಾಲಿಕಾ ವಿಶ್ವವಿದ್ಯಾಲಯಗಳ ಸ್ಥಾಪನೆಗೆ 11ನೇ ಯೋಜನಾ ಅವಧಿಯಲ್ಲಿ 230 ಕೋಟಿ ರೂ.ಗಳನ್ನು ನೀಡಬೇಕೆಂದು ಸಮಿತಿ ಸೂಚಿಸಿತ್ತು. ಆದರೆ 11ನೇ ಯೋಜನೆಯ ಮೊದಲ ಬಜೆಟ್ಟಾದ 2007 - 08ರ ಬಜೆಟ್‌ನಲ್ಲಿ ಏನೂ ನೀಡಿಲ್ಲ. ಸಾಕ್ಷರತಾ ಮತ್ತು ಜನಶಿಕ್ಷಣ ಸಂಸ್ಥೆಗಳಿಗೆ ಇನ್ನೂ 1500 ಕೋಟಿ ರೂ.ಗಳನ್ನು ನೀಡಬೇಕಾಗಿತ್ತು. ಬಜೆಟ್ 2007-08ರಲ್ಲಿ ಇದಕ್ಕೂ ಏನಿಲ್ಲ. ಆಧುನೀಕರಣಕ್ಕೆ 625 ಕೋಟಿ ರೂ. ಹೆಚ್ಚಳಕ್ಕೆ ಪ್ರತಿಯಾಗಿ ಬಜೆಟ್‌ನಲ್ಲಿ ನೀಡಿದ ಹೆಚ್ಚಳ ಕೇವಲ 4.5 ಕೋಟಿ ರೂ. ಶಿಕ್ಷಣ ಕುರಿತ ಉನ್ನತವಮಟ್ಟದ ಸಮಿತಿಯ ಕಾರ್ಯಯೋಜನೆಯನ್ನು ಅನುಸರಿಸಲು ಸರಕಾರಕ್ಕೆ ಇಚ್ಛೆಯಿಲ್ಲ ಎಂದೇ ಇದು ತೋರಿಸುತ್ತದೆ.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ವಿಷಯದಲ್ಲೂ ನಿಧಾನಗತಿ. ಇಲ್ಲಿ ಬಜೆಟ್‌ನಲ್ಲೇನೋ ಪ್ರಕಟ ಮಾಡಲಾಗಿದೆ. ಆದರೆ ವಾಸ್ತವವಾಗಿ ಏನೂ ಹಣ ನೀಡಿಲ್ಲ. 2007- 08ರ ಬಜೆಟ್ಟಿನಲ್ಲಿ 200 ರೂ ವಿದ್ಯಾರ್ಥಿ ವೇತನಗಳಿಗೆ ಸ್ಕೀಮ್ ಅಂತಿಮಗೊಂಡ ಕೂಡಲೇ ಹಣ ನೀಡಲಾಗುವುದು ಎನ್ನಲಾಗುತ್ತಿತ್ತು. ಆದರೆ ಇದುವರೆಗೂ ಏನೂ ಕೊಟ್ಟಿಲ್ಲ. ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಗಳಿಗೆ 72 ಕೋಟಿ ರೂ, ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳಿಗೆ 90 ಕೋಟಿ ರೂ ಮತ್ತು ಪದವಿ ಮತ್ತು ಸ್ನಾತಕೋತ್ತರ ಮಟ್ಟಗಳಿಗೆ 48.6 ಕೋಟಿ ರೂ.ಗಳನ್ನು ನೀಡಲಾಗುವುದು ಎಂದು ಬಜೆಟ್ಟಿನಲ್ಲಿ ಹೇಳಲಾಗಿತ್ತು. ಆದರೆ ಮೊನ್ನೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ನೀಡಿದ ವರದಿಯ ಪ್ರಕಾರ 20,000 ವಿದ್ಯಾರ್ಥಿ ವೇತನಗಳಿಗೆ 'ಮಂಜೂರಾತಿ' ನೀಡಲಾಗಿದೆ ಹಾಗೂ ಮೇಲೆ ಹೇಳಿದ ಮೂರು ಮಟ್ಟಗಳ ವಿದ್ಯಾರ್ಥಿ ವೇತನಗಳನ್ನು 'ಇಷ್ಟರಲ್ಲೇ ನೀಡಲಾಗುವುದು' ಎಂದು ಹೇಳಲಾಗಿದೆ ಅಷ್ಟೆ.

ಸಾಲ ನೀಡಿಕೆಯಲ್ಲೂ ಅದೇ ನಿರ್ಲಕ್ಷ್ಯ

ಅಲ್ಪ ಸಂಖ್ಯಾತ ಸಮುದಾಯಗಳಿಗೆ ಆದ್ಯತಾ ವಲಯದ ಸಾಲಗಳಲ್ಲಿ ಶೇ.15 ಸಿಗುವಂತೆ ಮಾಡಲಾಗುವುದು ಎಂದು ಪ್ರಧಾನ ಮಂತ್ರಿಗಳು ವಚನ ನೀಡಿದ್ದರು. ಅವರದ್ದೇ ಸರಕಾರದ ಬೇರೆ ಇಲಾಖೆಗಳು ಇದನ್ನು ನಿರ್ಲಕ್ಷಿಸಿವೆ.

ಮುಸ್ಲಿಂ ಸಮುದಾಯದಲ್ಲಿ ಒಂದು ದೊಡ್ಡ ವಿಭಾಗ ಸ್ವ-ಉದ್ಯೋಗಿಗಳು ಆದ್ದರಿಂದ ಸುಲಭ ದರಗಳಲ್ಲಿ ಸಾಲ ಸೌಲಭ್ಯ ಸಮುದಾಯದ ಜನಗಳ ಬದುಕನ್ನು ಹಸನುಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸಬಲ್ಲುದು. ಆದ್ಯತಾ ವಲಯದ ಸಾಲಗಳಲ್ಲಿ ಅಲ್ಪಸಂಖ್ಯಾತರು ಪಡೆದ ಪಾಲು ಮಾರ್ಚ್ 2002ರಲ್ಲಿ ಶೇ.9.62 ಇದ್ದದ್ದು ಮಾರ್ಚ್ 2006ರಲ್ಲಿ ಶೇ 9.35ಕ್ಕಿಳಿಯಿತು. ಸಾಚಾರ್ ಸಮಿತಿಯ ಶಿಫಾರಸಿನ ಪ್ರಕಾರ ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮ ಆದ್ಯತಾ ವಲಯದ ಒಂದು ಸೂಕ್ತ ಶೇಕಡಾವನ್ನು ಅಲ್ಪಸಂಖ್ಯಾತ ಸಮುದಾಯಗಳು ಪಡೆಯುವಂತಾಗಬೇಕು ಎಂದಿತ್ತು. ಆದರೆ ಈ 'ಸೂಕ್ತ' ಶೇಕಡಾ ಎಷ್ಟು ಎಂದು ನಿರ್ದಿಷ್ಟಪಡಿಸಲು ಕೂಡಾ ಯುಪಿಎ ಸರಕಾರ ಹಿಂದೇಟು ಹಾಕುವುದು ಕಂಡುಬಂದಿದೆ. ಪ್ರಧಾನಮಂತ್ರಿಗಳ ಕಚೇರಿ ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಶೇ.15ರ ಗುರಿಯಿಟ್ಟುಕೊಳ್ಳಬೇಕು ಎಂದು ಹಣಕಾಸು ಸಚಿವಾಲಯಕ್ಕೆ ಎಂದು ಪತ್ರಗಳನ್ನು ಬರೆದರೂ ಮೌನ. ಕೊನೆಗೆ ಜನವರಿ 2007ರಲ್ಲಿ ಶೇ.15 ಗುರಿಯಿಟ್ಟು ಕೊಳ್ಳಬೇಕೆಂದು ಪತ್ರ ಬರೆದಿರುವುದಾಗಿ ಒಪ್ಪಿಕೊಂಡರು. ಆದರೆ ಇದನ್ನು ಇನ್ನಷ್ಟು ಇಳಿಸಿದ ಹಾಗೆ ಕಾಣುತ್ತದೆ. ಏಕೆಂದರೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ ಕಾರ್ಯ ವರದಿ ಮುಂದಿನ ಮೂರು ವರ್ಷಗಳಲ್ಲಿ ಶೇ.15ರ ಮಟ್ಟ ತಲುಪಲಾಗುತ್ತದೆ ಎಂದಿದೆ. ಆದರೆ ಯುಪಿಎ ಸರಕಾರ ಈ ಮಟ್ಟವನ್ನಾದರೂ ತಲುಪುತ್ತದೆಯೋ ಎಂಬ ಬಗ್ಗೆ ಅನುಮಾನವಿದೆ. ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಅಲ್ಪಸಂಖ್ಯಾತರೇ ಹೆಚ್ಚಾಗಿರುವ ಜಿಲ್ಲೆಗಳನ್ನು ಗುರುತಿಸಿ ಈ ವಿಭಾಗದ ಜನಗಳಿಗೆಲ್ಲಾ ಸಾಲಸೌಲಭ್ಯ ಒದಗಿಸುವ ವಿಶೇಷ ಕಾರ್ಯಕ್ರಮವನ್ನು ರಿಸರ್ವ್ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಗಳು ನಡೆಸಿವೆ ಎನ್ನಲಾಗಿದೆ. ಈ ಕುರಿತ ರಿಝರ್ವ್ ಬ್ಯಾಂಕಿನ ವರದಿ ಇಂತಹ 121 ಜಿಲ್ಲೆಗಳ ಪಟ್ಟಿಯನ್ನು ಹಣಕಾಸು ಸಚಿವಾಲಯ ಕಳಿಸಿದೆ ಎಂದು ಹೇಳಿದೆ. ಆದರೆ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯದ ಪ್ರಕಾರ ಇಂತಹ ಜಿಲ್ಲೆಗಳ ಸಂಖ್ಯೆ 90. ಇದರಲ್ಲೂ ರಿಝರ್ವ್ ಬ್ಯಾಂಕ್ ವರದಿಯ ಪ್ರಕಾರ ಅದು ಇದುವರೆಗೆ ಮಹಾರಾಷ್ಟ್ರದಲ್ಲಿ 4, ತಮಿಳುನಾಡಿನಲ್ಲಿ ಮೂರು ಮತ್ತು ಹರ್ಯಾಣಾದಲ್ಲಿ ಒಂದು, ಒಟ್ಟು 8 ಇಂತಹ ಜಿಲ್ಲೆಗಳನ್ನು ಮಾತ್ರ ಗುರುತಿಸಿದೆ. ಯಾವ ಆಧಾರದಲ್ಲಿ ಎಂದು ತಿಳಿದಿಲ್ಲ. ರಿಸರ್ವ್ ಬ್ಯಾಂಕಿನ ವರದಿಯಲ್ಲಿ ಶೇ.15 ಗುರಿಯ ಪ್ರಸ್ತಾಪವೂ ಇಲ್ಲ.

ಗಲಭೆ ಸಂತ್ರಸ್ತರಿಗೆ ನ್ಯಾಯವೆಲ್ಲಿ?

ಕೋಮುಗಲಭೆಗಳಿಗೆ ಒಳಗಾಗಿ ಸಂಕಟಗ್ರಸ್ತರಾದವರಿಗೆ ನ್ಯಾಯ ದೊರಕಿಸಿಕೊಡುವಲ್ಲಂತೂ ಯುಪಿಎ ಸರಕಾರದ ದಾಖಲೆ ಅತ್ಯಂತ ನಿರಾಶಾದಾಯಕ. 2002ರಲ್ಲಿ ಗುಜರಾತಿನಲ್ಲಿ ನಡೆದ ಪ್ರಮುಖ ಕೊಲೆ, ಸುಲಿಗೆ ಮೊಕದ್ದಮೆಗಳ ಸಿಬಿಐ ತನಿಖೆ ನಡೆಸಬೇಕೆಂಬ ಬೇಡಿಕೆಯನ್ನು ಕೇಂದ್ರ ಸರಕಾರ ಒಪ್ಪಿಲ್ಲ. ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಅಪರಾಧಿಗಳಿಗೆ ಇನ್ನೂ ಶಿಕ್ಷೆಯಾಗಿಲ್ಲ. ಅಲ್ಲದೆ ಕಾಂಗ್ರೆಸ್ ನೇತೃತ್ವದ ಮಹಾರಾಷ್ಟ್ರ ಸರಕಾರ ಶ್ರೀಕೃಷ್ಣ ಆಯೋಗದ ವರದಿಯ ಮೇಲೆ ಇನ್ನೂ ಕ್ರಮ ಕೈಗೊಂಡಿಲ್ಲ. ಮುಂಬೈ ಗಲಭೆಗಳ ಕುರಿತ ಈ ವರದಿ ಹಲವು ರಾಜಕೀಯ ಮುಖಂಡರ, ಪೊಲೀಸ್ ಅಧಿಕಾರಿಗಳ ಹೆಸರುಗಳನ್ನು ನಮೂದಿಸಿದ್ದು ಈ ವರದಿಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ದೇಶದೆಲ್ಲೆಡೆಯಿಂದ ಒತ್ತಾಯ ಬಂದಿದ್ದರೂ ಕಾಂಗ್ರೆಸ್ ನೇತೃತ್ವದ ಸರಕಾರ ಸುಮ್ಮನೆ ಕೂತಿದೆ. "ಯಾವುದಾದರೂ ಕೋಮು ದಂಗೆ ನಡೆದಾಗ ಸರಕಾರ ಪ್ರದರ್ಶಿಸುವ ಸೋಗಿನ ನಿಲುವು ಮತ್ತು ರಾಜಕೀಯ ಪ್ರಯೋಜನ ಪಡೆಯುವ ಪ್ರವೃತ್ತಿ ಈ ಸಮುದಾಯಕ್ಕೆ ಅತ್ಯಂತ ನೋವಿನದ್ದಾಗಿದೆ. ಕೋಮು ಹಿಂಸಾಚಾರ ನಡೆಸುವುದನ್ನು ಶಿಕ್ಷಿಸುವಲ್ಲಿ ಸರಕಾರದ ನಿಷ್ಕ್ರಿಯತೆ ಸಹಾ ಒಂದು ನೋವಿನ ಸಂಗತಿಯಾಗಿದೆ ಎಂದು ಸಾಚಾರ್ ಸಮಿತಿಯೂ ಗಮನಿಸಿತ್ತು. ಈ ನೋವು ಹಾಗೆಯೇ ಉಳಿಯುವಂತಾಗಿದೆ.

ಸಮಾಜದ ದುರ್ಬಲ ವಿಭಾಗಗಳಾದ ಪರಿಶಿಷ್ಟ ಜಾತಿಗಳವರಿಗೆ ಮತ್ತು ಬುಡಕಟ್ಟು ಜನಗಳಿಗೆ ಪ್ರತ್ಯೇಕ ಉಪಯೋಜನೆಯನ್ನು ಅಥವಾ ವಿಶೇಷ ಅಂಗಯೋಜನೆಯನ್ನು ಮಾಡುವಂತೆ ಅಲ್ಪಸಂಖ್ಯಾತರಿಗೂ ಒಂದು ಉಪಯೋಜನೆಯನ್ನು ತಯಾರಿಸಬೇಕು ಎಂಬ ಬೇಡಿಕೆಯಿದೆ. ಮಾರ್ಚ್ 2007ರಲ್ಲಿ ದಿಲ್ಲಿಯಲ್ಲಿ ಸಿಪಿಐ(ಎಂ) ಮುತುವರ್ಜಿಯಿಂದ ನಡೆದ ಅಖಿಲ ಭಾರತ ಸಮಾವೇಶ ಪ್ರಧಾನಮಂತ್ರಿಗಳಿಗೆ ಮುಸ್ಲಿಂ ಸಮುದಾಯದ ಮುನ್ನಡೆ ಕುರಿತಂತೆ ಸಲ್ಲಿಸಿದ ಬೇಡಿಕೆ ಪಟ್ಟಿಯಲ್ಲಿ ಬೇಡಿಕೆಯಿದೆ. ಪಶ್ಚಿಮ ಬಂಗಾಳದ ಎಡರಂಗ ಸರಕಾರ ಈಗಾಗಲೇ ತನ್ನ 2007-08ರಲ್ಲಿ ಇಂತಹ ಒಂದು ಉಪಯೋಜನೆಯನ್ನು ಪ್ರಕಟಿಸಿದೆ. ಆದರೆ ಯುಪಿಎ ಸರಕಾರ ಇನ್ನೂ ಈ ಬೇಡಿಕೆಯನ್ನು ಸ್ವೀಕರಿಸಿಲ್ಲ. ಇಂತಹ ಒಂದು ನಿರ್ದಿಷ್ಟ ಸಂಪನ್ಮೂಲಗಳನ್ನು ಒದಗಿಸುವ ವಿಶೇಷ ಉಪಯೋಜನೆಯಿಲ್ಲದೆ, ಸಾಚಾರ್ ಸಮಿತಿಯ ಶಿಫಾರಸುಗಳನ್ನು ಸಮಗ್ರ ರೀತಿಯಲ್ಲಿ ಜ್ಯಾರಿ ಮಾಡಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಬೃಂದಾಕಾರಟ್ ಹಾಗೂ ಅಲ್ಪಸಂಖ್ಯಾತರ ಸಮಿತಿಯ ಸಂಚಾಲಕರಾದ ಮಹಮ್ಮದ್ ಸಲೀಂ ಹೇಳುತ್ತಾರೆ.

ಜನಶಕ್ತಿ ಕನ್ನಡ ವಾರಪತ್ರಿಕೆ
ಅಕ್ಟೋಬರ್ 07, 200

ಅಭಿವೃದ್ಧಿಯ ಜಪ ಭೂಮಿ ನುಂಗಲು ನೆಪ



ರಾಜ್ಯದ ಜನತೆಗೆ ಉದ್ಯೋಗ, ಉತ್ತಮ ಜೀವನ ಗುಣಮಟ್ಟ, ಮತ್ತು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ದಿಸೆಯಲ್ಲಿ ನೆರವಾಗುವ ವಿಶೇಷ ಆರ್ಥಿಕ ವಲಯಗಳನ್ನು ಸ್ವಾಗತಿಸೋಣ. ಒಂದು ಕೈಗಾರಿಕೆ ಅಥವಾ ವಿಶೇಷ ಆರ್ಥಿಕ ವಲಯ ಸ್ಥಾಪನೆಯಿಂದ ಆಯಾಯ ರಾಜ್ಯಕ್ಕೆ ಲಭಿಸುವ ಲಾಭವೇನು ಎಂಬುದರ ಮೇಲೆ ಕೈಗಾರಿಕೆಗಳಿಗೆ ವಿನಾಯಿತಿ ಮತ್ತು ವಿಶೇಷ ಸವಲತ್ತುಗಳನ್ನು ನೀಡಬೇಕು. ಆದರೆ, ದೇಶದಾದ್ಯಂತ ವಿಶೇಷ ಆರ್ಥಿಕ ವಲಯಗಳೆಂಬ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ರಾತ್ರೋರಾತ್ರಿ ನಾಯಿಕೊಡೆಗಳಂತೆ ಹುಟ್ಟಿಕೊಂಡ ಕಂಪನಿಗಳಿಗೆಲ್ಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಜಮೀನನ್ನು ಕೊಡುತ್ತಿವೆ. ಇಂಥಹ ವಿಶೇಷ ಆರ್ಥಿಕ ವಲಯಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಿಗೆ 15ವರ್ಷಗಳ ಕಾಲ ಆದಾಯ ತೆರಿಗೆ, ಅಬಕಾರಿ ಸುಂಕ ಮತ್ತು ವ್ಯಾಪಾರ ತೆರಿಗೆ ಯಂಥಹ ಹಲವಾರು ತೆರಿಗೆ ರಜೆಯಿರುತ್ತದೆ. ಅಲ್ಲದೆ ಇಂಥಹ ವಲಯಗಳನ್ನು 'ವಿದೇಶಿ ನೆಲ'ದಂತೆ ಪರಿಗಣಿಸಿ ಕಾರ್ಮಿಕ ಇಲಾಖೆ, ಆದಾಯ ತೆರಿಗೆ ಇಲಾಖೆ, ಮಾಲಿನ್ಯ ಮಂಡಳಿ, ಕಾರ್ಖಾನೆ ಪರಿವೀಕ್ಷಕರು ಇನ್ನಿತರ ಯಾವೊಂದು ಸರ್ಕಾರಿ ಇಲಾಖೆಯ ಅಧಿಕಾರಿಗಳು ಈ ವಲಯದೊಳಗೆ ಪ್ರವೇಶಿಸುವ ಹಕ್ಕನ್ನು ಹೊಂದಿರುವುದಿಲ್ಲ. ಈ ಅನಿರ್ಬಂಧಿತ ಅವಕಾಶಗಳು ಯಾಕೆ? ಗಗನಮುಖಿಯಾಗಿ ಏರುತ್ತಿರುವ ಬೆಂಗಳೂರಿನ ಚಿನ್ನದಂಥಹ ಭೂಮಿ ಬೆಲೆಯಿಂದಾಗಿ ನಿದ್ದೆಗೆಡುತ್ತಿದ್ದ ಭೂಗಳ್ಳರಿಗೆ ಇದು ವರದಾನವಾಗಿ ಪರಿಣಮಿಸಿದೆ. ವಿಶೇಷ ಆರ್ಥಿಕ ವಲಯಗಳಿಗೆ ನೀಡುತ್ತಿರುವ ತೆರಿಗೆ ವಿನಾಯಿತಿಯಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ರೂ. 1,65,000 ಕೋಟಿಯಷ್ಟು ನಷ್ಟವಾಗುತ್ತದೆಂದು ಆರ್ಥಿಕ ಇಲಾಖೆ ತಿಳಿಸಿದ್ದರೂ, ಈ ನಷ್ಟ ಸರ್ಕಾರಕ್ಕೆ ಮಾತ್ರವೇ ಹೊರತು ಖಾಸಗಿ ಕಂಪನಿಗಳಿಗೆ ಅಲ್ಲವಲ್ಲ ಎಂಬಂತಿದೆ ಕೇಂದ್ರ ಮತ್ತು ಹಲವು ರಾಜ್ಯ ಸರ್ಕಾರದ ಧೋರಣೆಗಳು. ಇಷ್ಟೊಂದು ಹಾನಿ ಮಾಡಿಕೊಳ್ಳುವುದು ಅಗತ್ಯವೇ? ಇದಕ್ಕೆ ತಕ್ಕಂತೆ ಉದ್ಯೋಗ, ಆರ್ಥಿಕ ಅಭಿವೃದ್ಧಿ ಸಾಧಿಸಲಾಗುತ್ತದೆಯೇ ಎಂದು ಪರಿಶೀಲಿಸಬೇಕು.

ರಾಜ್ಯದ ಬಡಜನತೆಯ ಜೀವನ ಗುಣಮಟ್ಟ ಉತ್ತಮಗೊಳ್ಳಬೇಕಾದರೆ ಅದರಲ್ಲೂ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಬೇಕಾದರೆ ರಾಜ್ಯದ ಕೈಗಾರಿಕಾಭಿವೃದ್ಧಿ ಅತ್ಯವಶ್ಯ. ಬೃಹತ್ ಕೈಗಾರಿಕೆಗಳ ಸ್ಥಾಪನೆ, ಹೆಚ್ಚಿನ ಮಟ್ಟದಲ್ಲಿ ಬಂಡವಾಳ ಹೂಡಿಕೆ ಮತ್ತು ಮೂಲಭೂತ ಸೌಕರ್ಯಗಳನ್ನು ಉತ್ತಮಗೊಳಿಸುವುದು ಇಂದಿನ ಜರೂರಿಯಾಗಿದೆ. ಆದರೆ, ನೈಜ ಬಂಡವಾಳ ಹೂಡಿಕೆ ಮತ್ತು ಕೈಗಾರಿಕೆಗಳ ಸ್ಥಾಪನೆಯ ಜೊತೆಜೊತೆಗೆ ಬೋಗಸ್ ಕಂಪನಿಗಳು ಭೂಮಿಯನ್ನು ಲೂಟಿ ಮಾಡಲು ತಮ್ಮ ದಂಧೆಯನ್ನು ಆರಂಭಿಸಿರುವುದು ಆತಂಕಕಾರಿ ವಿಷಯ. ಇಂಥಹ ಕೈಗಾರಿಕೋದ್ಯಮಿಗಳಿಗೆ ಹೊಸ ಭೂಮಿಯೇ ಬೇಕು, ಅದೂ ನಗರದಂಚಿನಲ್ಲಿ ಮುಂದೊಂದು ದಿನ ಅಗಾಧ ಲಾಭತರುವ ಭೂಮಿಯೇ ಬೇಕು. ಅದರಲ್ಲೂ ಬೆಂಗಳೂರು ನಗರ, ಮೈಸೂರು, ಮಂಗಳೂರು ಮತ್ತು ಬೆಳಗಾವಿಯಂಥಹ ದೊಡ್ಡ ನಗರಗಳೇ ಬೇಕು. ಏಕೆಂದರೆ, ಇಂಥಹ ಭೂಮಿಗಳಿಗೆ ಸದ್ಯದ ಭವಿಷ್ಯತ್ತಿನಲ್ಲಿ 'ಕನಸಿನ ರಿಯಲ್ ಎಸ್ಟೇಟ್ ಮೌಲ್ಯ' ಬರುತ್ತದೆ.

> ಕೈಗಾರಿಕಾ ಅಭಿವೃದ್ಧಿಗೆಂದು ವಶಪಡಿಸಿಕೊಳ್ಳಲಾದ ಭೂಮಿ ಘೋಷಿತ ಉದ್ದೇಶಕ್ಕೆ ಪೂರ್ಣವಾಗಿ ಬಳಕೆಯಾಗುತ್ತಿಲ್ಲ; ಬದಲಾಗಿ ಖಾಸಗಿ ಕುಳಗಳ ಭೂ ದಂಧೆಗೆ ಗ್ರಾಸವಾಗುತ್ತಿದೆ. ಈ ದಂಧೆಯಲ್ಲಿ ಕಾಂಗ್ರೆಸ್, ಜೆಡಿ(ಎಸ್), ಬಿಜೆಪಿ ಎಂಬ ಬೇಧವೇ ಇಲ್ಲ. ಎಲ್ಲರೂ ಸಮಾನ ಮನಸ್ಕರೆ.

ಕೈಗಾರಿಕಾ ಅಭಿವೃದ್ಧಿಕಾರ್ಯ ಕೇವಲ ಸರ್ಕಾರಿ ಘೋಷಣೆಗಳಲ್ಲಿ:

ಐಟಿ, ಬಿಟಿ, ವ್ಯಾಪಾರ ಹೊರಗುತ್ತಿಗೆ, ಸಕ್ಕರೆ ಕಾರ್ಖಾನೆಗಳು, ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗಳು, ಪ್ರವಾಸೋದ್ಯಮ ಕೇಂದ್ರಗಳು ಇತ್ಯಾದಿ 59 ಯೋಜನೆಗಳಿಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ. ಸುಮಾರು ರೂ, 69,150 ಕೋಟಿ ಬಂಡವಾಳ ಹೂಡಿಕೆಯಾಗಿದ್ದು ಇದರಲ್ಲಿ 14 ವಿಶೇಷ ಆರ್ಥಿಕ ವಲಯ ಯೋಜನೆಗಳೂ ಸೇರಿಕೊಂಡಿವೆ. ಇದರಿಂದ ರಾಜ್ಯದಲ್ಲಿ ಸುಮಾರು 6.8 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತದೆಂದು ಕಳೆದ ವಾರವಷ್ಟೆ ರಾಜ್ಯ ಸರ್ಕಾರ ಘೋಷಿಸಿದೆ. ಆದರೆ, ಈ ಯೋಜನೆಗಳಿಂದ 10ಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತವೆಂದು ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹೇಳಿದ್ದಾರೆ. ಬಂಡವಾಳ ಹೂಡಿಕೆಯಾಗಿ ನಿಜವಾಗಿಯೂ ಕೈಗಾರಿಕೆಗಳು ಕಾರ್ಯನಿರತ ಹಂತ ತಲುಪುವಲ್ಲಿ ರಾಜ್ಯದ ಹಿನ್ನೆಲೆಯನ್ನು ಅವಲೋಕಿಸಿದರೆ, ಸರ್ಕಾರದ ಘೋಷಣೆಯಲ್ಲಿ ಶೇ. 60ಷ್ಟು ಬಂಡವಾಳ ಹೂಡಿಕೆಯಾಗಿ ಉದ್ಯೋಗವಕಾಶ ದೊರೆತರೂ ಸಂತೋಷಪಡಬಹುದು.



ರಾಜ್ಯದಲ್ಲಿ ವಿಶೇಷ ಆರ್ಥಿಕ ವಲಯಗಳು:

ರಾಜ್ಯ ಸರ್ಕಾರ ಕಳೆದ ಒಂದು ವರ್ಷದಿಂದೀಚೆಗೆ, 63 ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ಅನುಮೋದನೆ ನೀಡಿದೆ. ಈ ಯೋಜನೆಗಳಿಗೆ 27,000ಕ್ಕೂ ಹೆಚ್ಚು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಯೋಜನೆಗಳಿಂದ ರೂ. 48,626 ಕೋಟಿ ಬಂಡವಾಳ ಹೂಡಿಕೆಯಾಗಿ 11.0 ಲಕ್ಷ ಉದ್ಯೋಗ ಸೃಷ್ಟಿಯಾಗುತ್ತದೆಂದು ಅಂದಾಜು ಮಾಡಲಾಗಿದೆ. ಇವಲ್ಲದೆ ಇನ್ನು 50ಕ್ಕೂ ಹೆಚ್ಚು ವಿಶೇಷ ಆರ್ಥಿಕ ವಲಯ ಯೋಜನೆಯ ಪ್ರಸ್ತಾವನೆಗಳು ಸರ್ಕಾರದ ಅನುಮತಿಗಾಗಿ ಕಾದುಕುಳಿತಿವೆ. ಈ ಪಟ್ಟಿಯಲ್ಲಿ ರಾತ್ರೋರಾತ್ರಿ ಸ್ಥಾಪನೆಯಾಗಿ ಭೂಮಿಗಾಗಿ ಪ್ರಸ್ತಾವನೆ ಸಲ್ಲಿಸಿರುವ ಕಂಪನಿಗಳೂ ಇವೆ. ಇಂಥಹ ಕಂಪನಿಗಳ ಪ್ರಸ್ತಾವನೆಯನ್ನು ಕೂಲಂಕೂಶವಾಗಿ ಪರಿಶೀಲಿಸಿ, ಕಂಪನಿ ಹೂಡುವ ಬಂಡವಾಳ, ಅದು ತನ್ನೊಂದಿಗೆ ತರುವ ತಂತ್ರಜ್ಞಾನ, ಮತ್ತು ಅಂಥಹ ಯೋಜನೆಯಿಂದ ಸೃಷ್ಟಿಯಾಗುವ ಉದ್ಯೋಗವಕಾಶ ಇತ್ಯಾದಿ ಅಂಶಗಳನ್ನು ಸರ್ಕಾರ ತುಲನೆ ಮಾಡುತ್ತಿದೆಯೇ ಎಂಬುದು ಕೂಡ ಸಂಶಯವೇ. ವಿಶೇಷ ಆರ್ಥಿಕ ವಲಯ ಯೋಜನೆಗಳಿಗೆ ಅವಶ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಟ್ಟ ಮೇಲೆ ಈ ಯೋಜನೆಯ ಪ್ರವರ್ತಕರು ಆರಂಭದಲ್ಲಿ ತಾವು ತಿಳಿಸಿರುವಷ್ಟೇ ಬಂಡವಾಳ ಹೂಡುತ್ತಾರೆನ್ನುವುದಕ್ಕೆ ಮತ್ತು ನಿರೀಕ್ಷಿಸಿರುವಷ್ಟು ಉದ್ಯೋಗವಕಾಶ ನೀಡುತ್ತಾರೆನ್ನುವುದಕ್ಕೆ ಸರ್ಕಾರವೂ ಕೂಡ ಯಾವುದೇ ಖಾತರಿ ಪಡೆಯುವುದಿಲ್ಲ.

ಖಾಲಿಯಿರುವ ಕೈಗಾರಿಕಾ ಭೂಮಿ ಬಿಟ್ಟು ಬಡರೈತರ ಕೃಷಿ ಭೂಮಿಯತ್ತ:

ದಿ: 30.06.2004ರ ಅಂಕಿಅಂಶದ ಪ್ರಕಾರ ಕೆಐಎಡಿಬಿ ಯು ರಾಜ್ಯದ 24 ಜಿಲ್ಲೆಗಳಲ್ಲಿ 94 ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಿದೆ. ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ 27,621.07 ಎಕರೆಯಷ್ಟು ಜಮೀನನ್ನು ವಶಪಡಿಸಿಕೊಂಡಿದ್ದು ಅದರಲ್ಲಿ 16,684 ಎಕರೆಯಷ್ಟು ಜಮೀನು ಕೈಗಾರಿಕೆಗಳಿಗೆ ಹಂಚಿಕೆಯಾಗಿದ್ದರೆ, 7,414 ಎಕರೆಯಷ್ಟು ಜಮೀನು ಇನ್ನೂ ಹಂಚಿಕೆಯಾಗದೆ ಬಾಕಿಯುಳಿದಿದೆ. ಆದರೆ ಈ ಸಂಸ್ಥೆಯು ಅಭಿವೃಧ್ಧಿಪಡಿಸಿರುವ ಕೈಗಾರಿಕಾ ಪ್ರದೇಶದೊಳಗೆ ಒಳಹೊಕ್ಕು ನೋಡಿದರಷ್ಟೆ ನಿಜ ಗೊತ್ತಾಗುವುದು, ಸರ್ಕಾರದ ಬಣ್ಣ ಬಯಲಾಗುವುದು. ಕೆಐಎಡಿಬಿ ಸಂಸ್ಥೆಯು ವಶಪಡಿಸಿಕೊಂಡು ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಿರುವ ಜಮೀನಿನಲ್ಲಿ ಶೇ. 60ರಷ್ಟು ಕೈಗಾರಿಕೆಗಳು ಮುಚ್ಚಿಹೋಗಿವೆ ಅಥವಾ ಗೋಡೌನ್‌ನಂತೆ ಬಳಸಲಾಗುತ್ತಿದೆ. ರಾಜ್ಯ ಸರ್ಕಾರ ತಾನು ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಳ ರಸ್ತೆ, ವಿದ್ಯುಚ್ಛಕ್ತಿ, ಚರಂಡಿ, ನೀರು ಪೂರೈಕೆಯಂಥಹ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸದೆ ಈ ಕೈಗಾರಿಕಾ ಪ್ರದೇಶಗಳು ದನದ ಕೊಟ್ಟಿಗೆಯಂತೆ ಪಾಳು ಬಿದ್ದಿವೆ.



ನುಂಗಣ್ಣಗಳ ನಾಯಕ ಸಚಿವ ಕಟ್ಟಾ

ಅಲ್ಲದೆ, ರಾಯಚೂರು, ಧಾರವಾಡ ಮತ್ತು ಹಾಸನಗಳಲ್ಲಿ ಈಗಾಗಲೇ ಹದಿನೈದು ವರ್ಷಗಳ ಹಿಂದೆ ಸ್ಥಾಪಿಸಿರುವ ತಲಾ 2,000 ಎಕರೆ ಕೈಗಾರಿಕಾ ಬೆಳವಣಿಗೆ ಕೇಂದ್ರಗಳಲ್ಲಿ, ಕೈಗಾರಿಕೆಗಳೇ ಇಲ್ಲದೆ ಸ್ಮಶಾನದಂತೆ ಗಾಢ ಮೌನ ಆವರಿಸಿದೆ.

ಹೀಗೆ ಪಾಳುಬಿದ್ದಿರುವ ಕೈಗಾರಿಕಾ ಪ್ರದೇಶಗಳ ರಸ್ತೆ, ಚರಂಡಿ ವ್ಯವಸ್ಥೆ, ನೀರು ಸರಬರಾಜು, ಬೀದಿ ದೀಪ, ನಿರಂತರ ವಿದ್ಯುಚ್ಛಕ್ತಿ, ಇತ್ಯಾದಿಯಂಥಹ ಮೂಲಭೂತ ಸೌಕರ್ಯಗಳನ್ನು

ಪುಟ 11 ಕ್ಕೆ


ಭೂಮಾಫಿಯಾ ಮತ್ತು ಸರ್ಕಾರಿ ಪಾಳೇಗಾರಿ ಸಂಸ್ಥೆಯಂತಾಗಿರುವ ಕೆಐಎಡಿಬಿ

ಕೈಗಾರಿಕೆ ಸ್ಥಾಪನೆಗಾಗಿ ಅಗತ್ಯ ಭೂಮಿಯನ್ನು ಸ್ವಾಧೀನಪಡಿಸಿ ಕೊಳ್ಳಬೇಕಾಗುತ್ತದೆ. ನಿರ್ದಿಷ್ಟ ಕೈಗಾರಿಕಾ ಯೋಜನೆಗೆ ಅವಶ್ಯವಿರುವ ಭೂಮಿಯನ್ನಷ್ಟೆ ನೀಡುವುದು ಸರ್ಕಾರದ ಜವಾಬ್ದಾರಿ. ಆದರೆ, ಕೈಗಾರಿಕೆಗಳಿಗೆ ಅವಶ್ಯವಿರುವಷ್ಟು ಭೂಮಿಯನ್ನು ತುಲನೆ ಮಾಡದೆ ಕೋರಿದಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ನೀಡುವುದು ಜನ-ವಿರೋಧಿಯೇ ಸರಿ. ಉದಾಹರಣೆಗೆ ನೈಸ್ ಕಂಪನಿಯು ಉದ್ದೇಶಿಸಿದ್ದ ಬೆಂಗಳೂರು-ಮೈಸೂರು ನಡುವಿನ 111 ಕಿ.ಮೀ ಉದ್ದದ ಚತುಷ್ಪಥ ರಸ್ತೆ ಯೋಜನೆಗೆ ಆರಂಭದಲ್ಲಿ 20,193ಎಕರೆ ಭೂಮಿಯನ್ನು ನೀಡಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿತ್ತು. ನಂತರದಲ್ಲಿ ಕಂಪನಿಯ ಕೋರಿಕೆ ಮೇರೆಗೆ 29,143 ಎಕರೆ ಭೂಮಿಯನ್ನು ಸರ್ಕಾರ ಕೆಐಎಡಿಬಿ ಮೂಲಕ ಸ್ವಾಧೀನಪಡಿಸಿಕೊಂಡು ನೈಸ್ ಕಂಪನಿಗೆ ನೀಡಿತು. ನೈಸ್ ಕಂಪನಿಯು ರಸ್ತೆ ನಿರ್ಮಾಣ ಯೋಜನೆಯ ಜೊತೆಗೆ ಟೌನ್‌ಶಿಪ್‌ಗಳನ್ನೂ ನಿರ್ಮಿಸಿ ರಿಯಲ್ ಎಸ್ಟೇಟ್ ಲಾಭಗಳಿಸುವ ಇರಾದೆ ಹೊಂದಿರುವುದು ಇದರಿಂದ ಸ್ಪಷ್ಟ.

ಭೂಮಿ ಕಳೆದುಕೊಳ್ಳುವ ಜನರಿಗೆ ಪರ್ಯಾಯ ಉದ್ಯೋಗ ಒದಗಿಸುವುದು ಮತ್ತು ಭೂಮಿಗೆ ಮಾರುಕಟ್ಟೆ ದರದಲ್ಲಿ ಪರಿಹಾರವನ್ನು ನೀಡುವ ಕುರಿತು ರಾಜ್ಯ ಸರ್ಕಾರ ಅಷ್ಟಾಗಿ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಭೂಮಿಯ ಮಾರುಕಟ್ಟೆ ದರಕ್ಕೂ ಸರ್ಕಾರಿ ದರಕ್ಕೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಭೂಮಿಯನ್ನು ಕಳಕೊಂಡವರಿಗೆ ನಷ್ಟವೇ ಜಾಸ್ತಿ. ಸರ್ಕಾರದ ಇಂಥಹ ಧೋರಣೆಯಿಂದಾಗಿ ಕೆಐಎಡಿಬಿ ಅಧಿಸೂಚನೆ ಹೊರಡಿಸುತ್ತಿದೆ ಎಂದರೆ ಸಾಕು ನಮ್ಮ ರೈತ ಬೆಚ್ಚುತ್ತಾನೆ. ಇದೇ ಕಾರಣಕ್ಕಾಗಿ ಕೆಐಎಡಿಬಿ ಸಂಸ್ಥೆಯು ಸರ್ಕಾರದ ಪಾಳೇಗಾರಿ ಸಂಸ್ಥೆಯಂತೆ ಕಂಡುಬರುತ್ತದೆ. ಇವತ್ತು ಕೆಐಎಡಿಬಿ ಸಂಸ್ಥೆಯು ಹುಡುಕುತ್ತಿರುವುದು ಅಮಾಯಕ ಜನರ ಚಿನ್ನದ ಮೊಟ್ಟೆಯಿಡುವ ಜಮೀನುಗಳನ್ನು. ಹಿಂದೆ ಪಾಳೇಗಾರರು ಭೂಮಿಯನ್ನು ವಶಪಡಿಸಿಕೊಂಡು ತಮ್ಮ ಒಡೆತನವನ್ನು ಹೊಂದುತ್ತಿದ್ದರೆ, ಇಂದು ಬಡರೈತರಿಂದ ಭೂಮಿಯನ್ನು ವಶಪಡಿಸಿಕೊಳ್ಳಲು ನಮ್ಮ ಆಳುವ ವರ್ಗಗಳು ಕೆಐಎಡಿಬಿ ಎಂಬ ಸರ್ಕಾರಿ ಸಂಸ್ಥೆಯನ್ನು ಸ್ಥಾಪಿಸಿವೆಯೇನೋ ಎಂದು ಅನಿಸದಿರದು. ಇದರಿಂದಾಗಿಯೇ ಕೈಗಾರಿಕೆ ಸ್ಥಾಪಿಸುತ್ತೇನೆಂದು ಅಭಿವೃದ್ಧಿ ಮಂತ್ರ ಜಪಿಸುತ್ತಾ ರಾಜ್ಯ ಸರ್ಕಾರದ ಬಳಿ ಹೋದರೆ ಸಾಕು, ಸಾವಿರಗಟ್ಟಲೆ ಎಕರೆ ಬೆಲೆಬಾಳುವ ಭೂಮಿಯನ್ನು ಅನಾಯಾಸವಾಗಿ ರೈತರಿಂದ ಕಿತ್ತು ತಮ್ಮ ಸುಪರ್ದಿಗೆ ತೆಗೆದುಕೊಳ್ಳಬಹುದು ಎಂಬ ನಂಬುಗೆ ಕಪ್ಪುಹಣದ ಥೈಲಿಯವರಿಗೆ. ಪಾಪ ಬಡರೈತರು ನ್ಯಾಯಾಲಯಕ್ಕೇನಾದರೂ ಹೋದರೆ "ಇಡೀ ಸಮಾಜದ ಅಭಿವೃದ್ಧಿ ನಿಮಿತ್ತ ಕೈಗಾರಿಕಾಭಿವೃದ್ಧಿಗಾಗಿ ಭೂಮಿ ವಶಪಡಿಸಿಕೊಳ್ಳಲಾಗಿದೆ" ಎಂದು ಕೆಐಎಡಿಬಿ ಉತ್ತರ ನೀಡಿದರೆ ಸಾಕು ಅಲ್ಲಿಯೂಸಂತೃಪ್ತಿಯ ನಗು!

ಭಗತ್‌ಸಿಂಗ್
ಯುವಜನರ ಸ್ಫೂರ್ತಿಯ ಸೆಲೆ

ಕೇವಲ ಬ್ರಿಟೀಷರನ್ನು ಓಡಿಸುವುದು ಮಾತ್ರವಲ್ಲ; ಎಲ್ಲಾ ಬಗೆಯ ಶೋಷಣೆಗಳಿಂದ ಮುಕ್ತವಾದ ಸಮಾಜವಾದಿ ಸಮಾಜ ನಿರ್ಮಾಣದ ಕನಸುಗಳನ್ನು ಬಿತ್ತಿದ ಭಗತ್‌ಸಿಂಗ್ ಮತ್ತು ಸಂಗಾತಿಗಳ ನೆನಪು. ಭಗತ್ ಸಿಂಗ್‌ರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ



ಕೆ. ಮಹಾಂತೇಶ್

ದೇಶದ ಯುವಜನರು, ಭಾರತ ಟ್ವೆಂಟಿ-20 ವಿಶ್ವಕಪ್‌ನನ್ನು ಮುಡಿಗೇರಿಸಿಕೊಂಡ ಸಂಭ್ರಮದಲ್ಲಿ ತೇಲಿ ಹೋಗಿದ್ದಾರೆ. ಸಾಲದೆಂಬಂತೆ ಆಸ್ಟ್ರೇಲಿಯಾದೊಂದಿಗೆ ಆರಂಭಗೊಳ್ಳುವ ಏಕದಿನದ ಸರಣಿಗೆ ಟಿಕೆಟ್ ಪಡೆಯಲು ಹಗಲು-ರಾತ್ರಿಗಳೆನ್ನದೆ ಪರದಾಡುತ್ತಿದ್ದಾರೆ. ಇವತ್ತಿನ ನಮ್ಮ ಬಹುಪಾಲು ಯುವಜನರ ಪಾಲಿಗೆ ನಿಜವಾದ 'ಐಕಾನ್' (ಆರಾಧ್ಯದೈವ) ಗಳೆಂದರೆ ಅದು.... ಕ್ರಿಕೆಟ್ ಕಲಿಗಳೇ ಎಂಬಂತಹ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ಸಂಕೀರ್ಣ ಸನ್ನಿವೇಶದಲ್ಲಿ ದೇಶವನ್ನು ಬ್ರಿಟಿಷರ ಸಂಕೋಲೆಯಿಂದ ಬಿಡಿಸಲು ಪಣತೊಟ್ಟು ಅದಕ್ಕಾಗಿ, ತನ್ನ ಯೌವ್ವನದ ಸುಗಂಧವನ್ನೇ ಆಂಗ್ಲರ ನೇಣುಗಂಭಕ್ಕೆ ಸವರಿದ ಕ್ರಾಂತಿಯ ಕಿಡಿ ಭಗತ್‌ಸಿಂಗ್‌ರ ಜನ್ಮಶತಮಾನೋತ್ಸವನ್ನು ದೇಶದ ಉದ್ದಗಲಕ್ಕೂ ಆಚರಿಸಲಾಗುತ್ತಿದೆ.

ದರ್ಬಾನ್ ವಿಶ್ವಕಪ್‌ನ ವಿಜಯೋತ್ಸವದ ಅಲೆಯಲ್ಲಿ ಈ ಕ್ರಾಂತಿಕಾರಿಯ ಜನ್ಮಶತಮಾನೋತ್ಸವಕ್ಕೆ ಸ್ವಲ್ಪ ಮಂಕು ಕವಿದಿದೆಯೇನೋ ಎನ್ನಿಸಿದರೂ... ದೇಶದ ಕೋಟ್ಯಾಂತರ ಯುವಜನರ ಹೃದಯದಲ್ಲಿ ಹೊತ್ತಿಸಿದ ಕ್ರಾಂತಿಯ ಕಿಡಿಯಿಂದಾಗಿ ಹುತಾತ್ಮರಾದ 75 ವರ್ಷಗಳ ಬಳಿಕವೂ 'ಭಗತ್‌ಸಿಂಗ್ ಈಗಲೂ ಪ್ರಜ್ವಲಿಸುವ ಜ್ಯೋತಿಯಾಗಿಯೆ ನಮ್ಮೆದುರು ನಿಂತಿದ್ದಾರೆ.

ಸ್ವಾತಂತ್ರ್ಯ ಚಳುವಳಿಯ ದಂತಕಥೆ :

ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ಬದುಕಿನ ಹಾದಿಯೇ ಸಂಕ್ಷಿಪ್ತ. ಆದರೆ ಆ ಕಿರುಹಾದಿಯಲ್ಲೇ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ನಿರ್ವಹಿಸಿದ ಪಾತ್ರದಿಂದ ಲಕ್ಷಾಂತರ ಯುವಜನರ ಮನ ಗೆದ್ದಿದ್ದರು. ಈ ಕಾರಣದಿಂದಾಗಿಯೇ ಮಾರ್ಚ್ 24 ರಂದು ಅವರನ್ನು ನೇಣಿಗೇರಿಸಲು ಬ್ರಿಟಿಷರು ನಿರ್ಧರಿಸಿದ್ದರೂ, ಅದನ್ನು ಇದ್ದಕ್ಕಿದ್ದಂತೆ 1931, ಮಾರ್ಚ್ 23 ಕ್ಕೆ ಗುಟ್ಟಾಗಿ ನೇರವೇರಿಸಿ, ಕನಿಷ್ಟ ಅವರ ಸಂಬಂಧಿಗಳಿಗೂ ಮೃತ ದೇಹಗಳನ್ನು ನೀಡದೆ ಕೈ ತೊಳೆದುಕೊಂಡರು. ಅಂದರೆ ಆ ವೇಳೆಗಾಗಲೇ ಭಗತ್‌ಸಿಂಗ್ ಮತ್ತವರ ಸಂಗಾತಿಗಳು ದೇಶದುದ್ದಗಲಕ್ಕೂ ತಮ್ಮ ಪ್ರಬುದ್ದತೆ ಮತ್ತು ಬಲಿದಾನದಿಂದ ಭಾರಿ ಜನ ಬೆಂಬಲ ಪಡೆದಿದ್ದರು.

ಬಹುಶಃ ದೇಶದ ಸ್ವಾತಂತ್ರ್ಯಕ್ಕಾಗಿ ಇಷ್ಟು ಚಿಕ್ಕ ವಯಸ್ಸಿನಲ್ಲಿ ನೇಣುಗಂಬವನ್ನೇರಿದ ಇತಿಹಾಸ ಜಗತ್ತಿನಲ್ಲಿ ಹೆಚ್ಚಿನಕಡೆಗಳಲ್ಲಿ ಇಲ್ಲ. ಸೈಮನ್ ಗೋ ಬ್ಯಾಕ್ ಚಳುವಳಿಯಲ್ಲಿ ಸ್ವಾತಂತ್ರ್ಯ ಸೇನಾನಿ ಲಾಲ ಲಜಪತ ರಾಯ್‌ಗೆ ಬಿದ್ದ ಮಾರಣಾಂತಿಕ ಲಾಠಿ ಏಟುಗಳು ಭಗತ್‌ಸಿಂಗ್ ಮತ್ತವರ ಸಂಗಾತಿಗಳನ್ನು ಕೆರಳಿಸಿತ್ತು. ಅದಕ್ಕಾಗಿ ಸ್ಯಾಂಡರ್ಸ್ ಮೇಲೆ ಸೇಡು ತೀರಿಸಲು ಅವರು ನಿರ್ಧರಿಸಿದ್ದರು. ಅಲ್ಲದೆ, ಬ್ರಿಟಿಷ್ ಸರ್ಕಾರ ಕಾರ್ಮಿಕ ಕಾನೂನಿಗೆ ತಿದ್ದುಪಡಿ ಮಾಡಿ ಚಳುವಳಿಯನ್ನು ಹತ್ತಿಕ್ಕಲು ಯತ್ನ ನಡೆಸಿತ್ತು. ಈ ಎರಡೂ ಪ್ರಮುಖ ಅಂಶಗಳು ಕ್ರಾಂತಿಕಾರಿ ಯುವ ಮನಸ್ಸುಗಳನ್ನು ತಲ್ಲಣಗೊಳಿಸಿತ್ತು. ಹಾಗಾಗಿಯೇ ಕಿಡುವು ಸರ್ಕಾರಕ್ಕೆ ಪಾಠ ಕಲಿಸಲು ಶಾಸನ ಸಭೆಯೊಳಗೆ ಬಾಂಬ್‌ಗಳನ್ನು ಎಸೆಯಲು ಕ್ರಾಂತಿಕಾರಿಗಳು ನಿರ್ಧರಿಸಿದ್ದರು.

ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾಗಿಬಿಟ್ಟರೆ ಜನರ ಬದುಕು ಹಾಗೆಯೇ ಉಳಿಯುತ್ತದೆ
- ಭಗತ್‌ಸಿಂಗ್

ಇದರಿಂದ ತಮ್ಮ ಸಾವನ್ನು ತಾವೇ ಆಮಂತ್ರಿಸಿಕೊಳ್ಳುತ್ತಿದ್ದೇವೆ ಎಂಬ ಅರಿವು ಭಗತ್‌ಸಿಂಗ್ ಮತ್ತವರ ಸಂಗಾತಿಗಳಿಗಿತ್ತು. ಮಾತ್ರವಲ್ಲ, ಆ ಬಗ್ಗೆ ಸ್ವತಃ ಅವರು ಹೆಮ್ಮೆ ಪಡುತ್ತಿದ್ದರು. ಹಿಂಗಾಗಿಯೇ ನೇಣಿಗೆ ತಲೆವೊಡ್ಡುವಾಗಲೂ ಅವರು ಆರ್ಭಟಿಸಿದ ಘೋಷಣೆಯೆಂದರೆ 'ಬ್ರಿಟಿಷ್ ಸಾಮ್ರಾಜ್ಯಶಾಹಿ ನಾಶವಾಗಲಿ, ಕ್ರಾಂತಿ ಚಿರಾಯುವಾಗಲಿ' ಎಂಬುದಾಗಿತ್ತು. ಈ ತ್ಯಾಗಮಯ ಕಾರಣದಿಂದಾಗಿಯೇ ಭಗತ್‌ಸಿಂಗ್ ಮತ್ತು ಆತನ ವಿಚಾರಗಳು ಈಗಲೂ ದೇಶಕ್ಕೆ ಪ್ರಸ್ತುತವಾಗುತ್ತಿವೆ.

ಅಂದಿನ ಐತಿಹಾಸಿಕ ಪರಿಸ್ಥಿತಿ :

1919 ರಲ್ಲಿ ಜನರಲ್ ಡಯರ್ ನಡೆಸಿದ 'ಜಲಿಯನ್ ವಾಲಾಬಾಗ್ ಹತ್ಯಾಕಾಂಡ' ಬಾಲಕನಾಗಿದ್ದ ಭಗತ್ ಸಿಂಗ್‌ನ ರಕ್ತ ಕುದಿಯುವಂತೆ ಮಾಡಿತ್ತು. ಅಲ್ಲದೇ, 1920 ರಲ್ಲಿ ಗಾಂಧೀಜಿ ಕರೆ ನೀಡಿದ ಅಸಹಕಾರ ಚಳುವಳಿ ಆ ಬಾಲಕನ ಮೇಲೆ ಭಾರಿ ಪ್ರಭಾವ ಬೀರಿ ಚಳುವಳಿಗೆ ಆಕರ್ಷಿಸಿತ್ತು. ಆದರೆ 'ಚೌರಿಚೌರ' ದಲ್ಲಿ ಹಿಂಸೆ ಸಂಭವಿಸಿತೆಂಬ ಘಟನೆಯನ್ನು ನೆಪವಾಗಿಸಿ ಗಾಂಧಿ ಚಳುವಳಿ ಹಿಂತೆಗೆದುಕೊಂಡಿದ್ದು ಉರಿಯುತ್ತಿದ್ದ ಬೆಂಕಿಗೆ ತಣ್ಣೀರೆರಚಿತು. ಇದು ಭಗತ್‌ಸಿಂಗ್‌ಗೆ ಮಾತ್ರವಲ್ಲ ನೂರಾರು ಯುವಕರಿಗೆ ಕ್ರಾಂತಿಕಾರಿ ಚಳುವಳಿಯತ್ತ ಮುಖ ಮಾಡಲು ಕಾರಣವಾಯ್ತು.

ಇದೇ ಅವಧಿಯಲ್ಲಿ 1920 ರಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಥಾಪನೆಯಾಯಿತು. ಮತ್ತು 1925 ರಲ್ಲಿ ಎಲ್ಲಾ ಕಮ್ಯೂನಿಸ್ಟ್ ಗುಂಪುಗಳೆಲ್ಲಾ ಸೇರಿ ಕಾನ್ಪುರದಲ್ಲಿ ಸಮಾವೇಶ ನಡೆಸಿದವು. ಆದರೆ ಇದೇ ಅವಧಿಯಲ್ಲೇ ನಾಗಪುರದಲ್ಲಿ ಆರ್‌ಎಸ್‌ಎಸ್ ಕೂಡ ಸ್ಥಾಪನೆಯಾಯಿತು. ಮಾತ್ರವಲ್ಲ ಸ್ವಾತಂತ್ರ್ಯ ಚಳುವಳಿಗೆ ಕೋಮು ಬಣ್ಣದ ಸ್ಪರ್ಶ ನೀಡಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿದ್ದ ಕಮ್ಯುನಿಸ್ಟ್ ಗುಂಪುಗಳಲ್ಲಿ ಸಾಕಷ್ಟು ಸ್ಪಷ್ಟತೆ ಇತ್ತು. ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯ ಸ್ಥಾಪನೆಯೊಂದಿಗೆ ರಾಜಕೀಯ ಸ್ವಾತಂತ್ರ್ಯದ ಹಸ್ತಾಂತರವಾಗಬೇಕು ಆ ಮೂಲಕ ದೇಶ ನಿಜವಾದ ಆರ್ಥಿಕ ಸ್ವಾತಂತ್ರ್ಯ ಹೊಂದಲು ಸಾಧ್ಯವಾಗಬೇಕು ಎಂಬುದು ಅಂದಿನ ಕ್ರಾಂತಿಕಾರಿ ಚಳುವಳಿಯ ಘೋಷಣೆಯಾಗಿತ್ತು. ಆದರೆ ಕಾಂಗ್ರೆಸ್‌ಗೆ ಈ ವಿಚಾರದಲ್ಲಿ ಸ್ಪಷ್ಟತೆಯೇ ಇರಲಿಲ್ಲ. ಹೀಗಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಇದೇ ಅವಧಿಯಲ್ಲಿ ಸ್ಥಾಪನೆಯಾದ ಮುಸ್ಲಿಂಲೀಗ್‌ಗಳು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಬದಲು ಜನತೆಯನ್ನು ವಿಭಜಿಸುವ ಕೆಲಸದಲ್ಲಿ ಮಗ್ನವಾದವು.

ಪರಿಸ್ಥಿತಿ ಹೀಗಿರುವಾಗ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ಮಾತ್ರ ಸ್ವಾತಂತ್ರ್ಯ ಭಾರತದ ಬಗ್ಗೆ ತಮ್ಮದೇ ಕನಸನ್ನು ಹೊಂದಿದ್ದರು. ವಿಶೇಷವಾಗಿ ಉತ್ತರ ಭಾರತದಾದ್ಯಂತ ಸಂಚರಿಸಿ ಕ್ರಾಂತಿಕಾರಿ ಸಂಘಟನೆಯನ್ನು ಬೆಳೆಸಿದರು. ಆರಂಭದಲ್ಲಿ ಭಾರತ್ ನೌಜವಾನ್ ಸಭಾವನ್ನು ಸ್ಥಾಪಿಸಿದ್ದ ಅವರು ನಂತರ ಹಿಂದೂಸ್ತಾನ್ ರಿಪಬ್ಲಿಕ್ ಆರ್ಮಿಯನ್ನು ಕಟ್ಟಿದರು. ತದನಂತರ ರಷ್ಯಾದಲ್ಲಿ ಕ್ರಾಂತಿಯಿಂದ ಪ್ರೇರೇಪಿತರಾದ ಭಗತ್‌ಸಿಂಗ್ 1928 ರ ಸೆಪ್ಟೆಂಬರ್ 8 ಆ ಸಂಘಟನೆಯನ್ನು ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕ್ ಅಸೋಸಿಯೇಷನ್ ಎಂದು ಪುನರ್ ನಾಮಕರಣ ಮಾಡಿ, ಸಮಾಜವಾದಿ ವ್ಯವಸ್ಥೆ ಸ್ಥಾಪನೆಗೆ ಯುವಜನರನ್ನು ಸಂಘಟಿಸಲು ನಿರ್ಧರಿಸಿದರು.

ಅಲ್ಲದೆ ಸಮಾಜವಾದಿ ಸಮಾಜ ಸ್ಥಾಪನೆಯ ಕಣ್ಣೋಟವನ್ನು ಹೊಂದಿ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಕೆಲಸ ಮಾಡಲು 'ಕಾಕೋರಿ' ಪ್ರಕರಣದ ಪ್ರಮುಖ ರೂವಾರಿ ಚಂದ್ರಶೇಖರ್ ಆಜಾದ್ ಕೂಡ ಭಗತ್ ಸಿಂಗ್ ಜೊತೆ ಹೆಜ್ಜೆ ಹಾಕಿದ್ದರು.

ಅಂದರೆ ಸ್ವಾತಂತ್ರ್ಯ ಚಳುವಳಿ ಆಗಲೇ ಮೂರು ಮಜಲುಗಳಿಗೆ ಬಿಸಿಲೊಡೆದಿತ್ತು. ಒಂದು, ಬ್ರಿಟಿಷ್‌ರೊಂದಿಗೆ ಕೇವಲ ಡೊಮಿನಿಯನ್ ಸ್ಥಾನಮಾನಕ್ಕಾಗಿ ಕಾಂಗ್ರೆಸ್ ಹೋರಾಡುತ್ತಿತ್ತು. ಅದೇ ವೇಳೆಗೆ ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಆರ್‌ಎಸ್‌ಎಸ್ ಮತ್ತು ಮುಸ್ಲಿಂ ರಾಷ್ಟ್ರ ಸ್ಥಾಪನೆಯ ಬೇಡಿಕೆಯೊಂದಿಗೆ 'ಮುಸ್ಲಿಂ ಲೀಗ್' ಕಾರ್ಯನಿರತವಾಗಿದ್ದವು. ಇಂತಹ ಸನ್ನಿವೇಶದಲ್ಲಿ ಭಗತ್‌ಸಿಂಗ್ ಮತ್ತು ಸಂಗಾತಿಗಳು ಮಾತ್ರ ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಎತ್ತಿ ಹಿಡಿದು ಸಂಪೂರ್ಣ ಆರ್ಥಿಕ, ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುವುದಾಗಿತ್ತು. ಈ ಕುರಿತು ಭಗತ್‌ಸಿಂಗ್ ಸಾಕಷ್ಟು ಸ್ಪಷ್ಟತೆ ಹೊಂದಿದ್ದರು. ಈ ಬಗ್ಗೆ ಸ್ವತಃ ಭಗತ್‌ಸಿಂಗ್ ಬರೆದಿರುವ ಬರಹಗಳಲ್ಲಿ ಇದು ಸ್ಪಷ್ಟವಾಗಿದ್ದವು. ಅಲ್ಲದೇ **ಕ್ರಾಂತಿ ಎಂದರೆ ಬಾಂಬು ಬಂದೂಕುಗಳ ಆರಾಧನೆಯಲ್ಲ! ಬದಲಾಗಿ ಅನ್ಯಾಯದ ಬುನಾದಿಯ ಮೇಲೆ ನಿರ್ಮಿಸಿರುವ** ಈ ಶೋಷಣಾ ವ್ಯವಸ್ಥೆಯನ್ನು ನಾಶಗೊಳಿಸುವುದು ಎಂಬುದು ಭಗತ್ ಸಿಂಗ್‌ರ ತಿಳುವಳಿಕೆಯಾಗಿತ್ತು. ಈ ಸಂಬಂಧ ಬ್ರಿಟಷ್ ಶಾಸನ ಸಭೆಯಲ್ಲಿ ಭಗತ್‌ಸಿಂಗ್ ಮಾಡಿದ ಭಾಷಣ ಚಾರಿತ್ರ್ಯಾರ್ಹವಾಗಿದೆ.

ಧರ್ಮ - ದೇವರ ಬಗ್ಗೆ

ಧರ್ಮ ದೇವರ ಬಗ್ಗೆಯೂ ಸ್ವತಃ ಭಗತ್‌ಸಿಂಗ್ ಆಳವಾಗಿ ಅಧ್ಯಯನ ಮಾಡಿದ್ದರು. ಈ ಬಗ್ಗೆ ಅವರು ತನ್ನ ಸಂಗಾತಿಗಳೊಂದಿಗೆ ದೀರ್ಘ ಚರ್ಚೆಗಳನ್ನು ನಡೆಸುತ್ತಿದ್ದರು. ಭಗತ್‌ಸಿಂಗ್ ನೇಣಿಗೇರುವ ಮುನ್ನ ಅವರನ್ನು ನೇಣಿಗೇರಿಸುವ ವ್ಯಕ್ತಿಯೊಬ್ಬ ದೇವರನ್ನು ಸ್ಮರಿಸಲು ಹೇಳುತ್ತಾನೆ. ಆಗ ಭಗತ್‌ಸಿಂಗ್ "ನನಗೆ ಸಾವೆಂದರೆ ಯಾವ ಭಯವೂ ಇಲ್ಲ ಮತ್ತು ದೇವರಲ್ಲಿ ನಂಬಿಕೆಯೂ ಇಲ್ಲ" ಎನ್ನುತ್ತಾ ನಗುನಗುತ್ತಲೇ ಸಾವನ್ನು ಆಹ್ವಾನಿಸುತ್ತಾರೆ. ಬಹುಶಃ ಭಗತ್‌ಸಿಂಗ್‌ರ ಮತ್ತು ಸಂಗಾತಿಗಳ ಈ ಧೈರ್ಯವೇ ಸ್ವಾತಂತ್ರ್ಯ ಚಳುವಳಿಗೆ ಸಾವಿರಾರು ಯುವಜನರು ಧುಮುಕಲು ಕಾರಣವಾಯಿತು ಮಾತ್ರವಲ್ಲ ತಾಯ್ನಾಡಿನ ವಿಮೋಚನೆ ಹೋರಾಟದಲ್ಲಿ ಅಪಾರವಾದ ಬಲಿದಾನಗೈಯಲು ಪ್ರೇರಣೆಯಾಯಿತು.

ಮಹತ್ವದ ಬಲಿದಾನ

ಭಗತ್‌ಸಿಂಗ್ ಮತ್ತು ರಾಜಗುರು, ಸುಖದೇವ್ ಮತ್ತಿತರ ಕ್ರಾಂತಿಕಾರಿಗಳ ಈ ಬಲಿದಾನ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ್ದಾಗಿದೆ. ಆ ಕಾರಣದಿಂದಾಗಿಯೇ ಆ ಮಹಾನ್ ಕ್ರಾಂತಿಕಾರಿಗಳು ಹುತಾತ್ಮರಾಗಿ 75 ವರ್ಷಗಳ ನಂತರವೂ ಅವರು ಮಾಡಿದ ಬಲಿದಾನದ ಕಂಪು ಇನ್ನೂ ದೇಶದ ತುಂಬೆಲ್ಲಾ ಪಸರಿಸಿದೆ. ಅವರ ಕುರಿತಾಗಿ ವಿಪುಲವಾದ ಸಾಹಿತ್ಯಗಳು, ಸಿನಿಮಾಗಳು ಆ ಕ್ರಾಂತಿಕಾರಿಗಳನ್ನು ಹಾಡಿ ಹೊಗಳುತ್ತಿವೆ. ಈ ದಶಕದ ಆರಂಭದಲ್ಲೇ (2000 ನಂತರ) ಭಗತ್‌ಸಿಂಗ್ ಕುರಿತಾಗಿ ಆರು ಸಿನಿಮಾಗಳು ಬಾಲಿವುಡ್‌ನಲ್ಲಿ ನಿರ್ಮಾಣಗೊಂಡಿವೆ. ಭಗತ್‌ಸಿಂಗ್ ಕುರಿತಾಗಿ ಹತ್ತಾರು ಪುಸ್ತಕಗಳು ಪ್ರಕಟಗೊಂಡಿವೆ. ಇವೆಲ್ಲವೂ ಭಗತ್‌ಸಿಂಗ್ ಈಗಲೂ ಈ ದೇಶದ ಯುವಜನರ ಹೃದಯಗಳಲ್ಲಿ ಅಚ್ಚೊತ್ತಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಲ್ಲವೇ? ಅಂದು ನೇಣಿಗೇರುವ ಮುನ್ನ ಭಗತ್‌ಸಿಂಗ್ ಗೆಳೆಯರೊಂದಿಗೆ ಸೇರಿ ಹಾಡಿದ್ದ 'ರಂಗ್ ದೇ ಬಸಂತಿ' ಹಾಡು ಇಂದು ಬಾಲಿವುಡ್‌ನ ಜನಪ್ರಿಯ ಸಿನಿಮಾವಾಗಲು ಸ್ಪೂರ್ತಿ ಯಾಗಿದೆ ಎಂದರೆ ಭಗತ್‌ಸಿಂಗ್ ಈಗಲೂ ಯುವಜನರ ನೆಚ್ಚಿನ ಕಣ್ಮಣಿಯೇ ಸರಿ.

ಈ ಹಿನ್ನೆಲೆಯಲ್ಲಿ ಭಗತ್‌ಸಿಂಗ್ ಜನ್ಮ ಶತಮಾನೋತ್ಸವವನ್ನು ಆಚರಿಸುತ್ತಿರುವ 2007ನೇ ಇಸ್ವಿ ಹಲವು ಕಾರಣಗಳಿಂದಾಗಿ ಮಹತ್ವವನ್ನು ಪಡೆದುಕೊಂಡಿದೆ. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ 1857ರ ಹೋರಾಟಕ್ಕೆ ಇದು 150ನೇ ವರ್ಷಾಚರಣೆ. ಅಲ್ಲದೆ, ಬ್ರಿಟಿಷರನ್ನು ಹಿಮ್ಮೆಟ್ಟಿಸಲು ನಡೆದ 1757ರ 'ಪ್ಲಾಸಿ' ಕದನ ನಡೆದು 250 ವರ್ಷವಾಯಿತು ಮತ್ತು ದೇಶ ಸ್ವಾತಂತ್ರ್ಯ ಪಡೆದ ಅರವತ್ತನೇ ವರ್ಷಾಚರಣೆ ಕೂಡ.

ಆದರೆ ಯಾವ ಬಲಿದಾನಗಳ ಮೂಲಕ ಈ ದೇಶದ ಸ್ವಾತಂತ್ರ್ಯವನ್ನು ಪಡೆದವೊ ಅಂತಹ ಸ್ವಾತಂತ್ರ್ಯವನ್ನು, ಸಾರ್ವಭೌಮತ್ವವನ್ನು ಮತ್ತೆ ವಿದೇಶಿಯರ ಕೈಗೆ ಒತ್ತೆಯಿಡುವ ಹುನ್ನಾರ ನಡೆಯುತ್ತಿದೆ. 'ಭಾರತ ಅಮೇರಿಕಾ ಪರಮಾಣು ಒಪ್ಪಂದದ ಮೂಲಕ ಭಾರತವನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಷಡ್ಯಂತ್ರವನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಹೆಣೆದು ಅದರಲ್ಲಿ ಭಾರತವನ್ನು ಕೆಡವಲು ಸಂಚು ರೂಪಿಸಿದೆ. ಇಂತಹ ಅಪಾಯಕಾರಿ ಪರಿಸ್ಥಿತಿಯಲ್ಲಿ ಅಂದು ಭಗತ್‌ಸಿಂಗ್ ಮತ್ತು ಸಂಗಾತಿಗಳು ಬ್ರಿಟಿಷರ ವಿರುದ್ಧ ನಡೆಸಿದ ಧೀರೋದಾತ್ತ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುವ ಪ್ರತಿಜ್ಞೆಯನ್ನು ಭಗತ್‌ಸಿಂಗ್ ಜನ್ಮಶತಮಾನೋತ್ಸವ ಈ ಸಂದರ್ಭದಲ್ಲಿ ಮಾಡೋಣ.

ನೆಲದ ಪಿಸುಮಾತು

▪ ಕೆ.ನೀಲಾ

ಪಿಸುಮಾತು ಬಹುದೂರ
ಕೇಳುತ್ತೆ

- ಚೀನಿ ಗಾದೆ



ನಡುರಾತ್ರಿಯಲ್ಲಿ ಬಾಗಿಲೊದ್ದು ಒಳಬಂದ ಗಂಡ ಕಾಂಗ್ರೆಸ್ ಬಿಜೆಪಿಗಳು ಕೊಟ್ಟ ಪಾಕೇಟ್ ಪರಮಾತ್ಮನ ಮಹಿಮೆಯಲ್ಲಿ ತೂರಾಡುತ್ತಿದ್ದ. 'ಏಯ್ ಪಾರಿ ಎಲ್ಲಿದ್ದಿ? ರೊಟ್ಟಿ ಬಡ್ದು, ಕೂಲಿ ಮಾಡಿ ಬಾಯುಮ್ಚಿಕೊಂಡ್ ಮನ್ಯಾಗ ಬಿದ್ದಿರಾದ ಬಿಟ್ಟು, ರಾಜಕೀಯ ಮಾಡಾದು ಕಲ್ತೀದೀ...? ಎಂದ

ಕೆಂಪು ಬಾವುಟದ ಶಕ್ತಿ

ಬಹುಶಃ 1994 ಡಿಸೆಂಬರ್‌ನಲ್ಲಿಯೇ ಇರಬೇಕು ಅಸೆಂಬ್ಲಿ ಚುನಾವಣೆ ಕೊರೆವ ಚಳಿಯಲ್ಲಿ ಬಿರುಸಿನ ಪ್ರಚಾರ. ನಾನು ಹೆಣ್ಣು ಮಕ್ಕಳನ್ನೆಲ್ಲ ಕೂರಿಸಿಕೊಂಡು ಸಿಪಿಐ(ಎಂ) ಪಕ್ಷವು ಹೇಗೆ ಮಹಿಳಾ ಪರ ಎಂಬುದನ್ನು ಮನದಟ್ಟಾಗಿಸಲು ಹೆಣಗುತ್ತಿದ್ದೆ. ತಾಸುಗಳ ಗಟ್ಟಲೇ ಸಭೆ ನಡೆಯುತ್ತಿತ್ತು. ನಡುವಲ್ಲಿ ಕೆಲವು ಗಂಡಸರು ತಮ್ಮ ಮನೆಯ ಹೆಂಗಸರನ್ನು ಕರೆ ಕಳಿಸುತ್ತಿದ್ದರು. ಸಭೆ ಮುಗಿಸಿ ಹೋಗುವಾಗ ಕಾಂಗ್ರೆ ಬಿಜೆಪಿ ಗಂಡಸರು ಕುಹಕದ ಮಾತಾಡುತ ರಸ್ತೆಯುದ್ದಕ್ಕೂ ನಿಂತಿರುತ್ತಿದ್ದರು. ಉತ್ತರ ಕರ್ನಾಟಕ ಹೇಳಿ ಕೇಳಿ ಪಾಳೇಗಾರಿ ಮೌಲ್ಯಗಳಾಳುವ ನಾಡು. ಬಲು ಸೂಕ್ಷ್ಮದಿಂದ ನಡಕೊಳ್ಳಬೇಕಾದ ಪರಿಸ್ಥಿತಿ. ಸ್ವಲ್ಪ ಆಯ ತಪ್ಪಿದರೂ ಎಡವಟ್ಟಾಗುವುದು ತಪ್ಪುತ್ತಿರಲಿಲ್ಲ. ಒಂದೆರಡು ಬೈಠಕ್ ತರುವಾಯ ಹೆಣ್ಣು ಮಕ್ಕಳು ನಮ್ಮನ್ನು ಬಲವಂತದಿಂದ ಮನೆಗೆ ಕರೆದೊಯ್ದು ಊಟ ಚಹಾ-ಪಾನಿ ಮಾಡಿಸುತ್ತಿದ್ದರು. ಅವರ ಕಣ್ಣಲ್ಲಿ ಬಿಡುಗಡೆಯ ಮತ್ತು ಅರಿವಿನ ಬಯಕೆಯ ಹೊಳಪು ವ್ಯಕ್ತವಾಗುತ್ತಿತ್ತು. ಯಾರೂ ಮೀಟದ ತಂತಿಗೆ ನಾವು ಕಿರು ಬೆರಳು ಮೀಟಿದ್ದೇ ತಡ ಅಲೆ ಅಲೆಯಾಗಿ ಹೊಮ್ಮಿದ ನಾದ ತರಂಗಗಳು ಈಗಲೂ ನನ್ನನ್ನು ಅವರ ನಡುವೆ ಹಿಡಿದು ತಡೆದು ನಿಲ್ಲಿಸಿವೆ. ನೀತಿ ನಿರೂಪಣಾ ಸ್ಥಾನಗಳಲ್ಲಿ ಮಹಿಳೆಯರ ಭಾಗಿದಾರಿಕೆಗಾಗಿ ಒತ್ತಾಯಿಸುವ ಏಕೈಕ ಪಕ್ಷವಾದ ಸಿಪಿಐ(ಎಂ)ನ ಸಿದ್ಧಾಂತ ಅರಿತವರ ಹೃದಯ ಸ್ಥಂಬಕ್ಕೆ ಹೆಮ್ಮೆಯ ಬಾವುಟ ಹಾರಾಡುತ್ತದೆ. ಶಾಸನ ಸಂಸತ್ ಸಭೆಗಳಲ್ಲಿ ಶೇ.33 ಮಹಿಳಾ ಮೀಸಲಾತಿಗೆ ಒತ್ತಾಯಿಸಿ ಹೋರಾಟಕ್ಕೆ ಕರೆ ಕೊಟ್ಟ, ವ್ಯಾಪಕ ಹೋರಾಟ ನಡೆಸಿದ ಏಕಮೇವ ರಾಜಕೀಯ ಪಕ್ಷ ಸಿಪಿಐ(ಎಂ) ಹೌದಲ್ಲವೆ...? ಇದು ಅರಿತ ಹೆಣ್ಣು ಮಕ್ಕಳು ಕಡೆಗೊಮ್ಮೆ ಮತ ಚಲಾಯಿಸುವ ಆಯ್ಕೆ ಹಕ್ಕನ್ನು ಜಾರಿ ಮಾಡಲು ತೊಡಗಿದರು.

ಘಾತ ಆಯ್ತಲ್ಲರಿ

ಹೆಂಗಸರನ್ನು ಕೀಳೆಂದು ಭಾವಿಸಿದ, ನಿರ್ಣಯ ಮಾಡುವ ಸಾಮರ್ಥ್ಯ ಕಸಿದ ಪುರುಷ ಪ್ರಧಾನ ವ್ಯವಸ್ಥೆಯು ತಲ್ಲಣಗೊಂಡ ಘಟನಾವಳಿಗಳು ನನ್ನ ಮನ ಪಟಲದಲ್ಲಿ ಒಡ ಮೂಡುತ್ತವೆ. ಅದು ಮತ ಹಾಕುವ ದಿನ. ನಾನು ಮತ ಬೂತ್‌ಗಳಿಗೆ ಭೇಟಿಯಿಡುತ್ತ ಪಾದರಸದಂತೆ ಹರಿದಾಡುತ್ತಿದ್ದೆ. ಸಂಗಾತಿಯೊಬ್ಬರು ದಾರಿಯಲ್ಲಿ ಸಿಕ್ಕು. 'ನೀಲಕ್ಕರೇ ಘಾತ ಆಯ್ತಲ್ಲರಿ....' ಅಂತ ಚಿಂತಾಭರಿತ ಗಾಬರಿ ವ್ಯಕ್ತಪಡಿಸಿದರು. ಯಾಕೆಂದು ಕೇಳಿದ್ದಕ್ಕೆ ರಾತ್ರಿ ಭೂಸುಣಗಿ ಎಂಬ ಗ್ರಾಮದಲ್ಲಿ ನಡೆದ ಘಟನೆ ಯಥಾವತ್ತಾಗಿ ವಿವರಿಸಿದರು. ನಡೆದದ್ದಿಷ್ಟು.

ಪಾರಮ್ಮ ಕೂಲಿ ಮಾಡುವ ಹೆಣ್ಣು ಮಗಳು. ಜನವಾದಿ ಮಹಿಳಾ ಸಂಘಕ್ಕೆ ಸದಸ್ಯಳೂ ಹೌದು. ದಿನವೆಲ್ಲ ಕುಡಿದು ಬರುವ ಗಂಡನ ವಿಕೃತವತಾರಕ್ಕೆ ಹೆದರಿ, ಎಲ್ಲದಕ್ಕೂ ಹೂಗುಟ್ಟಿ ಸಂಸಾರ ನಡೆಸುತ ಬಂದರೂ ಮೂಲತಃ ಗಟ್ಟಿಗಿತ್ತಿ ಮತ್ತು ಛಲದ ಸ್ವಭಾವದವಳು. ರಾಜಕೀಯ ತಿಳುವಳಿಕೆ ಇರದ ಕಾರಣವಾಗಿ ಹಿಂದೆಲ್ಲ ನಡೆಯಲ್ಲಿಯೂ ಗಂಡ ಹೇಳಿದ ಗುರುತಿಗೆ ಓಟು ಹಾಕಿದ್ದಾಳೆ. ಈ ಬಾರಿ ಅವಳಿಗೆ ಯಾವ ಪಾರ್ಟಿ ಸರಿ ಯಾವ ಪಾರ್ಟಿ ತಪ್ಪು ಎಂಬುದು ಗೊತ್ತಾಗಿದೆ. ಹೊಲದಲ್ಲಿ ಹುಲ್ಲು ಕಿತ್ತುವಾಗಲೂ ಜೊತೆ ಮಹಿಳೆಯರಿಗೆ ಕುಡುಗೋಲಿಗೆ ಮತ ಕೊಡಲು ಹೇಳಿದ್ದಾಳೆ. ಹಿಂದೆಲ್ಲ ಬಿಜೆಪಿ ಕಾಂಗ್ರೆಸ್ಸಿಗೆ ಓಟು ಕೊಟ್ಟಿದ್ದಕ್ಕೆ ತಮ್ಮ ಬಡತನ ನೀಗಲಿಲ್ಲ. ಅಂಥ ತಪ್ಪು ಮತ್ತೆ ಮಾಡದಂತೆ ಪರಸ್ಪರ ಮಾತಾಡಿಕೊಂಡಿದ್ದಾರೆ. 'ಯಕ್ಕ ನನ್ನ ಗಂಡ ಬ್ಯಾಡಂದರ ಹ್ಯಾಂಗ ಮಾಡಾದು'? ಎಂದು ಪ್ರಶ್ನಿಸಿದ ಭಾಗೀರಥಿಗೆ "ಬಿಡೇ ಹುಚ್ಚಖೋಡಿ ಈಸ ವರ್ಷ ಅವರ ಮಾತು ನಾವ್ ಕೇಳಿಲ್ಲೇನು..? ಈಗ ನಮ್ದು ಒಂದೇ ಮಾತ ನಡೆಸಿಕುಡ್ಲಿ ತಿಳಿಸಿ ಹೇಳು' ಅಂತ ಧೈರ್ಯ ತುಂಬಿ ಹೊತ್ತು ಮುಣಗುವ ಮುನ್ನ ಮನೆಗೆ ಬಂದಳು. ಆಜು ಬಾಜು ಮಹಿಳೆಯರಿಗೂ ಹೇಳಿ. ಎಲ್ಲರ ಕಣ್ಣಿಗೂ ಕಾಣುವಂತೆ ಹುಲ್ಲು ಕೊಯ್ದ ಕುಡುಗೋಲು ಪಡಸಾಲೆಯ ಗೂಟಕ್ಕೆ ನೇತು ಬಿಟ್ಟಳು. ಹಸಿದ ಮಕ್ಕಳಿಗೆ ಊಟಕ್ಕಿಡಲು ಬಡ ಬಡಾ ರೊಟ್ಟಿ ತಟ್ಟಿದಳು. ಉಂಡ ಕೂಸುಗಳು ನಿದ್ದೆಯ ಉಡಿಗೆ ಜಾರಿದರು. ಗಂಡ ಬಂದ ಮೇಲೆ ಆತನಿಗಿಷ್ಟು ಊಟಕ್ಕಿಟ್ಟು ತಾನೂ ಉಂಡು ಮೆಲ್ಲಗೆ ಓಟಿನ ಮಾತೆತ್ತಿ ಅವನಿಗೂ ಹೇಗಾದರೂ ಒಪ್ಪಿಸುವುದೆಂದು ತೀರ್ಮಾನಿಸಿ ಒತ್ತರಿಸಿ ಬರುವ ನಿದ್ದೆಯನ್ನು ದೂರ ಸರಿಸಿ ಬಾಗಿಲತ್ತ ದಿಟ್ಟಿ ನೆಟ್ಟು ಕಾಯತೊಡಗಿದಳು.

ನಡುರಾತ್ರಿಯಲ್ಲಿ ಬಾಗಿಲೊದ್ದು ಒಳಬಂದ ಗಂಡ ಕಾಂಗ್ರೆಸ್ ಬಿಜೆಪಿಗಳು ಕೊಟ್ಟ ಪಾಕೇಟ್ ಪರಮಾತ್ಮನ ಮಹಿಮೆಯಲ್ಲಿ ತೂರಾಡುತ್ತಿದ್ದ. 'ಏಯ್ ಪಾರಿ ಎಲ್ಲಿದ್ದಿ? ರೊಟ್ಟಿ ಬಡ್ದು, ಕೂಲಿ ಮಾಡಿ ಬಾಯುಮ್ಚಿಕೊಂಡ್ ಮನ್ಯಾಗ ಬಿದ್ದಿರಾದ ಬಿಟ್ಟು, ರಾಜಕೀಯ ಮಾಡಾದು ಕಲ್ತೀದೀ...? ಆವಾರಾ ಹೆಂಗ್ಸೂರ ಹಂಗ ಮೀಟಿಂಗ್ ಮಾಡಿ ಕಾರಬಾರಕ್ಕ ನಿಂತಿದ್ದೀ...? ನಮ್ ಮನೆತನ ಅಂದ್ರ ಏನ್ ತಿಳದೀದೀ...? ನಾಳಿಗೆ ನಾ ಹೇಳಿದ ಪಾರ್ಟಿಗಿ ಓಟ್ ಹಾಕಿಲ್ಲ ಅಂದ್ರ ನಿನ್ ಹೆಣಾ ಕೆಡವ್ತೀನಿ ತಿಳ್ಕೋ...' ಅಂತ ಒಂದೇ ಸವನೆ ಬಯ್ಯುತ ಅಂಗಳ ತುಂಬಾ ತಕಥೈ ಕುಣಿದಾಡುವ ಗಂಡನನ್ನು ನೋಡಿ ಖರೇನೇ ಪಾರವ್ಮ ಭೂಮಿಗಿಳಿದಳು. ಮಾತಿಗೆ ಮಾತು ಬೆಳೆಯತೊಡಗಿದವು. ಅವನನ್ನು ಸಮಾಧಾನಿಸಲು ಮಾಡಿದ ಪ್ರಯತ್ನಗಳು ವಿಫಲವಾಗಿ ಕಡೆಗೆ ಪರಸ್ಪರ ಜಗಳ ತಾರಕಕೇರಿತು. "ಹಿಂದೂ ಮಂದಿ ಅಂಬಾ ಅಭಿಮಾನ ನಮುಗ ಇರಬೇಕು. ನಿನ್ನವ್ವ ಬಿಜೆಪಿಗೆ ಓಟ ಹಾಕಿಲ್ಲಂದ್ರ ನಿನಗ ಹುಟ್ಟಿಲ್ಲ ಅನಸ್ತೀನಿ ' ಎಂದು ಕುಡುಗೋಲೆತ್ತಿದನು. ಪಾರಮ್ಮಗನೂ ಅದ್ಯಾಕೋ ಹುಂಬ ಧೈರ್ಯ ಹಣಕಿತು. ಎದುರಿಗೆ ಹುಂ ಅಂದು ಒಳಹೋಗಿ 'ಕುಡುಗೋಲಿಗೆ' ಓಟು ಕೊಡುವ ಆಲೋಚನೆಯೂ ಮಾಡಿದಳು. ಆದರೆ ಬಿಜೆಪಿಗೆ ಹುಂ ಅಂದ ಸುದ್ದಿ ಹರಡಿ ಬೇರೆ ಮಹಿಳೆಯರೂ ಹಾದಿ ಬಿಟ್ಟರೆ ಎಂಬುದು ಮನದಲ್ಲಿ ಬಂದು, 'ಇಕಾ, ಜಿಂದಗಿ ತುಂಬಾ ನಿನ್ನಂಗೆ ನಡ್ಕೊಂಡು ನಾ ಏನ್ ಸುಖ ಉಂಡಿಲ್ಲ. ನಂಗ ದುಡ್ಯಾದ ತಪ್ಪಿಲ್ಲ. ನೀ ಕುಡದು ಬಂದು ಹೊಡ್ಯಾದ ತಪ್ಪಿಲ್ಲ. ನೀ ಮತ್ತ ನಿನ್ನ ಹಿಂದೂ ಪಾರ್ಟಿ ಮಂದಿ ಏನ್ ಮಾಡಂಗಿದ್ದೀರಿ? ನಿನ್ ಪಾರ್ಟಿ ನಮುಗ ಒಂದ್ ರೇಷನ್‌ಕಾರ್ಡ್ ಸೈತ ಕೊಟ್ಟಿಲ್ಲ. ನಾವು ಹಿಂದೂ ಅಲ್ಲ? ನೀ ಏನರೇ ಮಾಡು. ನಾನರೇ ಓಟ್ ಕುಡಾದು ಕುಡುಗೋಲಿಗೇ" ಅಂತ ಗಟ್ಟಿಯಾಗಿ ಹೇಳಿ 'ಹಸದಿದಿ ಉಂಡು ಮಾತಾಡು" ಅಂದು ರೊಟ್ಟಿ ಬುಟ್ಟಿ ತರಲು ಅಡಿಗೆ ಮನೆಗೆ ಬರಬೇಕು, ಅಷ್ಟರಲ್ಲಿ ರೋಷವುಕ್ಕಿದ ಗಂಡ, ತನ್ನ ಪಟ್ಟಕ್ಕೆ ಧಕ್ಕೆ ತಂದ ಯಕಶ್ಚಿತ ಹೆಂಗಸೆಂದು, ಧಾವಿಸಿ ಅಲ್ಲೇ ಇರುವ ಗುಂಡುಗಲ್ಲೆತ್ತಿ ಪಾರಮ್ಮನ ತಲೆಗೆ ಗುರಿಯಿಟ್ಟೆ ಬಿಟ್ಟ. ಹಾ... ಎಂದು ಚೀರುತ ನೆಲಕ್ಕೆ ಬಿದ್ದವಳನ್ನು ಮತ್ತೂ ಒದ್ದ "ಹೂವ್ವಿಗೆ ಓಟ್ ಹಾಕ್ತಿ ಏನಿಲ್ಲ ಹೇಳು" ಎಂದು ಪೀಡಿಸುತ ಹೊಡೆದೇ ಹೊಡೆದ. ಪಾರಮ್ಮನದು ಒಂದೇ ಮಾತು. "ನನ್ ಜೀವಾ ತಗೋ. ಆದ್ರ ನನ್ನ ಓಟ್ ಹೂವ್ವಿಗಿಲ್ಲ. ಕುಡುಗೋಲಿಗೆ" ಹೊಡೆ ಹೊಡೆದು ಹೈರಾಣಾಗಿ ಮೂಲಿಗೆ ಕುಂತ ಗಂಡ.

ಮುಂಜಾನೆದ್ದು ಪಾರಮ್ಮ ಹಣೆಗೆ ಪಟ್ಟಿ ಬಿಗಿದುಕೊಂಡು ಮೈಯ ನೋವು ನುಂಗುತ, ನೆರೆಮನಿ ಲಿಂಗಮ್ಮಕ್ಕಗನೂ, ಹಿಂದಿನ ಮನೆಯ ಫಾತಿಮಾ ಬೀಗೂ ಕೂಗಿ ಕರೆದು "ಬರ್ರೀ ಕುಡಿಗೋಲಿಗೆ ಓಟ್ ಹಾಕಿ ಬರಾರಿ" ಅಂತ ಬೂತ್ ಕಡೆಗೆ ಒಟ್ಟಾಗಿ ಹೊರಟರು.

..... ನಡೆದ ಘಟನೆ ತಿಳಿದು ಮೆಚ್ಚುಗೆ ಕಣ್ಣಿಂದ ಸಂಗಾತಿಯನ್ನು ದಿಟ್ಟಿಸುತ. 'ಘಾತ ಯಾಕಂತೀರಿ? ಪಾರಮ್ಮನ ತೀರ್ಮಾನ ಸರಿ ಅದಾ..' ಅಂದೆ "ಇಲ್ಲ ಕಾಮ್ರೇಡ್, ಕಮ್ಯುನಿಸ್ಟರಂದ್ರ ಗಂಡಾ ಹೆಣ್ತಿಗೆ ಜಗಳಾ ಹಚ್ಚವ್ರು" ಅಂತ ಅಪಪ್ರಚಾರ ಮಾಡ್ತಾರಲ್ಲ...? ಓಟ್ ಕಮ್ಮಿ ಆದ್ರ...?! ಆತಂಕ ವ್ಯಕ್ತಪಡಿಸಿದರು. "ಈಗ ಪಾರಮ್ಮ ಮತ್ತ ಉಳಿದವರು ಓಟ್ ಹಾಕ್ಯಾರಿಲ್ಲ..." ಅಂದೆ "ಆಯ್ತು ಚಿಂತಿ ಮಾಡಬ್ಯಾಡರಿ ಸಿಪಿಐ(ಎಂ) ಗ ಬೇಕಾಗಿರದು ಬರೇ ಓಟಲ್ಲ. ಪ್ರಜ್ಞಾವಂತ ಮನಸ್ಸಿನ ಸೃಷ್ಟಿ. ಶೋಷಣೆಯ ಬಲೆ ಹರಿದು ಹೊರ ಬರುವ ಅರಿವಿನ ಬೆಳಕು. ಇಂದಲ್ಲ ನಾಳಿಗೆ ನಾವು ಕ್ರಮಿಸಬೇಕಾದ ದಾರಿ ಇದೆ. ಅಡ್ಡದಾರಿಗಳಿಲ್ಲ. ಹೊಲಸು ಗುಡಿಸುತ್ತ ಬರುವ ಕೆಂಬಾವುಟ, ಹೊಲಸಿನ ಮೇಲೆ ಶೋಷಣೆಯ ಮೌಲ್ಯಗಳನ್ನು ಯಥಾವತ್ತಾಗಿ ಇಟ್ಟು ಹಾರಾಡುವುದಿಲ್ಲ...." ನಾನು ಮುಂದಿನ ಬೂತ್‌ಗೆ ಹೊರಟೆ. ಸಂಗಾತಿ ರಸ್ತೆ ಮೇಲೆ ನಿಂತೇ ಇದ್ದರು.

ಬದಲಾದ ಚಿತ್ರ

..... ಈಗ ಪುರಸಭಾ ಚುನಾವಣೆಗಳ ಈ ಸಂದರ್ಭದಲ್ಲಿ ಪರಿಸ್ಥಿತಿ ಸ್ವಲ್ಪ ಬದಲಾಗಿದೆ. ಸ್ತ್ರೀಶಕ್ತಿ ಸಂಘ, ಸ್ವಸಹಾಯ ಸಂಘ, ಮಹಿಳಾ ಸಂಘಗಳ ನಿರಂತರ ಚಟುವಟಿಕೆಗಳು ಮಹಿಳಾ ಲೋಕದಲ್ಲಿ ಜಾಗೃತಿಯ ಘಮ ತಂದಿವೆ. ಮೈಕ್ ಸೆಟ್, ಸೀರೆ, ರೊಕ್ಕದಿಂದ ಮಹಿಳಾ ಸಂಘಗಳ ಮತ ಖರೀದಿಸಲು ಹೋದ ಕಾಂಗ್ರೆ, ಬಿಜೆಪಿ ಜೆಡಿ(ಎಸ್)ಗಳನ್ನು ಮಹಿಳೆಯರು ಯರ್‍ರಾಬಿರ್‍ರಿ ಜಾಡಿಸಿದ್ದಾರೆ. ಅವರ ಮನೆಯ ಪುರುಷರು "ಈಗ ಹೆಣ್ಮಕ್ಕಳ ಕಾಲಾ ಅದಾರಿ. ಅವ್ರಿಗಿ ತಿಳದಂಗ ಮಾಡ್ಲಿ. ಹೋರ್‍ಯಾಡಿ ನೀರ ತಂದಾರ. ಮನಿ ಮಾಡಸ್ಯಾರ, ತಪ್ಪೇನ ಮಾಡಿಲ್ಲ" ಅಂತ ಕಿರಾಣಿ ಅಂಗಡಿಯ ಕಟ್ಟೆ ಮೇಲೆ ಕೂತು ಮೆಚ್ಚುಗೆಯ ಮಾತಾಡುತ್ತಿದ್ದಾರೆ.

ಈ ಮೆಚ್ಚುಗೆಯ ಮಾತುಗಳು, ಈ ಹೋರಾಟಗಳು, ಪಡೆದ ಸವಲತ್ತುಗಳು ಓಟ್ ಬ್ಯಾಂಕ್‌ನಲ್ಲಿ ಓಟುಗಳಾಗಿ ಮಾರ್ಪಡಿಸಬೇಕಿದೆ. ಸಿಪಿಐ(ಎಂ)ಗೆ ಹಾಕಿದ ಚಲಾಯಿಸಿದ ಪ್ರತಿಯೊಂದು ಓಟಿನ ಹಿಂದೆ ಸಂಘರ್ಷದ ಮತ್ತು ವೀರಗಾಥೆಯಿದೆ. ಈ ತ್ಯಾಗದ ಕಥೆಯೇ ಕೆಂಪು ಬಾವುಟದ ಶಕ್ತಿ. ○

ಕಮ್ಯುನಿಸ್ಟರು ಚೀನಾ ಏಜೆಂಟರೇ?

ಕಮ್ಯುನಿಸ್ಟರು ಚೀನಾ ದೇಶದ ಏಜೆಂಟರೇ? ಈ ಪ್ರಶ್ನೆಯನ್ನು ತಾವೇ ಹಾಕಿಕೊಂಡು ಆಮೇಲೆ ತಾವೇ ಹೌದು ಎನ್ನುತ್ತವೆ ಹಲವು ಪತ್ರಿಕೆಗಳು. ಏನು ಅದಕ್ಕೆ ಆಧಾರ. ನೋಡಿ ಕಮ್ಯುನಿಸ್ಟರು ಚೀನಾ ಪರವಾಗಿರುವುದಕ್ಕೇ ಅಮೇರಿಕಾ-ಭಾರತ ಅಣು ಒಪ್ಪಂದವನ್ನು ವಿರೋಧಿಸುತ್ತಿದ್ದಾರೆ ಎನ್ನುತ್ತಾರೆ ಇವರು.

ಇಲ್ಲಿ ಸುಲಭವಾಗಿ ಹೊಳೆಯಬಹುದಾದ ಒಂದು ವಿಚಾರ ಪಾಪ ಅವರಿಗೆ ಹೊಳೆಯುವುದೇ ಇಲ್ಲ. ಅಮೇರಿಕಾ ಭಾರತ ಅಣು ಒಪ್ಪಂದದ ಪರವಾಗಿ ತುತ್ತೂರಿ ಊದುವುದಕ್ಕಾಗಿ ಇವರಿಗೆ ಯಾರೇ ಆಗಲಿ ಸುಲಭವಾಗಿ ಅಮೇರಿಕನ್ ಏಜೆಂಟರು ಎಂಬ ಬಿರುದು ಕೊಡಬಹುದಲ್ಲವೇ? ಇರಲಿ ಅದು ಬೇರೆನೇ ವಿಷಯ. ಈಗ ಅಸಲಿ ವಿಷಯಕ್ಕೆ ಬರೋಣ.

ಭಾರತವು ಅಮೇರಿಕಾದ ಒತ್ತಡಕ್ಕೆ ಗುರಿಯಾಗಿ ಸಿಟಿಬಿಟಿ ಒಪ್ಪಂದಕ್ಕೆ ಸಹಿ ಹಾಕಬಾರದು ಎಂದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಎಂದಿನಿಂದಲೂ ಒತ್ತಾಯಿಸುತ್ತಿವೆ.

ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದ (ಸಿಟಿ ಬಿಟಿ) ಕ್ಕೆ ಭಾರತ ಸಹಿ ಹಾಕಬೇಕೆಂಬುದು ಅಮೇರಿಕಾದ ಹಳೇ ವರಾತ. ಈ ನಿಟ್ಟಿನಲ್ಲಿ ಹಲವು ರೀತಿಯ ಒತ್ತಡ ತಂತ್ರಗಳನ್ನು ಅಮೇರಿಕಾ ಅನುಸರಿಸಿದರೂ ಭಾರತ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಅಣ್ವಸ್ತ್ರಗಳನ್ನು ತಾವು ದಂಡಿಯಾಗಿ ತಯಾರಿಸಿ ರಾಶಿ ರಾಶಿ ಪೇರಿಸಿಟ್ಟುಕೊಂಡಿರುವ ದೇಶಗಳು ತಮ್ಮಲ್ಲಿರುವ ಅಣ್ವಸ್ತ್ರಗಳನ್ನು ನಾಶ ಮಾಡುವ ಬಗ್ಗೆ ಚಕಾರವೆತ್ತದೆ ಭಾರತ ಮತ್ತು ಭಾರತದಂತಹ ದೇಶಗಳು ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದಕ್ಕೆ ಸಹಿ ಹಾಕಬೇಕೆಂಬ ಒತ್ತಡ ಹೇರುವುದನ್ನು ಭಾರತ ಒಪ್ಪಿಲ್ಲ. ಇದು ಸರಿಯಾದ ನಿಲುವು.

ಈ ವಿಷಯದಲ್ಲಿ ಚೀನಾ ಏನು ಹೇಳುತ್ತದೆ. ಚೀನಾವು ಭಾರತ ಈ ಒಪ್ಪಂದಕ್ಕೆ ಸಹಿ ಹಾಕಬೇಕೆನ್ನುತ್ತದೆ. ಸಿಪಿಐ(ಎಂ) ಮೇಲೆ 'ಚೀನಾದ ಏಜೆಂಟ್' ಅಂತ ಹಣೆ ಪಟ್ಟಿ ಹಚ್ಚಲು ಬರುವವರು ಇಂತಹದ್ದನ್ನೆಲ್ಲಾ ಗಮನಿಸಬೇಕು. ಸಿಪಿಐ(ಎಂ) ಚೀನಾದ ಏಜೆಂಟ್ ಆಗಿದ್ದರೆ ಸಿಪಿಐ(ಎಂ) ಕೂಡ ಭಾರತ ಒಪ್ಪಂದಕ್ಕೆ ಸಹಿ ಹಾಕಲಿ ಎನ್ನಬೇಕಿತ್ತಲ್ಲ.!!

ಇದರ ಅರ್ಥ ಅಣ್ವಸ್ತ್ರ ಪ್ರಸರಣ ಆಗಲಿ, ಶಸ್ತ್ರಾಸ್ತ್ರ ಪೈಪೋಟಿ ನಡೆಯಲಿ ಅಂತಲ್ಲ, ಸಿಪಿಐ(ಎಂ) ನಿಲುವು. ಬದಲಿಗೆ ಅಮೇರಿಕಾ ಸೇರಿ ಎಲ್ಲರೂ ಅಣ್ವಸ್ತ್ರ ನಿಶ್ಶಸ್ತ್ರೀಕರಣಕ್ಕೆ ಮುಂದಾಗಲಿ ಅಂತ. ಸರಿ ತಾನೇ? ಆಗ ಚೀನಾಕ್ಕೂ ಭಾರತಕ್ಕೂ ಗಡಿ ಪ್ರಶ್ನೆಯಲ್ಲಿ ಘರ್ಷಣೆ ಆದಾಗ ಘರ್ಷಣೆ ಬೇಡ, ಮಾತುಕತೆ ಮೂಲಕ ವಿವಾದ ಪರಿಹರಿಸಿಕೊಳ್ಳೋಣ ಎಂದದ್ದು ತಪ್ಪೇ? □

'ಭೂಮಿಯ ನುಂಗಿದೊಡೆಂತಯ್ಯಾ !

ಪುಟ 8 ರಿಂದ

ಅಭಿವೃದ್ಧಿಪಡಿಸಲು ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಂಡಿಲ್ಲದ ಕಾರಣ, ದೊಡ್ಡ ನಗರಗಳನ್ನು ಬಿಟ್ಟು ಬೇರೆಲ್ಲೂ ಕೈಗಾರಿಕೆಗಳು ಸ್ಥಾಪನೆಯಾಗುತ್ತಿಲ್ಲ. ಉದಾಹರಣೆಗೆ ರಾಯಚೂರು ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಯಾಗಿದೆಯೇ ಹೊರತು ಅಗತ್ಯ ವಿದ್ಯುತ್ ಸಬ್‌ಸ್ಟೇಷನ್ ಇಲ್ಲ, ರಸ್ತೆ ಚರಂಡಿ ವ್ಯವಸ್ಥೆಯಿಲ್ಲ, ಖನಿಜ ಸಂಪತ್ತನ್ನು ಹೊಂದಿರುವ ಕೊಪ್ಪಳ ಮತ್ತು ರಾಯಚೂರಿನ ನಡುವೆ ಸುಸಜ್ಜಿತ ರೈಲ್ವೇ ಮಾರ್ಗವಿಲ್ಲ. ಯಾವೊಂದು ಕೈಗಾರಿಕಾ ಚಟುವಟಿಕೆಗಳನ್ನು ನಡೆಸದೆ ಖಾಲಿ ಬಿದ್ದಿರುವ ಇಂಥಹ ಭೂಮಿಯಲ್ಲೇಕೆ ಕೈಗಾರಿಕೆಗಳನ್ನು ತೆರೆಯಲು ಸರ್ಕಾರ ಮನಸ್ಸು ಮಾಡುತ್ತಿಲ್ಲವೆಂಬುದು ಇಲ್ಲಿನ ಯಕ್ಷ ಪ್ರಶ್ನೆ.

ರಾಜ್ಯದ ನವ ಭೂಮಾಲೀಕರು ಮತ್ತು ಬಂಡವಾಳಶಾಹಿಗಳು :

ಜೆಡಿಎಸ್-ಬಿಜೆಪಿ ಸರ್ಕಾರವು ರಾಜ್ಯದ ಬಡರೈತರನ್ನು ಕೂಲಿಕಾರರನ್ನಾಗಿಸಲು ಪಣತೊಟ್ಟಿರುವಂತೆ ಕಾಣುತ್ತಿದೆ. ಹಿಂದಿನ ಸರ್ಕಾರಗಳು 2000-01 ರಲ್ಲಿ 683 ಎಕರೆ, 2001-02 ರಲ್ಲಿ 2,097 ಎಕರೆ, 2002-03ರಲ್ಲಿ 1,323 ಎಕರೆ, 2003-04ರಲ್ಲಿ 376 ಎಕರೆ, 2004-05ರಲ್ಲಿ 1902 ಎಕರೆ ಮತ್ತು 2005-06ರಲ್ಲಿ 1,089ಎಕರೆಗಳಷ್ಟು ಜಮೀನನ್ನು ಅಂದರೆ ಹಿಂದಿನ ಸರ್ಕಾರ ಕಳೆದ 6ವರ್ಷಗಳಲ್ಲಿ 8190 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಆದರೆ, ಜೆಡಿಎಸ್-ಬಿಜೆಪಿ ಸರ್ಕಾರವು ಒಂದೇ ವರ್ಷದಲ್ಲಿ 27,932 ಎಕರೆ ಜಮೀನನ್ನು ಕೈಗಾರಿಕೆ ಹೆಸರಿನಲ್ಲಿ ವಶಪಡಿಸಿಕೊಂಡಿದೆ. ಮುಂದಿನ ದಿನಗಳಲ್ಲಿ 94,592 ಎಕರೆಯಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಯೋಜನೆ (ಹಂಚಿಕೆ!) ರೂಪಿಸಿರುವುದಾಗಿ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ದುರವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಕಳೆದ ಐವತ್ತು ವರ್ಷಗಳಲ್ಲಿ ಇಡೀ ದೇಶ ರಾಜ್ಯಗಳನ್ನು ಕಾಂಗ್ರೆಸ್ ನಾಯಕರು ಕೊಳ್ಳೆ ಹೊಡೆದಿದ್ದಾರೆ ಎಂದು ಹೇಳುವ ಕುಮಾರಸ್ವಾಮಿಯವರ ಮಾತಿನಲ್ಲೂ ಸತ್ಯವಿದೆ. ಆದರೆ, ಕಾಂಗ್ರೆಸ್‌ನ ಐವತ್ತು ವರ್ಷಗಳ ಭ್ರಷ್ಟಾಚಾರವನ್ನು ಅವರು ತಮ್ಮ ಕೇವಲ 20ತಿಂಗಳ ಅವಧಿಯಲ್ಲೇ ಮೀರುವ ರೀತಿಯಲ್ಲಿ ಬಿಜೆಪಿಯೊಂದಿಗೆ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದರೆ ತಪ್ಪಾಗದು.

ಕಾಂಗ್ರೆಸ್ ಸಾರಾಯಿ ಗುತ್ತಿಗೆಯಿಂದ ಆರಂಭಿಸಿ ಐಟಿ-ಬಿಟಿ ಉದ್ದಿಮೆವರೆಗೂ ತನ್ನ ಏಕಸ್ವಾಮ್ಯವನ್ನು ಇದುವರೆಗೂ ಸ್ಥಾಪಿಸಿತ್ತು. ರಾಜ್ಯದಲ್ಲಿ ಇತ್ತೀಚೆಗೆ ಬಲಿತುಕೊಂಡ ಬಿಜೆಪಿ ನಾಯಕರು ಸಂಪತ್ತಿನ ಕ್ರೋಡೀಕರಣವನ್ನು "ಶ್ರೀರಾಮನ ಅಶ್ವಮೇಧ" ದಷ್ಟೆ ಗಂಭೀರವಾಗಿ ಪರಿಗಣಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರುಗಳು ಈ ರಾಜ್ಯದ ಹೊಸ ಭೂಮಾಲೀಕರು ಮತ್ತು ಬಂಡವಾಳಶಾಹಿಗಳಾಗಿ ಮೂಡಿ ಬರುತ್ತಿದ್ದಾರೆ. ಬಿಜೆಪಿ-ಜೆಡಿಎಸ್ ಪಕ್ಷದ ಹಿಂಬಾಲಕರೇ ಸರ್ಕಾರದ ದೃಷ್ಟಿಯಲ್ಲಿ ಕೈಗಾರಿಕೋದ್ಯಮಿಗಳು. ಕಟ್ಟಾ ಸುಬ್ರಹ್ಮಣ್ಯನಾಯ್ದು ಕೈಗಾರಿಕಾ ಮಂತ್ರಿಯಾಗಿರುವುದರಿಂದ ಮತ್ತು ಬಿಜೆಪಿ ಅಧಿಕಾರದಲ್ಲಿರುವುದರಿಂದ ಈ ನಾಯಕರ ಶಿಷ್ಯ ಶಿರೋಮಣಿಗಳೆಲ್ಲ ಕೈಗಾರಿಕೋದ್ಯಮಿಗಳಾಗಲು ಕ್ಯೂ ನಿಂತಿದ್ದಾರೆನ್ನುವುದು ಜೋಕ್ ಅಲ್ಲ. ಇತ್ತೀಚೆಗೆ ಕಟ್ಟಾ ಸುಬ್ರಹ್ಮಣ್ಯನಾಯ್ದುರವರ ಕುಟುಂಬದವರೇ ಸುಮಾರು 40ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿರುವುದನ್ನು ಜಂಟಿ ಸದನ ಸಮಿತಿ ಪತ್ತೆ ಹಚ್ಚಿದೆ. ದೇವನಹಳ್ಳಿ ಬಳಿಯ ಅಂತರಾಷ್ಟ್ರೀಯ ವಿಮಾನನಿಲ್ದಾಣದ ಆಸುಪಾಸಿನಲ್ಲಿ ಹೊಸಕೋಟೆ ಬಳಿಯ ನಂದಗುಡಿ ವಿಶೇಷ ಆರ್ಥಿಕ ವಲಯ ಯೋಜನೆಗಾಗಿ ಸುಮಾರು 12,500 ಎಕರೆ ಜಮೀನನ್ನು ವಶಪಡಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತು ಅವರ ಕುಟುಂಬದ ಪಾಲುದಾರಿಕೆಯಿದೆ ಎಂದು ಸಂಯುಕ್ತ ಜನತಾದಳದ ರಾಜ್ಯಾಧ್ಯಕ್ಷ ಸೋಮಶೇಖರ್ ಆರೋಪಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಕಾಂಗ್ರೆಸ್ ಮುಂಚೂಣಿ ನಾಯಕರಲ್ಲಿ ಅನೇಕರು ಸುಮಾರು 25,000-30,000 ಎಕರೆ ಜಮೀನನ್ನು ಹೊಂದಿದ್ದಾರೆ ಎನ್ನುವುದು ಒಂದು ಅಂದಾಜು. ಇದರಿಂದಲೇ ಏನೋ ಕಾಂಗ್ರೆಸ್ ಅಷ್ಟಾಗಿ ಸರ್ಕಾರದ ವಿರುದ್ದ ಬಾಯಿ ಬಿಚ್ಚಲು ಆಗುತ್ತಿಲ್ಲ!

ದಂಡ ತೆರಬೇಕಾದ ರಾಜ್ಯ ಸರ್ಕಾರದ ದುಸ್ಥಿತಿ:

ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಸಂಸ್ಥೆಗೆ ಈ ಹಿಂದೆ ಹಂಚಿಕೆ ಮಾಡಿದ್ದ ಭೂಮಿಯನ್ನೇ ಸುಜ್ಲಾನ್ ಎಂಬ ಬಹುರಾಷ್ಟ್ರೀಯ ಕಂಪನಿಗೆ ಸರ್ಕಾರ ಮತ್ತೆ ಹಂಚಿಕೆ ಮಾಡಿದ್ದರಿಂದ, ರಾಜ್ಯ ಸರ್ಕಾರ ತನಗೆ ರೂ. 59ಕೋಟಿ ದಂಡ ತೆರಬೇಕೆಂದು ಆ ಸಂಸ್ಥೆ ನೋಟಿಸ್ ಜಾರಿಮಾಡಿದೆ. ಸುಜ್ಲಾನ್ ಕಂಪನಿಯು ಮಂಗಳೂರಿನಲ್ಲಿ ರೂ. 246 ಕೋಟಿ ವೆಚ್ಚದ ವಾಯು ವಿದ್ಯುಚ್ಛಕ್ತಿ ತಯಾರಿಕಾ ಘಟಕವನ್ನು 500 ಎಕರೆಯಲ್ಲಿ ಸ್ಥಾಪಿಸಲು ಕೆಐಎಡಿಬಿಯಿಂದ ಭೂಮಿ ಪಡೆದಿತ್ತು. ರಾಜ್ಯ ಸರ್ಕಾರ 1993ರಲ್ಲಿ ಉಷ್ಣಸ್ಥಾವರ ವಿದ್ಯುಚ್ಛಕ್ತಿ ತಯಾರಿಕಾ ಘಟಕ ಸ್ಥಾಪಿಸಲು ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಸಂಸ್ಥೆಗೆ 400 ಎಕರೆ ಜಮೀನು ಸ್ವಾಧೀನ ಪಡಿಸಿಕೊಂಡಿತ್ತು ಮತ್ತು ಈ ಭೂಮಿಯನ್ನು ಬೇರೆ ಯಾವುದಾದರೂ ಕಂಪನಿಗೆ ನೀಡಿದಲ್ಲಿ ದಂಡ ನೀಡುವುದಾಗಿ ಸರ್ಕಾರ ಮುಚ್ಚಳಿಕೆ ಕೂಡ ನೀಡಿತ್ತು. ಹಿಂದೆ ಮುಂದೆ ನೋಡದೆ ಹಂಚಿಕೆ ಮಾಡಿದ ಭೂಮಿಯನ್ನೇ ಮತ್ತೊಮ್ಮೆ ಹಂಚಿಕೆ ಮಾಡಿದ್ದರಿಂದ ಸರ್ಕಾರ ಇಂಥಹ ಪೇಚಿಗೆ ಸಿಕ್ಕಿದೆ.

ಇಂಥಹ ಬೃಹತ್ ಯೋಜನೆಗಳನ್ನು ರಾಜ್ಯ ಸರ್ಕಾರವು ಯಾವುದೇ ಚರ್ಚೆಯಿಲ್ಲದೆ ರಹಸ್ಯವಾಗಿ ಯೆಂಬಂತೆ ಕಾರ್ಯಗತ ಗೊಳಿಸುತ್ತಿರುವುದು, ಬಡರೈತರ ಜೀವನಾಡಿಯಾಗಿರುವ ಭೂಮಿಯನ್ನು ವಶಪಡಿಸಿ ಕೊಂಡು ಹಲವು ಬೋಗಸ್ ಕಂಪನಿಗಳಿಗೆ ಪರಭಾರೆ ಮಾಡುತ್ತಿರುವುದು ಎಂತಹ ಅಭಿವೃದ್ಧಿಯ. ತನ್ನ ಕೈಗಾರಿಕಾ ನೆಲೆಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಂಡು ಒಂದು ಯೋಜನಾಬದ್ದ ರೀತಿಯಲ್ಲಿ ಕೈಗಾರೀಕರಣದತ್ತ ದಾಪುಗಾಲು ಹಾಕದೆ ಕೇಂದ್ರ ಮತ್ತು ಹಲವು ರಾಜ್ಯ ಸರ್ಕಾರಗಳ ಚುಕ್ಕಾಣಿ ಹಿಡಿದವರೇ ದೋಚುವ ಕಾಯಕದಲ್ಲಿ ತೊಡಗಿದ್ದಾರೆ.

- ಜಯಾ

ಗಾಂಧಿ ತಾತನಿಗೆ ಬಿಜೆಪಿ ಟೋಪಿ?

ರಾಮನಗರ ತಾಲ್ಲೂಕಿನ ದೊಡ್ಡಮಣ್ಣುಗುಡ್ಡೆ ಗ್ರಾಮದ ಬಳಿ ಸುಮಾರು 1,000 ಎಕರೆ ಕೃಷಿ ಜಮೀನನ್ನು ಬಡ ರೈತರಿಂದ ಕಿತ್ತು ಗಾಂಧಿ ಸಿಟಿ ಎಂಬ ಸಂಸ್ಥೆಗೆ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಗಾಂಧಿಸಿಟಿ ಸಂಸ್ಥೆಯು ಇಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೂ. 600ಕೋಟಿ ವೆಚ್ಚದ ಹೈಟೆಕ್ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸುತ್ತದೆಂಬುದು ಭೂಮಿ ನುಂಗಲು ಒಂದು ನೆಪ. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಲೆಬುಡವೂ ಗೊತ್ತಿಲ್ಲದ ಗಾಂಧಿ ಸಿಟಿ ಸಂಸ್ಥೆಯನ್ನು ಹುಟ್ಟಿಹಾಕಿರುವುದು ಐ-ವೇಗ ಸಾಫ್ಟ್‌ವೇರ್ ಕಂಪನಿಯ ಗಿರಿದೇವನೂರು ಎಂಬುವವರಾಗಿದ್ದರೂ ಈ ಸಂಸ್ಥೆಗಿರುವ ನೈಜ ಅರ್ಹತೆಯೆಂದರೆ ಬಿಜೆಪಿಯ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಮುಖಂಡರಾಗಿದ್ದ ಎಂ.ಎಸ್ ಬಾಲಾಜಿಯವರು ಈ ಸಂಸ್ಥೆಯ ನಿರ್ದೇಶಕರಲ್ಲೊಬ್ಬರಾಗಿರುವುದು. ಗಾಂಧಿ ಹೆಸರನ್ನು ಇಟ್ಟುಕೊಂಡು ಗಾಂಧಿ ತಾತನಿಗೇ ಟೋಪಿ ಹಾಕುವ ಕಾಯಕವನ್ನು ಬಿಜೆಪಿ ಮಾಡುತ್ತಿರುವುದಕ್ಕೆ ಇದೊಂದು ಸಣ್ಣ ಸ್ಯಾಂಪಲ್ ಅಷ್ಟೆ. ಹೀಗೆ ರೈತರಿಗೊಂದಷ್ಟು ಕಳ್ಳೆಪುರಿ ಕೊಳ್ಳಲು ಚಿಲ್ಲರೆ ಕಾಸು ನೀಡಿ ಹತ್ತಲವು ಬೋಗಸ್ ಕಂಪನಿಗಳಿಗೆ ಜಮೀನನ್ನು ಪರಭಾರೆ ಮಾಡಿ ಕೊಡಲಾಗುತ್ತಿದೆ.

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಇವರು ಯಾರು ಬಲ್ಲಿರೇನು? ಭಾಗ - 3

ಮಹಾನ್ ಮಠಾಧೀಶರು

ವಿಶ್ವ ಹಿಂದೂ ಪರಿಷತ್ ಎಂಬುದು ಹಿಂದೂ ಧರ್ಮ, ಸಂಸತಿಯನ್ನು ರಕ್ಷಿಸಲು, ಹಾಗೂ ಹಿಂದುತ್ವವನ್ನು ಜಗದಲ್ಲೆಲ್ಲಾ ಹರಡಲು ಹುಟ್ಟಿಕೊಂಡಿರುವ ಒಂದು ಸಂಘಟನೆ. ಇದೊಂದು ಸಂಘ ಪರಿವಾರದ ಅಂಗಸಂಸ್ಥೆ ಎಂದು ಬಿಡಿಸಿ ಹೇಳಲೇ ಬೇಕಿಲ್ಲ.

ಹೆಚ್ಚಾಗಿ ಸಾಧುಸಂತರು, ಸನ್ಯಾಸಿಗಳು, ಮಠಾಧೀಶರುಗಳು ಈ ಸಂಘದ ಪದಾಧಿಕಾರಿಗಳು. ಈ ಸಂಘವನ್ನು ವಿಹೆಚ್‌ಪಿ ಎಂತಲೂ ಚಿಕ್ಕದಾಗಿ ಕರೆಯುವುದುಂಟು.

ಇಲ್ಲಿ ವಿಶ್ವ ಹಿಂದೂ ಪರಿಷತ್ ರಾಷ್ಟ್ರೀಯ ಉಪಾಧ್ಯಕ್ಷರಾದ ಕೆಲವು ಮಠಾಧೀಶರು ಹಾಗೂ ಅವರು ಸಮಾಜಕ್ಕೆ ನೀಡಿದ ಅಮೋಘ ಕೊಡುಗೆಯನ್ನು ಪರಿಚಯಿಸಲು ಯತ್ನಿಸಲಾಗಿದೆ. ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿ.

ಮಹಾನ್ ಮಠಾಧೀಶ-1 :

ಇವರೊಬ್ಬರು ಖ್ಯಾತ ಸನ್ಯಾಸಿ. ಇವರು ರಾಷ್ಟ್ರೀಯ ಸಮಸ್ಯೆಯಾಗಿರುವ 'ಅಯೋಧ್ಯೆ' ಸಮಸ್ಯೆಗೆ 'ಕೊಡು -ತೆಗೆದುಕೊಳ್ಳುವ' ನೀತಿ ಆಧಾರದಲ್ಲಿ ಪರಿಹಾರ ಸೂಚಿಸಿ ಮುಸ್ಲಿಂ ಸಂಘಟನೆಗಳೊಂದಿಗೆ ಸಂಧಾನಕ್ಕೆ ಯತ್ನಿಸಿದ್ದರು. 'ಕೊಡು-ತೆಗೆದುಕೊಳ್ಳುವುದು' ಎಂದರೆ ಮುಸ್ಲೀಮರು ಬಾಬರಿ ಮಸೀದಿ ಮೇಲಿನ ಹಕ್ಕು ಬಿಟ್ಟು **ಕೊಡುವುದು**- ಸಂಘ ಪರಿವಾರವು ಈ ಸ್ಥಳದ ಮೇಲೆ ಸಂಪೂರ್ಣ ಹಕ್ಕು **ತೆಗೆದುಕೊಳ್ಳುವುದು** ಇದೇ ಆ ಅಮೋಘ ಸೂತ್ರ. ಈ ಸೂತ್ರದ ಸೂತ್ರದಾರರ ಹೆಸರೇನು?

ಸುಳಿವು : 1 ಇವರ ಮಠವು ದಕ್ಷಿಣ ಭಾರತದ ತುತ್ತ ತುದಿಯ ರಾಜ್ಯದಲ್ಲಿದೆ.

ಸುಳಿವು : 2 ತಮ್ಮ ಮಠದ ಹಣಕಾಸು ವ್ಯವಹಾರಗಳನ್ನು ಪ್ರಶ್ನಿಸುವ ಮೂಲಕ ಮಠದ ಧರ್ಮ ಕಾರ್ಯಗಳಿಗೆ ಅಡ್ಡಿಪಡಿಸುತ್ತಿದ್ದ ವರದರಾಜ ಪೆರುಮಾಳ್ ದೇವಸ್ಥಾನದ ವ್ಯವಸ್ಥಾಪಕ 'ಶಂಕರ್ ರಾಮನ್' ಅವರನ್ನು 'ಸುಪಾರಿ ಗಣ ಹೋಮ'ದ ಮೂಲಕ ದೇವಾಲಯ ಆವರಣದಿಂದ ನೇರವಾಗಿ ಸ್ವರ್ಗಕ್ಕೆ ರವಾನಿಸಲಾಯಿತು. ಇದರ ಸಂಬಂಧ ಸ್ವಾಮೀಜಿ ದೀರ್ಘಕಾಲ ಶ್ರೀ ಕೃಷ್ಣ ಜನ್ಮಸ್ಥಾನಕ್ಕೆ ತೆರಳಿದ್ದವರು ಇತ್ತೀಚೆಗೆ ಹೊರ ಬಂದಿದ್ದಾರೆ.

ಸುಳಿವು :3 ಈ ಸ್ವಾಮೀಜಿಯವರ ಮಲ ವಿಸರ್ಜನೆಯ ವಿಧಾನ ಬಹಳ ವಿಶೇಷವಾದುದಂತೆ. ಪ್ರತಿದಿನ ಪ್ರಾತಃಕಾಲ ಎಳೆ ಬಾಳೆ ಎಲೆ ಮೇಲೆ ಇವರು ವಿಸರ್ಜಿಸುವ ಪವಿತ್ರ ಮಲವನ್ನು ಇವರ ಶಿಷ್ಯ ವೃಂದದ ಸದಸ್ಯರೊಬ್ಬರು ತಲೆಯ ಮೇಲೆ ದೂರಕ್ಕೆ ಹೊತ್ತೊಯ್ದು ವಿಸರ್ಜಿಸುವರಂತೆ.

ಮಹಾನ್ ಮಠಾಧೀಶ - 2

ಇವರ ಮೂರ್ತಿ ಸಣ್ಣದಾದರೂ ಕೀರ್ತಿ ಮಾತ್ರ ಬಲು ದೊಡ್ಡದು. ಕರ್ನಾಟಕದ ಕರಾವಳಿ ಇವರ ಮುಖ್ಯ ಕಾರಾಸ್ಥಾನ ಕ್ಷಮಿಸಿ ಕಾರ್ಯಸ್ಥಾನ. ಇವರೊಬ್ಬ ಮಹಾನ್ ಕೃಷ್ಣ ಭಕ್ತರು. ಪಾದಕಾಣಿಕೆಯಾಗಿ ಭಕ್ತರಿಂದ 10-12 ಲಕ್ಷಗಳಷ್ಟು ಮೊತ್ತವು ಶ್ರೀ ವರ್ಯರ ಪಾದಕಮಲಗಳಿಗೆ ಬಂದು ಬೀಳುತ್ತದೆ ಎಂದರೆ, ಮತ್ತು ಇದಕ್ಕೆ ಯಾರು ಯಾವ ರಸೀದಿ ಗಿಸೀದಿ ಕೊಡುವಂತಿಲ್ಲವೆಂದರೆ ಮಠದಲ್ಲಿ ಹೇಗೆ ಕೃಷ್ಣ ಲೀಲೆ ಎಲ್ಲೆಲ್ಲೂ ಚೆಲ್ಲಾಡುತ್ತಿದೆ ಎಂದು ನೀವು ಊಹಿಸಬಹುದಾಗಿದೆ.

ಭಕ್ತರು ಇಂಥ ಪಾದ ಕಾಣಿಕೆ ನೀಡಿದಾಗ ಅವರ ಅಕ್ಕ ಪಕ್ಕ ನೀವು ನಿಂತಿದ್ದಲ್ಲಿ ಆ ಪವಿತ್ರ ಮೊತ್ತವು ನಿಮ್ಮ ಕೈಗೇ ಪ್ರಾಪ್ತಿಯಾಗುವ ಸಾಧ್ಯತೆಯೂ ಇರುತ್ತದೆ. ಆ ಮೊತ್ತಕ್ಕೆ ನೀವು ಸ್ವಲ್ಪ ಬಡ್ಡಿ ಕೊಡಬೇಕಾಗಬಹುದಷ್ಟೆ. ನಿಮಗೆ ಕೊಂಚ ಕೊಲೆ ಬೆದರಿಕೆ ತಡೆದುಕೊಳ್ಳುವ ಶಕ್ತಿ ಇದ್ದರೆ ಒಳ್ಳೆಯದು. ಅಡ್ಡಗೋಡೆಯ ಮೇಲೆ ದೀಪವಿಟ್ಟಂತಹ, ಮಾತಿಗೂ, ಬೆಣ್ಣೆಯಿಂದ ಕೂದಲನ್ನು ಹೊರ ತೆಗೆಯುವಂತಹ ಮಾತುಗಳಿಗೂ ಪ್ರಸಿದ್ಧರಾದ ಈ ಮಠಾಧೀಶರ ಹೆಸರೇನು?

ಸುಳಿವು:1 ಸನ್ಮಾನ್ಯ ಶ್ರೀಗಳು ಹಿಂದೂ ಧರ್ಮದೊಳಗಿನ ಒಂದು ಅನಿಷ್ಠವಾದ ಅಸ್ಪೃಶ್ಯತೆಯ ಪದ್ಧತಿಯನ್ನು ಖಂಡಿಸುವುದಕ್ಕೂ, ದಲಿತರ ಕೇರಿಗಳಿಗೆ ಭೇಟಿ ನೀಡುವ ವಿಚಾರಕ್ಕೂ ಬಹಳ ಪ್ರಸಿದ್ಧರಾಗಿದ್ದಾರೆ.

ಸುಳಿವು :2 ತಮ್ಮ ಮಠದಲ್ಲಿ 'ಭೂಸುರ'ರಾದ ಬ್ರಾಹ್ಮಣ ಸಮುದಾಯದವರಿಗೆ ಪ್ರತ್ಯೇಕ ಪಂಕ್ತಿಯಲ್ಲಿ 'ಪುಷ್ಕಳ ಬೋಜನ ನೀಡುವುದು,' ಕ್ಷುದ್ರರಾದ ಶೂದ್ರರಿಗೆ ಪ್ರತ್ಯೇಕ ಪಂಕ್ತಿಯಲ್ಲಿ 'ಊಟ ಬಡಿಸುವುದು' ಇದನ್ನು ತಮ್ಮ ದಿವ್ಯಶಕ್ತಿಯನ್ನು ಪ್ರಯೋಗಿಸಿ ತಪ್ಪಿಸಲು ಸಾಧ್ಯವೇ ಅಂತ ಕೆಲವರು ಪ್ರಗತಿಪರರೆಂಬ ಕಿಡಿಗೇಡಿಗಳು ಕೇಳಿದ ಪ್ರಶ್ನೆಗೆ ಶ್ರೀವರ್ಯರು ಕೊಟ್ಟ ಉತ್ತರದ ಅರ್ಥ ಏನೆಂದು ತಿಳಿದುಕೊಳ್ಳಲು ತಜ್ಞರ ಸಮಿತಿಯೊಂದನ್ನು ನೇಮಿಸಲಾಗಿದೆ.

ಸುಳಿವು : 3 ಹಿಂದೂ ಧರ್ಮದ ಸುಧಾರಣೆ ಬಗೆಗೆ ಪುಂಖಾನುಪುಂಖವಾಗಿ ಮಾತನಾಡುವ ಇವರೊಬ್ಬ ಮಹಾನ್ ಚಿಂತಕರು. ತಮ್ಮ ಮಾತಿಗೆ ಪೂರಕವಾಗಿ ತಮ್ಮ ಮಠಕ್ಕೆ ದಲಿತರೊಬ್ಬರನ್ನು ಏಕೆ ಉತ್ತರಾಧಿಕಾರಿಯನ್ನಾಗಿ ನೇಮಿಸಬಾರದು ಎಂಬ ಕೆಲವರ ಪ್ರಶ್ನೆ ಕುರಿತು ಅವರು ಇನ್ನೂ ಚಿಂತಿಸುತ್ತಲೇ ಇದ್ದಾರೆ. ಪ್ರಶ್ನೆ ಕೇಳಿ ವರ್ಷಗಳೇ ಕಳೆದರೂ ಇನ್ನು ಅವರ ಚಿಂತನೆ ಮುಗಿದೇ ಇಲ್ಲ !!!

ಮಹಾನ್ ಮಠಾಧೀಶ-3:

ಶೂದ್ರ ಸಮುದಾಯವನ್ನು 'ಪ್ರತಿನಿಧಿಸುವ' ಈ ಮಠಾಧೀಶರ ಕೀರ್ತಿಯೂ ದೊಡ್ಡದು, ಮೂರ್ತಿಯೂ ದೊಡ್ಡದು. ಶೂದ್ರ ವರ್ಗದಿಂದ ಬಂದಿದ್ದರೂ ಸಂಘ ಪರಿವಾರದ ಸಹವಾಸದಿಂದಾಗಿ 'ಸುಸಂಸತ' ರಾಗಿದ್ದಾರೆ. ಇವರ ಭಕ್ತರೂ ಅನುಯಾಯಿಗಳ ಸಂಖ್ಯೆ ಬಲು ದೊಡ್ಡದು. ಈ ಸಂಖ್ಯಾ ಬಲ ಬೆನ್ನಿಗಿರುವುದರಿಂದಲೇ ಸಂಘ ಪರಿವಾರದ ವೇದಿಕೆಗಳಲ್ಲಿ ಇವರಿಗೆ ಒಂದು ಎತ್ತರದ ಕುರ್ಚಿಯೂ ಸಿಗುತ್ತದೆ.

ಮಠದ ಹಾಗೂ ಶ್ರೀವರ್ಯರ ಕೀರ್ತಿಯು ನಾಡಿನಲ್ಲೆಲ್ಲಾ ಹಬ್ಬಿದಂತೆ. ಮಠದ ಆಸ್ತಿಪಾಸ್ತಿಯೂ ನಾಡಿನ ಮೂಲೆ ಮೂಲೆಯಲ್ಲೆಲ್ಲಾ ಹಬ್ಬಿದೆ. ಈ ಶ್ರೀ ವರ್ಯರು ಯಾರು.

ಸುಳಿವು: 1 ಇತ್ತೀಚೆಗೆ ಮೈಸೂರು ಜಿಲ್ಲೆಯ ಹುಣಸೂರಿನ ವಡ್ಡರಗುಡಿಯಲ್ಲಿ ತಾವು, ವ್ಯವಸಾಯ ಮಾಡುತ್ತಿದ್ದ ಜಮೀನನ್ನು ಇದೇ ಶ್ರೀಗಳ ಮಠವು ಸ್ವಾಹ ಮಾಡಲು ಯತ್ನಿಸುತ್ತಿದೆ ಎಂದು ರೈತರೊಬ್ಬರು ಆತ್ಮಹತ್ಯೆ ಮಾಡಿಕೊಂಡರು.

ಸುಳಿವು: 2 ಕುಲಬಾಂಧವರಿಗೆ ಮಠದ ಕಾಲೇಜಿನಲ್ಲಿ ಉಚಿತ ಶಿಕ್ಷಣ ಎಂದು ಭಾವಿಸಿಕೊಂಡು ಹೋದ ಹಲವರು ಮಠದ ಪ್ರಸಾದ ಸ್ವೀಕರಿಸಿ ವಾಪಸ್ ಬಂದಿದ್ದಾರೆ.

ದೇವದುರ್ಗ : ಬೆಣ್ಣೆ ಇದ್ದ ಕಡೆ ಬಾಯ್ತೆರೆದವರ ವಿರುದ್ಧ ಹೋರಾಟ

ಎಲ್ಲಾ ಅಸಂಘಟಿತ ಕಾರ್ಮಿಕರಿಗೆ, ಬಡವರಿಗೆ ಹಳದಿ ಪಡಿತರ ಕಾರ್ಡು ಸಿಗಬೇಕು. ಉದ್ಯೋಗಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡಬೇಕು. ವಸತಿ ಸೌಲಭ್ಯ, ಬೆಲೆಯೇರಿಕೆಗೆ ತಡೆ. ಕೃಷಿ ಬಿಕ್ಕಟ್ಟು ನಿವಾರಣೆ, ಅಸಂಘಟಿತ ಕಾರ್ಮಿಕರಿಗೆ ಕೇಂದ್ರೀಯ ಶಾಸನ ಜಾರಿ ಮಾಡಬೇಕು. ಅಮೇರಿಕದೊಂದಿಗಿನ ಪರಮಾಣು ಒಪ್ಪಂದ ಕೈಬಿಡಬೇಕು. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ನಿಲ್ಲಬೇಕು ಎಂದೂ ನಿರುದ್ಯೋಗ ತಡೆ, ಮಹಿಳಾ ಮೀಸಲಾತಿ ಜಾರಿಗಾಗಿ ನಡೆದ ಹೋರಾಟದಲ್ಲಿ ದೇವದುರ್ಗದ ಸಾವಿರಾರು ಜನ ಪಾಲ್ಗೊಂಡರು. ಉರಿವ ಬಿಸಿಲ ನಾಡಾದ ಸುಡುವ ಬಂಡೆಯ ಬೀಡಾದ ದೇವದುರ್ಗದ ಐ.ಬಿ.ಯ ಮುಂಬಾಗದಲ್ಲಿ ಬೆಳಿಗ್ಗೆ 9 ಗಂಟೆಯಿಂದ ಜನಸಾಗರ ಬಂದು ಸೇರಿತು. ಎಲ್ಲರ ಕೈಯಲ್ಲೂ ಕೆಂಪು ಭಾವುಟ, ಎಲ್ಲರ ಕಂಠದಲ್ಲೂ ಮೊಳಗಿದ ಘೋಷಣೆ ಐ.ಬಿ.ಯಿಂದ ಹೋರಾಟ ರ್‍ಯಾಲಿ ತಹಶೀಲ್ ಕಛೇರಿ ಮುಟ್ಟುತ್ತಿದ್ದಂತೆಯೇ ಅಲ್ಲಿರಬೇಕಾದ ಅಧಿಕಾರಿಗಳು ಮೋಡಗಳಂತೆ ಚದುರಿದ್ದರು. ಆದರೆ ಆಗಸದಲ್ಲಿ ಚದುರಿದ ಮೋಡಗಳೆಲ್ಲಾ ಒಟ್ಟಾಗಿ ಧರೆಗಿಳಿಯಲು ಕಾಯುತ್ತಿದ್ದವು. ಸಮಸ್ಯೆಗಳ ಬಗ್ಗೆ ಒಂದು ವಾರದ ಮೊದಲೇ ತಹಶೀಲ್ದಾರರಿಗೆ ತಿಳಿಸಿದ್ದರೂ ಅವರು ಉದ್ದೇಶಪೂರ್ವಕವಾಗಿ ಕಛೇರಿಗೆ ಗೈರು ಹಾಜರಾಗಿದ್ದರು. 'ಜವಾಬ್ದಾರಿಯುತ' ಅಧಿಕಾರಿಗಳೇ ಹೀಗೆ ವರ್ತಿಸಿದರೆ ದುಡಿಯುವ ವರ್ಗಕ್ಕೆ ನ್ಯಾಯವೆಲ್ಲಿಂದ ಸಿಗಬೇಕು. ದೇವದುರ್ಗ ತಾಲ್ಲೂಕಿನಲ್ಲಿಯೇ ಸಂಸದರು, ಸಚಿವರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಸ್ಥಳೀಯರಾಗಿದ್ದರು ಕೂಡ. ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವ ಬಗ್ಗೆ ಗಮನವೇ ಇವರಿಗಿಲ್ಲ. ಇವರು ಬೆಣ್ಣೆ ಇದ್ದ ಕಡೆ ಬಾಯ್ತೆರೆಯುವ ಜನ. ತಾಲ್ಲೂಕಿನ ಬಹುತೇಕ ಕಡೆ ದುಡಿದ ಜನ ಕೂಲಿಗಾಗಿ ಗ್ರಾಮ ಪಂಚಾಯತ್‌ಗೆ ಅಲೆಯಬೇಕಾಗಿದೆ. ಇದಕ್ಕೆ ಯಾವ ಅಧಿಕಾರಿಯು ಗಮನ ಕೊಡುತ್ತಿಲ್ಲ. ಇಂತಹ ಭ್ರಷ್ಟ ಅಧಿಕಾರಿಗಳಿಂದ ಚುನಾಯಿತ ಪ್ರತಿನಿಧಿಗಳಿಂದ ತುಂಬಿದ ತಾಲ್ಲೂಕು ಪ್ರಗತಿ ಹೊಂದಲು ಸಾಧ್ಯವೇ?


ಇದೇ ಹಿನ್ನೆಲೆಯಲ್ಲಿ ಉದ್ಯೋಗಖಾತ್ರಿ ಯೋಜನೆಯಲ್ಲಿ ದುಡಿದ ಜಾಲಹಳ್ಳಿ, ಪಲಕನ ಮರಡ, ಚಿಂಚೋಡಿ, ಮುಂಡರಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೂಲಿ ಕಾರ್ಮಿಕರಿಗೆ ಕೂಲಿ ಹಣ ನೀಡುವವರೆಗೂ ಹೋರಾಟವನ್ನು ನಿರಂತರವಾಗಿ ನಡೆಸಲಾಗುವುದು ಎಂದರು ಸಿಪಿಐ(ಎಂ) ಕಾರ್ಯದರ್ಶಿಗಳಾದ ಕಾಂ. ತಿಪ್ಪಯ್ಯನಾಯಕ. ಸಿಐಟಿಯುನ ಗಿರಿಯಪ್ಪ ಪೂಜಾರಿ, ಡಿವೈಎಫ್‌ಐನ ಕಾಂ.ಸಿ.ಎಸ್.ನಾಡಗೌಡ ಮಾತನಾಡಿದರು.

ಮುಖಂಡರುಗಳ ಭಾಷಣದ ಮಧ್ಯೆ ಮಧ್ಯೆ ಮೋಡಗಳು ಮೌನದ ಕಟ್ಟೆ ಹೊಡೆದು ಮಳೆ ಸುರಿಸಿದವು. ಇದನ್ನು ಲೆಕ್ಕಿಸದ ಜನ ಮೈಯೆಲ್ಲಾ ತೊಯ್ದರೂ ಹೋರಾಟ ನಿಲ್ಲಲಿಲ್ಲ. ಬಹಳ ಹೊತ್ತಿನವರೆಗೂ ಅಧಿಕಾರಿಗಳು ಬಾರದೇ ಇದ್ದಾಗ ರೊಚ್ಚಿಗೆದ್ದ ಜನ ತಹಶೀಲ್ದಾರ್ ಕಛೇರಿಗೆ ನುಗ್ಗಿದರು. ಆ ಸಂದರ್ಭದಲ್ಲಿ ಜನರ ಮತ್ತು ಪೊಲೀಸರ ನಡುವೆ ಸಂಘರ್ಷ ಸಂಭವಿಸಿತು. ಆಗ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾದ ಸಿಪಿಐ ಹುಣಸಿಕಟ್ಟಿ ಬರಬರುತ್ತಾ ಮೇದಿನಾಪೂರ ರೈತರಿಗೆ ಥಳಿಸಿಬಿಟ್ಟನು. ಇದರಿಂದ ರೊಚ್ಚಿಗೆದ್ದ ಮಹಿಳೆಯರು ಮುನ್ನುಗ್ಗಿ ಸಿ.ಪಿ.ಐ.ನನ್ನು ಮುತ್ತಿಗೆ ಹಾಕಿ ಘೋಷಣೆ ಕೂಗತೊಡಗಿದರು. ಪರಿಸ್ಥಿತಿ ಕೈಮೀರುವದನ್ನು ಅರಿತ ಸಿ.ಪಿ.ಐ ಅಲ್ಲಿಂದ ಪರಾರಿಯಾದ. ನಂತರ ಪೊಲೀಸರೇ ಜನರಲ್ಲಿ 'ಅಧಿಕಾರಿಗಳನ್ನು ಕರೆಸುತ್ತೇವೆ ಶಾಂತರಾಗಿರಿ ಎಂದು ಕೋರಿಕೊಂಡಾಗ ಪರಿಸ್ಥಿತಿ ತಿಳಿಯಾಯಿತು.

ರಾತ್ರಿ 7 ಗಂಟೆಯವರೆಗೆ ಕ್ರಾಂತಿಗೀತೆಗಳೊಂದಿಗೆ ಹೋರಾಟ ಸಾಗಿತ್ತು. ನಂತರ ಶಿರಸ್ತೇದಾರ ಕರಿಯಪ್ಪ ಸ್ಥಳಕ್ಕೆ ಬಂದು ಮನವಿಪತ್ರ ಸ್ವೀಕರಿಸಿ ಹಳದಿಪಡಿತರ ಚೀಟಿ ಬಗ್ಗೆ ಸದ್ಯದಲ್ಲಿಯೇ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ಅದೇ ರೀತಿಯಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಬದಲು ಸ್ಥಳಕ್ಕೆ ಆಗಮಿಸಿದ ತಾಲ್ಲೂಕು ಪಂಚಾಯತ್ ಅಧಿಕಾರಿ ಯಂಕಪ್ಪನವರು ಮನವಿ ಸ್ವೀಕರಿಸಿ ಶನಿವಾರದೊಳಗೆ ಉದ್ಯೋಗ ಖಾತ್ರಿಯಡಿ ಕೆಲಸ ಮಾಡಿದ ಕೂಲಿಯವರಿಗೆ ಕೂಲಿಹಣ ನೀಡುವುದಾಗಿ ಭರವಸೆ ನೀಡಿದರು. ನಂತರ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.

ಹೋರಾಟದ ನೇತೃತ್ವವನ್ನು ತಿಪ್ಪಯ್ಯನಾಯಕ, ಗಿರಿಯಪ್ಪ ಪೂಜಾರಿ, ಸಿ.ಎಸ್.ನಾಡಗೌಡ, ಹನುಮಗೌಡ ಮದರಕಲ್, ನರಸಣ್ಣನಾಯಕ, ಅಲಿಬಾಬಾ, ಶಬ್ಬೀರ, ಬಷೀರ, ಜೆ.ಮಲ್ಲಿಕಾರ್ಜುನ, ಕೆ.ಮಲ್ಲಿಕಾರ್ಜುನ, ಅಕ್ಕಮ್ಮ ಶ್ರೀದೇವಮ್ಮ ಶಿವಕಾಂತಮ್ಮ ಸೀತಾ, ಬೆಳ್ಳಿಯಮ್ಮ ಶ್ರೀಲೇಖ ವಹಿಸಿದ್ದರು.

- ಸಂಶುದ್ದೀನ್ ನಾಗಡದಿನ್ನಿ



□ ಜಿ.ಎಸ್.ಮಣಿ

ಬ್ಯಾಂಕುಗಳ ವಿಲೀನ : ದೊಡ್ಡ ಬಂಡವಾಳಿಗರಿಗಾಗಿ

ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರವನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಲು ಎರಡೂ ಬ್ಯಾಂಕುಗಳ ಆಡಳಿತ ಮಂಡಳಿಗಳು ನಿರ್ಧರಿಸಿವೆ. ಈ ನಿರ್ಧಾರಕ್ಕೆ ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಬರಬೇಕಿದೆ. ಭಾರತದ ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ವಿಲೀನದ ಪ್ರಕ್ರಿಯೆ ಇದರೊಂದಿಗೆ ಪ್ರಾರಂಭವಾದಂತಾಗಿದೆ. ಸ್ಟೇಟ್ ಬ್ಯಾಂಕಿನ ಇನ್ನುಳಿದ ಆರು ಸಹವರ್ತಿ ಬ್ಯಾಂಕುಗಳಾದ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೂರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂದೋರ್, ಸ್ಟೇಟ್ ಬ್ಯಾಂಕ್ ಆಫ್ ಬಿಕಾನೇರ್ ಮತ್ತು ಜೈಪುರ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಪಾಟಿಯಾಲ ಇವುಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಿಲೀನಗೊಳಿಸಿಕೊಳ್ಳಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಿರ್ಧರಿಸಿದೆಯಂತೆ.

ಯಾಕೆ ಈ ವಿಲೀನ ಮತ್ತು ಇದರ ಸಾಧಕ ಬಾದಕಗಳೇನು. ಇದರಿಂದ ಯಾರಿಗೆ ಲಾಭ ಎಂಬುದು ಪ್ರಶ್ನೆ. ಬ್ಯಾಂಕಿಂಗ್ ವಲಯದ ಉದಾರೀಕರಣದ ಹಿನ್ನೆಲೆಯಲ್ಲಿ ಖಾಸಗೀ ವಲಯದ ಐಸಿಐಸಿಐ ಬ್ಯಾಂಕ್ ಅತಿ ವೇಗದಲ್ಲಿ ಬೆಳೆಯುತ್ತಿದ್ದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೊದ[illegible] ಸ್ಥಾನವನ್ನು ಸದ್ಯದಲ್ಲೇ ಆಕ್ರಮಿಸಿಕೊಳ್ಳಬಹುದೆಂಬ ಭಯ ಭಾರತೀಯ ಸ್ಟೇಟ್ ಬ್ಯಾಂಕ್‌ಗೆ. ಆದ್ದರಿಂದ ತನ್ನ ಗಾತ್ರ ಹೆಚ್ಚಿಸಿಕೊಳ್ಳಬೇಕೆಂಬುದು ಅವರ ಬಯಕೆ.

ತೊಂಬತ್ತರ ದಶಕದಲ್ಲಿ ಆರ್ಥಿಕ ಉದಾರೀಕರಣದ ಪ್ರಕ್ರಿಯೆ ಪ್ರಾರಂಭವಾದಾಗ ನರಸಿಂಹಂ ನೇತೃತ್ವದಲ್ಲಿನ ಸಮಿತಿಯೊಂದು ಬ್ಯಾಂಕಿಂಗ್ ವಲಯದ ಉದಾರೀಕರಣದ ನಕ್ಷೆಯೊಂದನ್ನು ಶಿಫಾರಸ್ಸು ಮಾಡಿತ್ತು. ಈ ನಕ್ಷೆಯ ಪ್ರಕಾರ ಭಾರತೀಯ ಬ್ಯಾಂಕ್‌ಗಳಲ್ಲಿ ನಾಲ್ಕು ಅಂತರ್‌ರಾಷ್ಟ್ರೀಯ ಮಟ್ಟದವಾಗಿ, ಏಳೆಂಟು ರಾಷ್ಟ್ರೀಯ ಮಟ್ಟದ ಬ್ಯಾಂಕುಗಳಾಗಿ ಹೊರಹೊಮ್ಮಿದ್ದವು. ಸ್ಥಳೀಯ ಬ್ಯಾಂಕುಗಳಾಗಿ ಉಳಿಯಬೇಕು. ಭಾರತದ ಇಂದಿನ ಬ್ಯಾಂಕುಗಳಲ್ಲಿ ಅಂತರ್‌ರಾಷ್ಟ್ರೀಯಮಟ್ಟದ ಬ್ಯಾಂಕು ಯಾವುದೂ ಇಲ್ಲ. ಇಂತಹ ಶ್ರೇಣೀಕೃತ ಬ್ಯಾಂಕಿಂಗ್ ವ್ಯವಸ್ಥೆಯನ್ನು ಕಟ್ಟುವಲ್ಲಿ ಮೊದಲ ಹೆಜ್ಜೆ ಬ್ಯಾಂಕುಗಳ ವಿಲೀನ.

ಕೇಂದ್ರ ಸರ್ಕಾರಗಳೂ ಈ ದಿಸೆಯಲ್ಲಿ ಒತ್ತಡವನ್ನು ಹೇರುತ್ತಲೇ ಇವೆ. ಬೆಳೆಯುತ್ತಿರುವ ಭಾರತದ ದೊಡ್ಡ ಬಂಡವಾಳಶಾಹಿಗೆ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಬ್ಯಾಂಕಿಂಗ್ ನೆರವು ನೀಡುವ ಭಾರತದ ಬ್ಯಾಂಕುಗಳ ಅವಶ್ಯಕತೆ ಪೂರೈಸುವ ಸಲುವಾಗಿ ಈ ಕ್ರಮಗಳು. ಇದರರ್ಥ ಈ ವಿಲೀನ ಕ್ರಿಯೆಗಳ ಲಾಭ ಸಿಗುವುದು ಭಾರತದ ದೊಡ್ಡ ಬಂಡವಾಳಿಗರಿಗೆ.

ಹೀಗೆ ಅಂತರ್‌ರಾಷ್ಟ್ರೀಯ ಬ್ಯಾಂಕುಗಳಾದರೆ ಅದರ ಪರಿಣಾಮವೇನು? ದೊಡ್ಡ ಬ್ಯಾಂಕುಗಳು ದೊಡ್ಡವರತ್ತಲೇ ಗಮನ ಹರಿಸುತ್ತದೆ. ದೊಡ್ಡ ಬಂಡವಾಳಿಗರ ಅವಶ್ಯಕತೆಗಳನ್ನು ಪೂರೈಸುವ ಈ ಬ್ಯಾಂಕುಗಳಿಗೆ ಈ ದೇಶದ ಬಡ ಪ್ರಜೆಯ ಬಗ್ಗೆ ಕಾಳಜಿಗಳಿರುವ ಸಾಧ್ಯತೆಗಳಿಲ್ಲ. ಸರ್ಕಾರಿ ಸ್ವಾಮ್ಯವಿರುವ ಕಾರಣಕ್ಕಾಗಿ ಜನಸಾಮಾನ್ಯರಿಗೂ ಸೇವೆ ನೀಡಬೇಕೆಂದು ತಾಕೀತು ಮಾಡಿದರೆ ಕಾಟಾಚಾರಕ್ಕಾಗಿ ಮಾತ್ರ ಅವು ಈ ಸೇವೆಗಳನ್ನು ಮಾಡಿಯಾವು.

ವಿಲೀನದೊಂದಿಗೆ ವಿಲೀನಗೊಳ್ಳುವ ಬ್ಯಾಂಕುಗಳ ಸಿಬ್ಬಂದಿಗಳಲ್ಲಿ ಹಲವು ತರಹದ ಸಮಸ್ಯೆಗಳು ತಲೆದೋರಬಹುದು. ಒಂದು ಬ್ಯಾಂಕಿನ ಸಿಬ್ಬಂದಿ ಇನ್ನೊಂದು ಬ್ಯಾಂಕಿನ ಸಿಬ್ಬಂದಿಯ ಮೇಲೆ ದರ್ಪ ತೋರುವುದು ಇತ್ಯಾದಿ ಸಮಸ್ಯೆಗಳು ತಲೆದೋರುತ್ತವೆ. ಇದಲ್ಲದೆ ಬೇರೆ ಬೇರೆ ಬ್ಯಾಂಕುಗಳ ವಿಧಿ ವಿಧಾನಗಳು ಬೇರೆ ಬೇರೆ ಇದ್ದರೆ ಮತ್ತೆ ಹೊಂದಾಣಿಕೆಯ ಸಮಸ್ಯೆ ಕಾಡುತ್ತದೆ.

ಸ್ಟೇಟ್ ಬ್ಯಾಂಕುಗಳ ವಿಲೀನದಿಂದಾಗಿ ಒಳಗಿನ ಹೊಂದಣಿಕೆಯ ತೊಂದರೆಗಳು ಕಡಿಮೆಯಿರಬಹುದು. ಯಾಕೆಂದರೆ ಈ ಬ್ಯಾಂಕುಗಳಲ್ಲಿ ಹಿಂದೇ ತೆರನಾದ ವಿಧಿ ವಿಧಾನಗಳಿವೆ. ಆದರೆ ಭಾರತೀಯ ಸ್ಟೇಟ್ ಬ್ಯಾಂಕ್‌ನ ಸಿಬ್ಬಂದಿಯ ದೊಡ್ಡಸ್ತಿಕೆಯ ವರ್ತನೆ ಸಮಸ್ಯೆಯನ್ನೊಡ್ಡಬಹುದು.

ಭಾರತದ ದೊಡ್ಡ ಬಂಡವಾಳಿಗರಿಗೆ ರೆಕ್ಕೆಪುಕ್ಕಗಳು ಒಂದು ಅವರು ಜಗತ್ತಿನಾದ್ಯಂತ ಹಾರಬಯಸಿದ್ದಾರೆ. ಅವರ ಈ ಕನಸುಗಳನ್ನು ಸಾಕಾರಗೊಳಿಸಲು ಇಡೀ ಆರ್ಥಿಕತೆ ಅದಕ್ಕೆ ತಕ್ಕಂತೆ ಬದಲಾಗಬೇಕೆಂಬುದು ಅವರ ಬಯಕೆ. ಈ ಬಯಕೆ ತೀರಿಸುವ ಸಲುವಾಗಿಯೇ ವಿಲೀನ, ವಶೀಕರಣ, ಜಾಗತೀಕರಣದ ಹೆಜ್ಜೆಗಳು.

ಇದರಿಂದ ದುಡಿವ ಜನರಿಗೆ ಅನಾನುಕೂಲಗಳಾದರೆ ದೊಡ್ಡ ಬಂಡವಾಳಿಗರಿಗೇನು ಅಲ್ಲವೇ? ❍

ಹ್ಹ...ಹ್ಹಾ...ಹ್ಹಾ...

ಸಂಭ್ರಮಾಚರಣೆ

ಒಬ್ಬ ಭಾರತೀಯ, ಒಬ್ಬ ಪಾಕಿಸ್ತಾನಿ ಇಬ್ಬರೂ ಘೋರವಾದ ತಪಸ್ಸಿಗೆ ಕುಳಿತು ಬಿಟ್ಟರು. ಮೊದಲು ದೇವರು ಭಾರತದವನ ಮುಂದೆ ಪ್ರತ್ಯಕ್ಷನಾದನು. ವರ ಏನು ಬೇಕು ಕೇಳು ಎಂದನು. ಅದಕ್ಕೆ ಭಾರತೀಯನು ಪಾಕಿಸ್ತಾನಿಗೆ ಏನು ವರಕೊಟ್ಟಿದ್ದೀಯಾ ಎಂದನು. ದೇವರು ಇನ್ನು ಅಲ್ಲಿ ಹೋಗಿಲ್ಲ ಎಂದನು. ಅದಕ್ಕೆ ಭಾರತೀಯ ಮೊದಲು ಪಾಕಿಸ್ತಾನಿಯನ್ನು ಕೇಳು. ಅವನು ಏನು ವರ ಕೇಳುತ್ತಾನೋ ಅದರ ಎರಡರಷ್ಟು ನನಗೆ ಕೊಡು ಎಂದನು.

ಸರಿ ದೇವರು ಪಾಕಿಸ್ತಾನಿಯನ್ನು ಭೇಟಿ ಮಾಡಿ, ಏನು ಬೇಕು ಎಂದನು. ಅವನು ಅದನ್ನೇ ಕೇಳಿದ - 'ಭಾರತೀಯ ಏನು ಕೇಳಿದ್ದಾನೆ' ಅಂತ. ದೇವರ ಇದ್ದದ್ದು ಹೇಳಿದ.

ಸರಿ ನನಗೆ ಒಂದು ಕಣ್ಣು ಇಂಗಿ ಹೋಗಲಿ ಪಾಕಿಸ್ತಾನಿ ವರ ಕೇಳಿಕೊಂಡ.

ಪಾಕಿಸ್ತಾನಿಗೆ ಒಂದು ಕಣ್ಣು ಹೋಯ್ತು. ಭಾರತೀಯನಿಗೆ ಎರಡೂ ಕಣ್ಣು ಹೋಯ್ತು.

ಎರಡೂ ಕಡೆ ಅವರವರ ಅಭಿಮಾನಿಗಳು ಪಟಾಕಿ ಸಿಡಿಸಿ, ಬಾವುಟ ಬೀಸಿ ತಮ್ಮ ಗೆಲುವಿಗಾಗಿ ಸಂಭ್ರಮ ಆಚರಿಸಿದರು.

ಮಹಾರಾಷ್ಟ್ರದ ನಾಸಿಕ್ ನಗರದಲ್ಲಿ ದಿನಾಂಕ 16-09-2007ರಂದು ನಡೆದ ಕೇಂದ್ರ ಸರ್ಕಾರಿ ಸಾಮ್ಯದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಅಖಿಲ ಭಾರತ ಸಮಾವೇಶ ತೀವ್ರ ಹೋರಾಟಗಳನ್ನು ನಡೆಸಲು ಸರ್ವಾನುಮತದಿಂದ ತೀರ್ಮಾನಿಸಿದೆ.

ಐಕ್ಯ ಹೋರಾಟದ ಸಂಕಲ್ಪ

ಸಾರ್ವಜನಿಕ ಕ್ಷೇತ್ರದ ರಾಷ್ಟ್ರೀಯಸಮಾವೇಶ

ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ, 5 ವರ್ಷಗಳ ವೇತನ ಪರಿಷ್ಕರಣೆಗಾಗಿ ಮತ್ತು ಮಧ್ಯಂತರ ಪರಿಹಾರಕ್ಕಾಗಿ ತೀವ್ರ ಹೋರಾಟಗಳಿಗೆ ಸಿಪಿಎಸ್‌ಟಿಯು ಕರೆ

ಎಸ್.ಪ್ರಸನ್ನಕುಮಾರ್

ಸಾರ್ವಜನಿಕ ಕ್ಷೇತ್ರದ ಕಾಮಿಕರ ವೇತನ ಪರಿಷ್ಕರಣೆ 1-1-2007ರಿಂದ ಜಾರಿಗೆ ಬರಬೇಕಾಗಿದೆ. ಆದರೆ 9 ತಿಂಗಳು ಕಳೆದರೂ ಇನ್ನು ವೇತನ ಪರಿಷ್ಕರಣೆಯ ಮಾತುಕತೆ ಆರಂಭವಾಗಲೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಕೇಂದ್ರ ಸರ್ಕಾರವು ನೀಡಿರುವ ಏಕ ಪಕ್ಷೀಯ ಮಾರ್ಗದರ್ಶಕ ನಿರ್ದೇಶನಗಳಾಗಿವೆ. ಕೇಂದ್ರ ಸರ್ಕಾರವು ಎಲ್ಲಾ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಆಡಳಿತ ವರ್ಗಗಳಿಗೆ 10 ವರ್ಷಗಳ ವೇತನ ಒಪ್ಪಂದ ಮಾಡಿಕೊಳ್ಳಲು ಒಳಗೊಂಡಂತೆ ಹಲವು ಕಾರ್ಮಿಕ ವಿರೋಧಿ ನಿರ್ದೇಶನಗಳನ್ನೂ ನೀಡಲಾಗಿದೆ. ಆದರೆ ಎಲ್ಲ ಕಾರ್ಮಿಕ ಸಂಘಗಳು 5ವರ್ಷಗಳಿಗಿಂತ ಹೆಚ್ಚಿನ ಕಾಲದ ವೇತನ ಒಪ್ಪಂದ ಮಾಡುವುದಿಲ್ಲವೆಂದು ದೃಡವಾಗಿ ನಿರ್ಣಯಿಸಿವೆ. ಹೀಗಾಗಿ ವೇತನ ಒಪ್ಪಂದದ ಮಾತುಕತೆಗಳೇ ಆರಂಭವಾಗಿಲ್ಲ. 10 ವರ್ಷಗಳ ವೇತನ ಒಪ್ಪಂದ ಜಾರಿಗೊಳಿಸಲು ಆಡಳಿತ ವರ್ಗಗಳಿಗೆ ನಿರ್ದೇಶನ ನೀಡಿದ ಕೇಂದ್ರ ಸರ್ಕಾರ ತನ್ನ ಖಜಾನೆಯಿಂದ ಇದಕ್ಕಾಗಿ ಹಣವೇನೂ ವೇತನ ಒದಗಿಸುವುದಿಲ್ಲ. ವೇತನ ಪರಿಷ್ಕರಣೆಯು ಆಯಾ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಸಾಮಾರ್ಥ್ಯಕ್ಕೆ ತಕ್ಕಂತೆ ಮಾಡಲಾಗುತ್ತದೆ. ಅಂದರೆ ಕಾರ್ಮಿಕರು ದುಡಿದು ಉತ್ಪಾದನೆ ಮಾಡಿದ ಸಂಪನ್ಮೂಲಗಳಲ್ಲೇ ವೇತನ ಪಡೆಯಲಾಗುತ್ತದೆ. ಹೀಗಿರುವಾಗಲೂ ಕೇಂದ್ರ ಸರ್ಕಾರ ನಿರ್ಬಂಧಗಳನ್ನು ಹೇರುತ್ತಿರುವುದು ಕಾರ್ಮಿಕ ವಿರೋಧಿ ನೀತಿಯ ಪ್ರತೀಕವಾಗಿದೆ.

ಖಾಸಗೀಕರಣದ ಹುಚ್ಚು

ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳನ್ನು ಭಾರತ ದೇಶದ "ಆಧುನಿಕ ದೇವಾಲಯಗಳು" ಎಂದು ದೇಶದ ಮೊದಲ ಪ್ರಧಾನಿ ಪಂಡಿತ್ ಜವಹರರ್‌ಲಾಲ್ ನೆಹರು ಬಣ್ಣಿಸಿದ್ದರು. ಆದರೆ ಈಗ 1991ರ ನಂತರದಲ್ಲಿ ಜಾರಿಗೊಳ್ಳುತ್ತಿರುವ ಜಾಗತೀಕರಣ ನೀತಿಗಳ ಪರಿಣಾಮವಾಗಿ ಸಾರ್ವಜನಿಕ ಕ್ಷೇತ್ರವನ್ನು ತರಾತುರಿಯಲ್ಲಿ ಖಾಸಗೀಕರಿಸುವ ಹುನ್ನಾರ ನಡೆಯುತ್ತಿದೆ. ಕಾಂಗ್ರೆಸ್, ಬಿಜೆಪಿ ಎಂಬ ವ್ಯತ್ಯಾಸವಿಲ್ಲದೇ ಈ ನೀತಿಗಳ ಧಾಳಿ ಮುಂದುವರೆದಿದೆ. ವಿಶ್ವ ಬ್ಯಾಂಕ್ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ ಹಾಗೂ ವಿಶ್ವ ವಾಣಿಜ್ಯ ಸಂಘಟನೆಗಳ ನಿರ್ದೇಶನದಲ್ಲಿ ಜಗತ್ತಿನ ಅತ್ಯಂತ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ದೇಶಿಯ ದೊಡ್ಡ ಬಂಡವಾಳಗಾರರಿಗೆ ಅಗ್ಗವಾಗಿ ಹಸ್ತಾಂತರಿಸಲು ಸಂಚು ನಡೆಸಲಾಗುತ್ತಿದೆ. ಈಗಾಗಲೇ 48 ಸಾರ್ವಕನಿಕ ಕ್ಷೇತ್ರದ ಕಂಪನಿಗಳ ಮಾರಾಟ ಅಥವಾ ಶೇರು ಮಾರಾಟದಿಂದ ರೂ.51,609 ಕೋಟಿ ರೂ.ಗಳನ್ನು ಖಜಾನೆಗೆ ಪಡೆಯಲಾಗಿದೆ. ಮತ್ತೊಂದು ಹೊಸ ತರ್ಕವನ್ನು ಮುಂದು ಮಾಡಿರುವ ಸರ್ಕಾರ ಸರ್ಕಾರಿ ಸಂಸ್ಥೆಗಳಲ್ಲಿ ಶೇ.49 ಬಂಡವಾಳವನ್ನು ಹೆಚ್ಚುವರಿ ಬಂಡವಾಳ ಎಂದು ವರ್ಗೀಕರಿಸುತ್ತಿದೆ. ಸರ್ಕಾರದ ಈ ವಿತಂಡ ತರ್ಕದ ಪ್ರಕಾರ ರೂ.1,19,263 ಕೋಟಿ ಹಣ ಶೇರುಗಳ ರೂಪದಲ್ಲಿ ಅಧಿಕವಾಗಿದೆ. ಈ ಶೇರುಗಳನ್ನು ಖಾಸಗಿಯವರಿಗೆ ಮಾರುವ ಆತುರದ ತಯಾರಿ ನಡೆಸುತ್ತಿದೆ. ಇಂತಹ ದೇಶ ಮಾರುವ ಕೆಲಸಕ್ಕಾಗಿಯೇ ಬಂಡವಾಳ ಹಿಂತೆಗೆಯುವ ಇಲಾಖೆ (ಡಿಸ್‌ಇನ್ವೆಸ್ಟ್‌ಮೆಂಟ್ ಡಿಪಾರ್ಟ್‌ಮೆಂಟ್) ಅಸ್ತಿತ್ವದಲ್ಲಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಕಾಲಾವಧಿಯಲ್ಲಿ 13 ಸರ್ಕಾರಿ ಕಾರ್ಖಾನೆಗಳನ್ನು ಹಾಗೂ 18 ಸರ್ಕಾರಿ ಪ್ರವಾಸೋದ್ಯಮ ಹೋಟೆಲ್‌ಗಳನ್ನು ಅಗ್ಗವಾಗಿ ಮಾರಾಟ ಮಾಡಲಾಗಿದೆ. ಅದರಲ್ಲಿ ಬೆಂಗಳೂರಿನ ಅಶೋಕ ಹೋಟೆಲ್ ಕೂಡ ಒಂದಾಗಿದೆ. ವಾಸ್ತವವಾಗಿ ಖಾಸಗೀಕರಣದಿಂದಾಗಿ ಸರ್ಕಾರಿ ಕಾರ್ಖಾನೆಗಳಿಂದ ಸರ್ಕಾರ ಖಜಾನೆಗೆ ಬರುತ್ತಿರುವ ಭಾರೀ ಆದಾಯವನ್ನು ಕಳೆದುಕೊಳ್ಳುವಂತಾಗಿದೆ. 2005-06ರ ಬಡ್ಜೆಟ್‌ನ ಪ್ರಕಾರ ಒಂದು ವರ್ಷದಲ್ಲಿ ಕೇಂದ್ರ ಸರ್ಕಾರಿ ಸಂಸ್ಥೆಗಳಿಂದ ತೆರಿಗೆ ಮತ್ತು ಲಾಭಾಂಶಗಳ ಮೂಲಕ ರೂ.1,25,384 ಕೋಟಿ ಸಂಗ್ರಹವಾಗಿದೆ. ದೇಶದ ಒಟ್ಟು ಬಡ್ಜೆಟ್ ಮೊತ್ತ ರೂ.6 ಲಕ್ಷ ಕೋಟಿಗಳಲ್ಲಿ ಸರ್ಕಾರಿ ಸಂಸ್ಥೆಗಳ ಕೊಡುಗೆ ಶೇ.25ರಷ್ಟಿದೆ. ಅಂದರೆ ಖಾಸಗಿಕರಣದ ನಂತರ ಸರ್ಕಾರಿ ಖಜಾನೆಗೆ ಈ ಹಣ ಬರುವುದಿಲ್ಲ. ಆಗ ಜನಸಾಮಾನ್ಯರ ಮೇಲೆ ತೆರಿಗೆಯ ಹೊರೆ ಹಾಕಲಾಗುತ್ತದೆ. ಸರ್ಕಾರದ ಖಾಸಗಿಕರಣ 'ಹುಚ್ಚು' ಎಷ್ಟರ ಮಟ್ಟಿಗೆ ಹೋಗಿದೆಯೆಂದರೆ ಬಹಳ ಲಾಭದಾಯಕವಾಗಿ ನಡೆಯುತ್ತಿರುವ ಮತ್ತು ರಿಜರ್ವ್ ಫಂಡ್ ಖಾತೆಯಲ್ಲಿ ರೂ.33,530 ಕೋಟಿ 80 ಲಕ್ಷ ಹೊಂದಿರುವ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವನ್ನು ಖಾಸಗಿಕರಿಸುವ ಸಂಸ್ಥೆಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.


ಕಾನೂನು ಉಲ್ಲಂಘನೆ

ಮತ್ತೊಂದೆಡೆ ಸರ್ಕಾರಿ ಸಂಸ್ಥೆಗಳಲ್ಲಿ ಖಾಯಂ ನೌಕರರ ಸಂಖ್ಯೆಯನ್ನು ನಿರಂತರ ಕಡಿತಗೊಳಿಸಲಾಗುತ್ತಿದೆ. ಅದರ ಜಾಗದಲ್ಲಿ ಕಾಂಟ್ರಾಕ್ಟ್ ಕಾರ್ಮಿಕರನ್ನು ದುಡಿಸಲಾಗುತ್ತಿದೆ. ಕಾಂಟ್ರಾಕ್ಟ್ ಕಾರ್ಮಿಕರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಕಾಂಟ್ರಾಕ್ಟ್ ಕಾರ್ಮಿಕರಿಗೆ ನೀಡುವ ಸಂಬಳ ಅತೀ ಕಡಿಮೆ ಇದೆ. ದಿನಕ್ಕೆ ರೂ.40 ರಿಂದ ರೂ.100 ಮಾತ್ರ. ಯಾವುದೇ ಪಿ.ಎಫ್, ಇಎಸ್‌ಐ ಮತ್ತು ಕನಿಷ್ಠ ವೇತನಗಳು ಇಲ್ಲದೇ ಶೋಷಣೆ ನಡೆಸಲಾಗುತ್ತಿದೆ. "ವರ್ಷವಿಡೀ ನಡೆಯುವ ಕೆಲಸಗಳನ್ನು ಕಾಂಟ್ರಾಕ್ಟ್ ಪದ್ಧತಿಯಲ್ಲಿ ಮಾಡಿಸಬಾರದೆಂದು ನಿಯಮವಿದ್ದರೂ ಆಚರಣೆಯಲ್ಲಿ ಮಾತ್ರ ಕಾನೂನು ಉಲ್ಲಂಘನೆಯೇ ನಿಯಮವಾಗಿದೆ".

ಈಗ ಸರ್ಕಾರಿ ಸಂಸ್ಥೆಗಳಲ್ಲಿ ವೇತನ ತಾರತಮ್ಯ ಎಷ್ಟಿದೆಯೆಂದರೆ 1991ರ ಮೊದಲು ಅಧಿಕಾರಿಗಳ ಮತ್ತು ಕಾರ್ಮಿಕರ ವೇತನ ಅನುಪಾತ 1:6 ಇತ್ತು. ನಂತರ ಅಧಿಕಾರಿಗಳ ವೇತನ ಹೆಚ್ಚಳವನ್ನು ಜಸ್ಟೀಸ್ ಮೋಹನ್ ಕಮಿಟಿ ಶಿಫಾರಸ್ಸಿನಂತರ ಮಾಡಲಾಗಿದ್ದೂ ವೇತನ ಅಂತರ 1:9 ಆಯಿತು. ಈಗ ಅದು 1:15 ಇದೆ. ಅಂದರೆ ಒಬ್ಬ ಖಾಯಂ ಕಾರ್ಮಿಕನಿಗೆ ರೂ.1000 ಸಂಬಳ ಭತ್ಯೆಗಳಾದರೆ ಅಧಿಕಾರಿಗಳಿಗೆ ರೂ.15,000 ಇದೆ. ಇದನ್ನೇ ದಿನೇ ದಿನೇ ಹೆಚ್ಚಾಗುತ್ತಿರುವ ಒಬ್ಬ ಕಾಂಟ್ರಾಕ್ಟ್ ಕಾರ್ಮಿಕರಿಗೆ ಹೋಲಿಸಿದರೆ 1:30 ಆಗುತ್ತದೆ. ಇಂತಹ ಅಘಾತಕರವಾದ ವೇತನ ಅಂತರ ತಾರತಮ್ಯ ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗುತ್ತದೆ.

ಈಗಾಗಲೇ ಸಾರ್ವಜನಿಕ ಕ್ಷೇತ್ರದ ಅಧಿಕಾರಿಗಳ ವೇತನ ಪರಿಷ್ಕರಣೆಗೆ ಜಸ್ಟೀಸ್ ಜನಾರ್ಧನರಾವ್ ಕಮಿಟಿ ನೇಮಕವಾಗಿದೆ. ಅಧಿಕಾರಿಗಳ ಸಂಘಗಳು 5 ವರ್ಷದ ವೇತನ ಒಪ್ಪಂದ ಆಗಬೇಕೆಂದು ಬೇಡಿಕೆ ಮಂಡಿಸಿದ್ದಾರೆ. ಜಸ್ಟೀಸ್‌ರಾವ್ ಕಮಿಟಿ ಪಿಎಸ್‌ಯುಗಳ ಆಡಳಿತ ವರ್ಗಗಳಿಗೆ ಅಭಿಪ್ರಾಯಗಳನ್ನು ಕೇಳಿದ್ದೂ 3 ರಿಂದ 5 ವರ್ಷಗಳ ವೇತನ ಕಾಲಾವಧಿ ಇರಬಹುದೆಂದು ಅಭಿಪ್ರಾಯ ನೀಡಿದ್ದಾರೆ. ಈ ನಡುವೆ ತೈಲ ಕಂಪನಿಗಳ ಅಧಿಕಾರಿಗಳು ಮುಷ್ಕರ ಆರಂಭಿಸಿದ ಒಂದು ಗಂಟೆ ಒಳಗೆ ಸರ್ಕಾರ ಮಣಿದು ವರ್ಷಕ್ಕೆ ರೂ.60,000 ರಿಂದ ರೂ.1,20,000 ಮಧ್ಯಂತರ ಪರಿಹಾರವನ್ನು ಅಧಿಕಾರಿಗಳಿಗೆ ನೀಡಲಾಗಿದೆ. ○

ದೇಶದ ಹೆಮ್ಮೆಯ ಬಿಎಚ್‌ಇಎಲ್ ಕಾರ್ಖಾನೆ



ದೇಶವ್ಯಾಪಿ ಮುಷ್ಕರ - ಜೈಲ್ ಭರೋ ಚಳುವಳಿ

ಈ ಎಲ್ಲಾ ಹಿನ್ನಲೆಯಲ್ಲಿ ನಾಸಿಕ್‌ನಲ್ಲಿ ಸಿಪಿಎಸ್‌ಟಿಯು ಅಖಿಲ ಭಾರತ ಸಮಾವೇಶವು ಕೆಳಗಿನ ಮುಖ್ಯ ಬೇಡಿಕೆಗಳಿಗಾಗಿ ಹೋರಾಟ ನಡೆಸಲು ಕರೆ ನೀಡಿದೆ.

- ಮಧ್ಯಂತರ ಪರಿಹಾರ ಕೂಡಲೇ ಪಾವತಿಸಬೇಕು.
- ವೇತನ ಒಪ್ಪಂದ 5 ವರ್ಷಗಳಿಗಿಂತ ಹೆಚ್ಚು ಬೇಡವೇ ಬೇಡ.
- ಅಧಿಕಾರಿಗಳ ಮತ್ತು ಕಾರ್ಮಿಕರ ನಡುವೆ ಸಮತೋಲನವಾದ ವೇತನ ಅಂತರ ಕಾಯ್ದುಕೊಳ್ಳಬೇಕು.
- ವಾರ್ಷಿಕ ಬಡ್ತಿಯುನ್ನು 'ಶೇಕಡಾವಾರು' ಪದ್ಧತಿಯಲ್ಲಿ ಜಾರಿಗೊಳಿಸಬೇಕು.
- ಕಾಂಟ್ರಾಕ್ಟ್ ಕಾರ್ಮಿಕರಿಗೆ ಕನಿಷ್ಠ ವೇತನವಾಗಿ ಆಯಾ ಕಾರ್ಖಾನೆಗಳ ಖಾಯಂ ನೌಕರರ ಕನಿಷ್ಠದಲ್ಲಿ ಪಾವತಿ ಆಗಬೇಕು.
- 1-4-2004ರಿಂದ ಅನ್ವಯವಾಗುವಂತೆ ಮೂಲ ವೇತನದ ಶೇ.50 ತುಟ್ಟಿಭತ್ಯೆಯುನ್ನು ವಿಲೀನಗೊಳಿಸಬೇಕು.
- ರೋಗಗ್ರಸ್ತ ಕೈಗಾರಿಕೆಗಳ ಕಾರ್ಮಿಕರಿಗೂ ವೇತನ ಪರಿಷ್ಕರಣೆ ಮಾಡಬೇಕು.
- ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಹೊಸ ನೇಮಕಾತಿ ಮಾಡಬೇಕು.
- ಕಾರ್ಮಿಕರಿಗೆ ಕಂಪನಿ ಒದಗಿಸುವ 'ವಸತಿ' ಮುಂತಾದ ಸೌಲಭ್ಯಗಳ ಮೇಲೆ ತೆರಿಗೆ ರದ್ದುಗೊಳಿಸಬೇಕು.

ಮೇಲಿನ ಎಲ್ಲಾ ಬೇಡಿಕೆಗಳ ಈಡೇರಿಕೆಗಾಗಿ

- ಕೂಡಲೇ ಎಲ್ಲಾ ಕಾರ್ಖಾನೆಗಳ ಮುಂದೆ ಗೇಟ್ ಮೀಟಿಂಗ್ ಮಾಡಬೇಕು.
- ನವೆಂಬರ್ 7ರಂದು ಬೃಹತ್ ಪ್ರತಿಭಟನಾ ದಿನವಾಗಿ ನಡೆಸಬೇಕು
- ನವೆಂಬರ್ 19ರಂದು ದೆಹಲಿಯುಲ್ಲಿ ನಡೆಯಲಿರುವ ಕಾಂಟ್ರಾಕ್ಟ್ ಕಾರ್ಮಿಕರ ಅಖಿಲ ಭಾರತ ಸಮಾವೇಶಕ್ಕೆ ಎಲ್ಲಾ ಕಾರ್ಖಾನೆಗಳಿಂದ ಪ್ರತಿನಿಧಿಗಳು ಭಾಗವಹಿಸಬೇಕು. ಖಾಯಂ ನೌಕರರ ಸಂಘಗಳು ಮುತುವರ್ಜಿ ವಹಿಸಿ ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು.
- ಕಾರ್ಮಿಕ ಸಂಘಗಳ ರಾಜ್ಯಮಟ್ಟದ ಜಂಟಿ ಸಮಾವೇಶಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಬೇಕು. ಡಿಸೆಂಬರ್ 4 ಮತ್ತು 5ರಂದು ನಡೆಯುವ ದೇಶವ್ಯಾಪಿ ಸತ್ಯಾಗ್ರಹ, ಜೈಲು ಭರೋ ಚಳುವಳಿಯನ್ನು ಯಶಸ್ವಿಗೊಳಿಸಬೇಕು.
- ಮುಷ್ಕರದ ದಿನಗಳನ್ನು (ಒಂದು ದಿನಕ್ಕಿಂತಲೂ ಹೆಚ್ಚು) ನಿಗದಿಪಡಿಸಲು 'ಕೋರ್ ಸಮಿತಿಗೆ' ಅಧಿಕಾರ ನೀಡಲಾಗಿದ್ದು, ಮುಷ್ಕರದ ಕಾರ್ಯಾಚರಣೆಗೆ ಎಲ್ಲಾ ಸಿದ್ಧತೆ ನಡೆಸುವುದು. ಇವು ಸಮಾವೇಶದ ಪ್ರಮುಖ ನಿರ್ಣಯಗಳು.

ಸಿಪಿಎಸ್‌ಟಿಯು ಸಮಾವೇಶದ ಉದ್ಘಾಟನಾ ಭಾಷಣವನ್ನು ಹಾಗೂ ಸಮಾರೋಪ ಭಾಷಣವನ್ನು ಸಿಐಟಿಯು ಅಖಿಲಭಾರತ ಅಧ್ಯಕ್ಷರಾದ ಕಾಂ.ಡಾ.ಎಂ.ಕೆ. ಪಂಧೆ ಮಾಡಿದರು. ಅಧ್ಯಕ್ಷ ಮಂಡಲಿಯಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಕಾಂ.ದಕ್ಷಿ, ಬೆಂಗಳೂರು ಜೆಎಫ್ ಸಂಚಾಲಕರಾದ ಕಾಂ.ಡಿ.ಅನಂತಪದ್ಮನಾಭ, ಹೈದರಾಬಾದ್ ಕೋ ಆರ್ಡಿನೇಷನ್ ಸಮಿತಿಯ ಕಾಂ.ಸುದರ್ಶನ್ ಹಾಗೂ ಹೆಚ್‌ಎಂಎಸ್ ಮುಖಂಡ ಕಾಂ.ನಾಗರಾಜ್ ಅವರು ಇದ್ದರು. ಮುಖ್ಯ ಭಾಷಣಕಾರರಾಗಿ ಎಐಟಿಯುಸಿ ಮುಖಂಡರಾದ ಕಾಂ.ಹೆಚ್. ಮಹದೇವನ್ ಮಾತನಾಡಿದರು. ಸಮಾವೇಶದ ಹಿನ್ನೆಲೆ ಪತ್ರವನ್ನು ಕಾಂ.ದೇವರಾಯ್ ಅವರು ಮಂಡಿಸಿದರು. ವೇದಿಕೆಯಲ್ಲಿ ನಾಸಿಕ್‌ನ ಶಿವಸೇನೆ, ಬಿಜೆಪಿ, ಕಾಂಗ್ರೆಸ್ ಮುಖಂಡರು ಹಾಗೂ ಸಿಐಟಿಯು ಮಹಾರಾಷ್ಟ್ರ ಪ್ರಧಾನ ಕಾರ್ಯದರ್ಶಿ ಕಾಂ.ಡಿ.ಎಲ್.ಕರಾಡ್ ಉಪಸ್ಥಿತರಿದ್ದರು. ಸಮಾವೇಶದಲ್ಲಿ ದೇಶದ ಮೂಲೆಗಳಿಂದ ಬಂದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಮುಖಂಡರು ಭಾಗವಹಿಸಿದ್ದರು.

ಸಮಾವೇಶವನ್ನು ನಾಸಿಕ್ ನಗರದ ಕಾಳಿದಾಸ ಕಲಾಮಂದಿರದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಹೆಚ್‌ಎಎಲ್ ನೌಕರರ ಸಂಘದವರು ನಡೆಸಿಕೊಟ್ಟರು. ಹೆಚ್‌ಎಎಲ್ ನಾಸಿಕ್ ಘಟಕದ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಪ್ರಶಾಂತ್ ಭೋಜಾನೆ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ○

▢ ವೈ.ಸುಬ್ರಹ್ಮಣ್ಯ

ಇದೆಂಥಾ ಅತಿಥಿ ಸತ್ಕಾರ !


ಅಮೇರಿಕಾದ ಪ್ರಸಿದ್ಧ ಮತ್ತು ಬಹುಕಾಲದಿಂದ ಖ್ಯಾತವಾದ ವಿಶ್ವವಿದ್ಯಾಲಯಗಳಲ್ಲಿ ಒಂದಾದ ನ್ಯೂಯಾರ್ಕಿನ ಕೊಲಂಬಿಯಾ ವಿಶ್ವ ವಿದ್ಯಾಲಯದಲ್ಲಿ ಸೆಪ್ಟೆಂಬರ್ 24ನೇ ತಾರೀಖು ಅಲ್ಲಿನ 'ಜಗತ್ತಿನ ನಾಯಕರ ವೇದಿಕೆ' ಯನ್ನು ಉದ್ದೇಶಿಸಿ ಭಾಷಣ ಮಾಡಲು ಇರಾನಿನ ರಾಷ್ಟ್ರಾಧ್ಯಕ್ಷರಾದ ಮೊಹಮ್ಮದ್ ಅಹಮದ್ ಇನೇಜಾದ್ ಅವರನ್ನು ಆಮಂತ್ರಿಸಲಾಗಿತ್ತು.

ವಿಶ್ವವಿದ್ಯಾಲಯದ ಈ ಆಮಂತ್ರಣಕ್ಕೆ ಅಮೇರಿಕಾದಲ್ಲಿ ಬಹುತೇಕವಾದ ಆಕ್ಷೇಪಣೆಗಳು, ಪ್ರತಿಭಟನೆಗಳು ಮತ್ತು ವಿವಿಧ ಬಗೆಯ ಒತ್ತಡಗಳು ಇದ್ದೇ ಇದ್ದವು. ಆದಾಗ್ಯೂ ಆ ವಿಶ್ವವಿದ್ಯಾಲಯವು ಇದಾವುದನ್ನೂ ತಾವು ಮನ್ನಿಸುವುದಿಲ್ಲವೆಂದೂ ಮತ್ತು ತಮ್ಮ ಸ್ವಾತಂತ್ರ್ಯ ಮತ್ತು ಯಾವುದೇ ವಿಧವಾದ ಅಭಿಪ್ರಾಯಕ್ಕೂ ತೆರೆದ ವಾತಾವರಣವನ್ನು ಪ್ರತಿಪಾದಿಸುವ ತಮ್ಮ ನಿಲುವಿಗೆ ಅನುಗುಣವಾಗಿ ತಾವು ನೀಡಿರುವ ಆಹ್ವಾನವನ್ನು ಹಿಂತೆಗೆದು ಕೊಳ್ಳುವುದಿಲ್ಲವೆಂದು ಘೋಷಿಸಿತು.

ಸೆಪ್ಟೆಂಬರ್ 24 ರಂದು ಇರಾನಿನ ರಾಷ್ಟ್ರಾಧ್ಯಕ್ಷರು ಆಹ್ವಾನಿಸಲ್ಪಟ್ಟ ಅತಿಥಿಯಾಗಿ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಭಾಷಣ ಮಾಡಲು ಬಂದಾಗ ಆದದ್ದೇನು?

ಭಾಷಣಕಾರರನ್ನು ಪರಿಚಯ ಮಾಡಿಕೊಡುವ ಪದ್ಧತಿಯಂತೆ ಕೊಲಂಬಿಯಾ ವಿಶ್ವವಿದ್ಯಾನಿಲಯದ ಅಧ್ಯಕ್ಷರಾದ ಲೀ ಬುಲ್ಲಿಂಗರ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಅಹಮದ್ ಇನೇಜಾದ್ ರವರು ಅಲ್ಲೇ ಕುಳಿತಿರುವಾಗಲೇ, ಹೀಗೆಲ್ಲಾ ಹೇಳಿದರು.

"ನೀವು ಒಬ್ಬ ಕ್ಷುಲ್ಲಕ ಮತ್ತು ಕ್ರೂರ ಸರ್ವಾಧಿಕಾರಿಯ ಎಲ್ಲ ಕುರುಹುಗಳನ್ನು ಪ್ರದರ್ಶಿಸುತ್ತೀರಿ", "ನೀವು ಜನರನ್ನು ಪ್ರಚೋದಿಸುವವರು, ಅವಿದ್ಯಾವಂತರು"



ಬುಲ್ಲಿಂಗರ್‌ರವರ ಆಕ್ರೋಶ, ಇರಾನ್ ರಾಷ್ಟ್ರಾಧ್ಯಕ್ಷರ 'ಹೋಲೋಕಾಸ್ಟ್' ವಿಚಾರದಲ್ಲಿ ಸಂದೇಹ ಮತ್ತು ಅವರ ಇಸ್ರೇಲ್ ಸಂಬಂಧವಾದ ಬೆದರಿಕೆ, ಇವುಗಳ ಬಗ್ಗೆ ಅವರು ಇರಾನ್ ರಾಷ್ಟ್ರಾಧ್ಯಕ್ಷರನ್ನು ಈ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಕೊಡುವಂತೆ ಕೇಳುತ್ತಾ ಹೀಗೂ ಅಂದರು "ನಿಮಗೆ ಈ ಪ್ರಶ್ನೆಗಳಿಗೆ ಉತ್ತರ ಕೊಡುವ ಬೌದ್ಧಿಕ ಧೈರ್ಯ ಇರುತ್ತದೆ ಎನ್ನುವುದರಲ್ಲಿ ನನಗೆ ಅನುಮಾನವಿದೆ."

ಇದೆಲ್ಲವನ್ನೂ ಕೇಳುತ್ತಾ ಕುಳಿತಿದ್ದ ಇರಾನಿನ ರಾಷ್ಟ್ರಾಧ್ಯಕ್ಷರು ನಗುಮುಖರಾಗೇ ಇದ್ದರಂತೆ. ಶೋತ್ರುಗಳನ್ನು ಉದ್ದೇಶಿಸಿ ಮಹಮೂದ್ ಅಹಮದೀನೇಜಾದ್ ಅವರು ಹೀಗೆ ಹೇಳಿದರಂತೆ "ಇರಾನಿನಲ್ಲಿ ಸಂಪ್ರದಾಯದ ಪ್ರಕಾರ ನಾವು ವಿದ್ಯಾರ್ಥಿಗಳಿಗೆ ಮತ್ತು ಪ್ರೊಫೆಸರ್‌ಗಳಿಗೆ ತಮ್ಮದೇ ಸ್ವಂತ ನಿಲುವಿಗೆ ಬರಲು ಅವಕಾಶ ಕೊಡುವ ಮೂಲಕ ಅವರನ್ನು ವಾಸ್ತವಿಕವಾಗಿ ಗೌರವಿಸುತ್ತೇವೆ ಮತ್ತು ಭಾಷಣಕ್ಕೆ ಮುಂಚೆಯೇ ಸಾಧನಾ ಸರಣಿಗಳಿಗೆ ಹೋಗುವ ಅವಶ್ಯಕತೆ ಇದೆಯೆಂದು ಭಾವಿಸುವುದಿಲ್ಲ"

ಮೇಲಿನ ಉಲ್ಲೇಖನದ ಬಗ್ಗೆ ವಿಶೇಷ ಪ್ರತಿಕ್ರಿಯೆಗಳು ಬೇಕಾಗಿಯೇ ಇಲ್ಲ. ಒಂದೆಡೆ ತಾನೇ ಆಹ್ವಾನಿಸಿದ ಅತಿಥಿಗಳಿಗೆ ಆ ದೇಶದ ಉನ್ನತ ವಿದ್ಯಾಮಂದಿರದಲ್ಲಿ ಎಲ್ಲರೆದುರಿಗೂ ಮಾಡಿದ ಅಪಮಾನ. ಇನ್ನೊಂದೆಡೆ ಇನ್ನೊಂದು ದೇಶದ ರಾಷ್ಟ್ರಪತಿ, ಈ ಅಪಮಾನಕ್ಕೆ ಗುರಿಯಾದ ಸಂದರ್ಭದಲ್ಲಿ ತೋರಿಸಿದ ಗಂಭೀರ ಸಜ್ಜನಿಕೆ, ಇವೆರಡೂ ಒಂದರೆದುರೊಂದು ಎದ್ದು ನಿಲ್ಲುತ್ತವೆ.

ಅವಕಾಶ ಸಿಕ್ಕಿದಾಗಲೆಲ್ಲ ಮತ್ತು ಅವಕಾಶಗಳನ್ನು ಕಲ್ಪಿಸಿಕೊಂಡೂ ಸಹ ತಮ್ಮ ದೇಶದ ಆಡಳಿತ ವಲಯಗಳ ಹರಿಹಾಯುವಿಕೆ-ಎಲ್ಲ ಉನ್ನತ ಧ್ಯೇಯ, ನಂಬಿಕೆ, ವಿಚಾರಶೀಲತೆ ಗಳಲ್ಲೂ ಅಮೇರಿಕವೇ ಮಾರ್ಗದರ್ಶಿ ಎಂಬ ನಿಲುವು ಎಷ್ಟರಮಟ್ಟಿಗೆ ಉಚಿತ ಎನ್ನುವುದಕ್ಕೆ ಮೇಲಿನದು ಒಂದು ಗಮನಾರ್ಹ ಉಲ್ಲೇಖವಲ್ಲವೇ? ○

ಕ್ಯೂಬಾ ದಿಗ್ಬಂಧನಕ್ಕೆ 45 ವರ್ಷ!

ಅಮೇರಿಕಾ ಸಂಯುಕ್ತ ಸಂಸ್ಥಾನವು ಕ್ಯೂಬಾದ ಮೇಲೆ ದಿಗ್ಬಂಧನ ಹೇರಿ 45 ವರ್ಷಗಳು ಕಳೆದಿವೆ. ಅಂದರೆ, ಅಮೇರಿಕಾ ಬೆಂಬಲಿತ ಬ್ಯಾಟಿಸ್ಟ ಸರ್ವಾಧಿಕಾರಿಯನ್ನು ಅಧಿಕಾರದಿಂದ ಕೆಳಗಿಳಿಸಿದ 3 ವರ್ಷಗಳ ತರುವಾಯ ಅಮೇರಿಕಾ ದಿಗ್ಬಂಧನ ಹೇರಿದೆ.

ಫಿಡಲ್ ಕ್ಯಾಸ್ಟ್ರೋ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆ ದೇಶವನ್ನು ಕೊಳ್ಳೆ ಹೊಡೆಯುತ್ತಿದ್ದ ಅಮೇರಿಕಾದ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಿದ ಕೂಡಲೇ ಜಾನ್ ಎಫ್.ಕೆನಡಿ ನೇತೃತ್ವದ ಅಮೆರಿಕಾ ಸರ್ಕಾರ ದಿಗ್ಬಂಧನ ಹೇರಿತ್ತು. ಅದರ ನಂತರ ಹಲವಾರು ಅಧ್ಯಕ್ಷರು ಅಮೇರಿಕಾ ಸರ್ಕಾರ ಚುಕ್ಕಾಣಿ ಹಿಡಿದರು ದಿಗ್ಬಂಧನ ವಾಪಸ್ಸು ಪಡೆಯುವ ಧೈರ್ಯ ತೋರಲಿಲ್ಲ. ಅಮೆರಿಕಾ ಸರ್ಕಾರದ ಮೇಲೆ ದೊಡ್ಡ ಕಂಪನಿಗಳ ಹಿಡಿತ ಎಷ್ಟಿದೆಯೆಂಬುದನ್ನು ಇದು ತೋರಿಸುತ್ತದೆ.

ದಿಗ್ಬಂಧನವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಈವರೆಗೆ ಸತತವಾಗಿ 15 ಬಾರಿ ವಿಶ್ವ ಸಂಸ್ಥೆಯು ಚರ್ಚಿಸಿ ಬಹುಮತದ ನಿರ್ಧಾರ ಕೈಗೊಂಡಿದ್ದರೂ ಅಮೇರಿಕಾ ಇದನ್ನು ಪಾಲಿಸುತ್ತಿಲ್ಲ. ಇದರಿಂದಾಗಿ ಕ್ಯೂಬಾ ದೇಶಕ್ಕೆ ಆದ ನಷ್ಟ 89 ಬಿಲಿಯ ಡಾಲರುಗಳು (3,56,000 ಕೋಟಿ ರೂ.ಗಳು)

ಈ ದಿಗ್ಬಂಧನದ ಪ್ರಕಾರ, ಅಮೇರಿಕಾದ ನಾಗರಿಕರು ಕ್ಯೂಬಾಕ್ಕೆ ಹೋಗುವಂತಿಲ್ಲ. ಆದೇಶದ ಕಂಪನಿಗಳು ಕ್ಯೂಬಾ ದವರೊಂದಿಗೆ ವ್ಯಾಪಾರ ಮಾಡುವಂತಿಲ್ಲ. ಮಾತ್ರವಲ್ಲ, ಅಮೇರಿಕಾದಲ್ಲಿರುವ ವಿದೇಶಿ ಕಂಪನಿಗಳು ಕೂಡಾ ಕ್ಯೂಬಾದೊಂದಿಗೆ ವ್ಯಾಪಾರ ಮಾಡುವಂತಿಲ್ಲ. ಅಂದರೆ, ಭಾರತದ ಕಂಪನಿಯೊಂದು ಅಮೇರಿಕಾದಲ್ಲಿ ಶಾಖೆಯೊಂದನ್ನು ತೆರೆದಿದೆ ಎಂದಿಟ್ಟುಕೊಳ್ಳಿ, ಆಗ ಆ ಕಂಪನಿಯ ಅಮೇರಿಕಾದಲ್ಲಿರುವ ಶಾಖೆಯೂ ಕ್ಯೂಬಾದೊಂದಿಗೆ ವ್ಯಾಪಾರ ಮಾಡುವಂತಿಲ್ಲ. ಮಾತ್ರವಲ್ಲ ಆ ಕಂಪನಿಯ ಭಾರತದಲ್ಲಿರುವ ಪ್ರಧಾನ ಕಛೇರಿಯು ಕೂಡಾ ಕ್ಯೂಬಾದೊಂದಿಗೆ ವ್ಯವಹಾರ ನಡೆಸುವಂತಿಲ್ಲ! ಇದಕ್ಕೆ ಹೆಲ್ಮ್ಸ್ ಬರ್ಟನ್ ಕಾಯಿದೆ ಎಂದು ಹೇಳುತ್ತಾರೆ. ಹೇಗಿದೆ ದೊಡ್ಡಣ್ಣನ ಆದೇಶ? ಈ ಕಾಯಿದೆಯನ್ನು ಯುರೋಪಿಯನ್ ಯೂನಿಯನ್ ರಾಷ್ಟ್ರಗಳು ವಿರೋಧಿಸಿವೆ.

2000ನೇ ಇಸವಿಯಲ್ಲಿ ಈ ಕಾಯಿದೆಯಲ್ಲಿ ಕೆಲವು ಬದಲಾವಣೆ ತಂದ ಜಾರ್ಜ್ ಡಬ್ಲ್ಯೂ. ಬುಶ್ ಆಹಾರ ಮತ್ತು ಕೃಷಿ ಉತ್ಪಾದನೆಯನ್ನು ರಫ್ತು ಮಾಡಲು ಅನುಮತಿ ನೀಡಿದೆ. ಆದರೆ ಕ್ಯೂಬಾದಿಂದ ಯಾವುದೇ ಸಾಮಾಗ್ರಿಗಳನ್ನು ಆಮದು ಮಾಡಿಕೊಳ್ಳುವಂತಿಲ್ಲ. 2004 ರಲ್ಲಿ ಕಾಯಿದೆಯನ್ನು ಇನ್ನಷ್ಟು ಬಿಗಿಗೊಳಿಸಿ, ಅಮೇರಿಕಾದಲ್ಲಿರುವ ಕ್ಯೂಬಾದ ನಾಗರೀಕರು ತಮ್ಮ ಕುಟುಂಬಗಳಿಗೆ ಕಳುಹಿಸಬಹುದಾಗಿದ್ದ 12,000 ಡಾಲರ್ ವಾರ್ಷಿಕ ಮಿತಿಯನ್ನು 1200 ಡಾಲರಿಗೆ ಕಡಿತಗೊಳಿಸಿದೆ.

ಇಂಥಾ ಕ್ರೂರಿ ಅಮೇರಿಕಾದೊಂದಿಗೆ ಮಿತ್ರುತ್ವ ಬಯಸುವ ಮನಮೋಹನ್ ಸಿಂಗ್‌ರವರಿಗೆ ಏನನ್ನಬೇಕು?

ಕ್ರಿಕೆಟ್ ವಿಶ್ವಕಪ್ ಗೆದ್ದಿದ್ದಕ್ಕೆ ಅಭಿನಂದನೆಗಳು ! ಆದರೆ

ಸರಿಯಾ ? ಆ ಭಾವೋದ್ವೇಗ, ಈ ತಾರತಮ್ಯ

ಅದು ಭಾನುವಾರವೇನಲ್ಲ. ರಾತ್ರಿ 7 ರಿಂದ 8 ಗಂಟೆಯಷ್ಟರ ಹೊತ್ತಿಗೆ ಬೆಂಗಳೂರು ನಗರದ ಬಸ್‌ಗಳು ಖಾಲಿ ಖಾಲಿ. ಏನಿದು? ಓಹೋ ಬಸ್‌ನಲ್ಲಿರುವ ಕೆಲವೇ ಕೆಲವರೂ ಕ್ರಿಕೆಟ್ ಮ್ಯಾಚ್ ಬಗ್ಗೆಯೇ ಮಾತನಾಡುತ್ತಿದ್ದಾರೆ. ಸಹಜವೇ. ಅದೂ ಭಾರತ ನಿರೀಕ್ಷೆಯನ್ನು ಮೀರಿ ಟ್ವೆಂಟಿ- 20 ವಿಶ್ವಕಪ್ ಫೈನಲ್ ಪ್ರವೇಶಿಸಿರುವಾಗ ಜನರನ್ನು ಅದು ಸೆಳೆಯದೇ ಇದ್ದೀತೇ?

ಕ್ರೀಡೆಯ ಬಗೆಗೆ ಆಸಕ್ತಿ ಒಳ್ಳೆಯದು. ತಮ್ಮ ದೇಶದ ತಂಡದ ಬಗೆಗೆ ಹೆಮ್ಮೆಯೂ ಒಳ್ಳೆಯದೇ. ರಾತ್ರಿ ಒಂಭತ್ತು ಗಂಟೆ ಆಯ್ತು ಆಗೋ ನಗರದ ವಿವಿದೆಡೆ ಪಟಾಕಿ, ಸಿಡಿಮದ್ದುಗಳ ಸಿಡಿತ. ಜನರ ಕೇಕೆ, ಘೋಷಣೆಗಳ ಮೊರೆತ. ವಾಹನಗಳ ಮೆರವಣಿಗೆ ಸಾಲು ಸಾಲು. ಸಂಭ್ರಮಾಚರಣೆ ಓಹೋ ಭಾರತ ವಿಶ್ವಕಪ್ ಗೆದ್ದೇ ಬಿಟ್ಟಿದೆ. ತುಂಬಾ ಸಂತೋಷ. ದೋನಿ ಮತ್ತು ಯುವ ತಂಡಕ್ಕೆ ಅಭಿನಂದನೆ. ಕ್ರಿಕೆಟ್ ಮ್ಯಾಚ್ ಕೊನೆಯ ಕ್ಷಣಗಳನ್ನಾದರೂ ಸವಿಯೋಣವೆಂದು ಮನೆ ಕಡೆ ಹೊರಟರೆ ಆಟ ಮುಗಿದೇ ಹೋಯಿತಲ್ಲಾ! ಇಷ್ಟು ಬೇಗ. ಅದಿರಲಿ ಇದೇನಿದು ಜನರಲ್ಲಿ ಯಾಕಿಷ್ಟು ಉದ್ವೇಗ, ಆ ವೇಗ. ಭಾರತ ಗೆದ್ದಿದೆ ಎಂಬುದಷ್ಟೇ ಕಾರಣಕ್ಕೆ ಇಷ್ಟು ಉದ್ವೇಗಗೊಳ್ಳಬೇಕಿಲ್ಲವಲ್ಲ. ಓಹೋ ಭಾರತ ಗೆದ್ದಿದೆ. ಯಾರ ವಿರುದ್ಧ ಸಾಂಪ್ರದಾಯಿಕ 'ಎದುರಾಳಿ' ಪಾಕಿಸ್ಥಾನದ ವಿರುದ್ಧ ಗೆದ್ದಿದೆ. ಅದಕ್ಕೆ ಈ ಉದ್ವೇಗ. ಭಾರತ ಬದ್ಧ 'ವೈರಿ'ಯನ್ನು ಸದೆ ಬಡೆದಿದೆ. ಅದಕ್ಕೆ ಸಂಭ್ರಮದ ಜಾಗದಲ್ಲಿ ಉದ್ವೇಗ!

ಇದೆಲ್ಲ ಬೇಕಾ? ಕ್ರೀಡೆಯನ್ನು ಶುದ್ಧ ಕ್ರೀಡಾ ಮನೋಭಾವದಿಂದ ನೋಡಬಾರದೇ? 'ಎದುರಾಳಿ' 'ಶತ್ರು' ವಿನ ತಂಡದಲ್ಲಿ ಉತ್ತಮ ಆಟವಿದ್ದಲ್ಲಿ ಅದನ್ನು ಗುರುತಿಸಿ ನೋಡಿ ಮೆಚ್ಚುವುದು ಈ ಮನಃಸ್ಥಿತಿಯಲ್ಲಿ ಸಾಧ್ಯವೇ?

ಆಗೋ, ಭಾರತದ ಆಟಗಾರರು ಮುಂಬೈಗೆ ಬಂದರು. ಅವರಿಗೆ ಭವ್ಯ ಸ್ವಾಗತ. ಒಳ್ಳೆಯದೇ.



ಬಹುಮಾನಗಳ ಸುರಿಮಳೆ. ಎಲ್ಲಾ ರಾಜ್ಯ ಸರ್ಕಾರಗಳೂ ತಮ್ಮ ರಾಜ್ಯದ ಆಟಗಾರರಿಗೆ 5 ರಿಂದ 10 ಲಕ್ಷ ಹೀಗೆ ಬಹುಮಾನಗಳನ್ನು ಘೋಷಿಸುತ್ತಿದ್ದಾರೆ. ಜನರ ಅಭಿಮಾನದ ಹುಚ್ಚು ಹೊಳೆ. ಆದರೆ ಒಂದು ರಾಜ್ಯ ಮಾತ್ರ ಬಹುಮಾನ ಘೋಷಿಸಿಲ್ಲ. ಎಲ್ಲಾ ಟಿ.ವಿ. ಚಾನೆಲ್‌ಗಳೂ ಅದನ್ನು ಈಗಾಗಲೇ ಗುರುತಿಸಿವೆ- ಸದ್ಯ ಇದೊಂದು ಸಮಾಧಾನದ ವಿಷಯ. ಯಾವುದು ಆ ರಾಜ್ಯ. ಗುಜರಾತ್, ಹೌದು ಗಾಂಧಿ ಹುಟ್ಟಿದ ನಾಡು. ಅಲ್ಲಿ ಈಗ ನರೇಂದ್ರ ಮೋದಿಯ ಬೀಡು. ಅರೆ ಇರ್ಫಾನ್ ಪಠಾಣ್ ಇಲ್ಲಿಯವರೇ ಅಲ್ಲವೇ? ಗೆಲುವಿನ ರೂವಾರಿಗಳಲ್ಲಿ ಇವರೂ ಪ್ರಮುಖರಲ್ಲವೇ? ಇರ್ಫಾನ್‌ಗೆ ಅಲ್ಲವೇ ಮ್ಯಾನ್ ಆಫ್ ದಿ ಮ್ಯಾಚ್. ಆದರೂ... ಓಹೋ ಸುದ್ದಿ ಇದೀಗ ಬರುತ್ತಿದೆ. ಸಂಜೆಗೆ. ಮನಸ್ಸಿದ್ದೋ ಇಲ್ಲದೆಯೋ ಅಂತೂ ಸರ್ಕಾರ ಬಹುಮಾನ ಕೊಟ್ಟಿದೆ. ತಡವಾಗಿಯಾದರೂ. ಇಷ್ಟಾದರೂ ಕಿರಿಕ್ ಮಾಡದಿದ್ದರೆ 'ಮೋದಿ' ವರ್ಚಸ್ಸು, ಹಿರಿಮೆಗೆ ಧಕ್ಕೆಯಲ್ಲವೆ?

ಓ, ಮತ್ತಿದೇನು ಧಿಕ್ಕಾರ, ಪ್ರತಿಭಟನೆ, ಓಹೋ ಇವರು ಹಾಕಿ ಆಟಗಾರರಲ್ಲವೇ. ನಿಜ ಪಾಪ ಅವರೂ ಮೊನ್ನೆ ಮೊನ್ನೆ ಏಷ್ಯನ್ ಕಪ್ ಗೆದ್ದು ತಂದರಲ್ಲ ಸ್ವಾಮಿ. ಬಹುಮಾನ ಹೋಗಲಿ, ವಿಮಾನ ನಿಲ್ದಾಣದಲ್ಲಿ ಅವರನ್ನು ಸ್ವಾಗತಿಸಲು ಯಾರೂ ಇರಲಿಲ್ಲವಂತೆ! ಇದೆಲ್ಲಾ ಸರೀನಾ. ಸರಕಾರಗಳೇ ಈ ರೀತಿ ತಾರತಮ್ಯ ಮಾಡಬಹುದಾ? ಜನ ತಮಗೆ ಯಾವ ಆಟ ಬೇಕೋ ಅದನ್ನು ನೋಡುತ್ತಾರೆ. ನೋಡಲಿ. ಆದರೆ ಜಾಹಿರಾತು ಲಾಬಿ, ಮ್ಯಾಚ್ ಫಿಕ್ಸಿಂಗ್, ಬೆಟ್ಟಿಂಗ್, ವಸೀಲಿ ಬಾಜಿ ಇವೆಲ್ಲಾ ಕ್ರೀಡೆಯೊಳಗೆ ತೂರಿಕೊಂಡರೆ ಮುಗ್ಧ ಜನರಿಗೆ ಮಾತ್ರ ವಂಚನೆಯಾಗುತ್ತದೆ ಅಷ್ಟೇ.

ದೇಶದ ಚುಕ್ಕಾಣಿ ಹಿಡಿದಿರುವವರು, ಅಥವಾ ಹಿಡಿಯಬೇಕೆನ್ನುವವರು ದೇಶ ದೇಶಗಳ ನಡುವೆ ಯುದ್ಧ ಹುಟ್ಟಿಹಾಕಿ ತಮ್ಮ ಬೇಳೆ ಬೇಯಿಸಿ ಕೊಳ್ಳುತ್ತಾರೆ. ಪ್ರಾಣ ತೆರುವವರು ಬಡ ರೈತ ಕಾರ್ಮಿಕರ ಮಕ್ಕಳಾದ ಸೈನಿಕರು. ಮಳೆ ನಿಂತರೂ ಮರದಿಂದ ಹನಿ ಉದುರು ವಂತೆ ಇನ್ನು ಅದೇ ಗುಂಗಿನಲ್ಲಿದ್ದರೆ ಹೇಗೆ? ಯುದ್ಧ ಕಾಲದಲ್ಲಿ ಆದ ಗಾಯ ವೈಷಮ್ಯವೆಲ್ಲ ಮಾಯುವಂತೆ ಮಾಡಲು ಅಲ್ಲವೇ ಈ ಕ್ರೀಡೆ, ಸಂಗೀತ, ನೃತ್ಯ ಎಲ್ಲ. ಕ್ರೀಡೆಯ ಮೂಲ ಉದ್ದೇಶವನ್ನೇ ಮರೆತರೆ ಹೇಗೆ? ○

ಅಮೆರಿಕಾ-ಭಾರತ ಅಣು ಒಪ್ಪಂದ ಕುರಿತು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಿಚಾರ ಸಂಕಿರಣದ ವರದಿ

ಭಾರತ - ಅಮೆರಿಕಾ ಪರಮಾಣು ಒಪ್ಪಂದ ದೇಶದ ಹಿತಕ್ಕೆ ಮಾರಕ

ಭಾರತ ಜನಪರ ವೇದಿಕೆ ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಏರ್ಪಡಿಸಿದ್ದ ಭಾರತ ಅಮೇರಿಕಾ ಅಣು ಒಪ್ಪಂದ ಕುರಿತ ವಿಚಾರ ಸಂಕಿರಣ ಒಂದು ಅಪರೂಪದ ಕಾರ್ಯಕ್ರಮವಾಗಿತ್ತು. ಈ ಪರಮಾಣು ಒಪ್ಪಂದದ ಕುರಿತಾಗಿ ಈಗಾಗಲೇ ಹಲವಾರು ವಿಚಾರ ಸಂಕಿರಣಗಳಾಗಿವೆ. ಆದರೆ ಈ ವಿಚಾರ ಸಂಕಿರಣದಲ್ಲಿ ಒಬ್ಬ ರಾಜಕಾರಣಿ, ವಿಜ್ಞಾನಿ, ಮಠಾಧೀಶ ಮತ್ತು ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ವೇದಿಕೆ ಹಂಚಿಕೊಂಡದ್ದು ಅಪರೂಪ. ಬೆಂಗಳೂರಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅಂದು ಸಿಪಿಐ(ಎಂ)ನ ಪಾಲಿಟ್ ಬ್ಯೂರೋದ ಸದಸ್ಯ ಸಂ: ಸೀತಾರಾಂ ಯೆಚೂರಿ, ಭಾರತ ಅಣು ವಿಜ್ಞಾನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ: ಗೋಪಾಲಕೃಷ್ಣ, ಚಿತ್ರದುರ್ಗದ ಮಠಾಧೀಶ ಶ್ರೀ ಮುರುಘಾಶರಣರು ಮತ್ತು ಭಾರತದ ಹಿಂದಿನ ರಾಯಬಾರಿ ಶ್ರೀ ಎಲ್.ಎನ್.ಖಲೀಲಿ ಭಾಷಣಕಾರರಾಗಿ ಭಾಗವಹಿಸಿದ್ದರು. ವಿವಿಧ ಗಣ್ಯರು ವಿಚಾರಸಂಕಿರಣದಲ್ಲಿ ಮಂಡಿಸಿದ ವಿಚಾರ ಸರಣಿ ಹೀಗಿದೆ -

ಶಸ್ತ್ರಾಸ್ತ್ರ, ಯುದ್ಧ ಮತ್ತು ಸಂಪತ್ತು ಕ್ರೋಢೀಕರಣ ಅಮೇರಿಕೆಯ ಆರ್ಥಿಕತೆಯ ಗುರುತುಗಳಾದರೆ ಬಡತನ, ಜನಸಂಖ್ಯಾ ಸ್ಫೋಟ ಮತ್ತು ಬಲವಂತರ ರಾಜಕೀಯ ಭಾರತದ ಆರ್ಥಿಕತೆಯ ಗುರುತುಗಳು. ಅಮೇರಿಕೆಯ ಆರ್ಥಿಕತೆ ಯುದ್ಧದ ಆರ್ಥಿಕತೆ ಯುದ್ಧವೆಂದರೆ ವಿನಾಶ. ಅಮೇರಿಕೆಯೊಡನೆ ಕೈ ಜೋಡಿಸುವುದೆಂದರೆ ವಿನಾಶಕ್ಕೆ ಮುಖ ಮಾಡಿದಂತೆ ಹಾಗಾಗಿ ಈ ಒಪ್ಪಂದವನ್ನು ನಾವೆಲ್ಲ ವಿರೋಧಿಸಲೇಬೇಕು. ಈ ವಿಚಾರವನ್ನು ಜನತೆಯ ಗಮನದ ಕೇಂದ್ರ ಬಿಂದುವಾಗಿಸಿದ ಎಡಪಕ್ಷಗಳನ್ನು ಶ್ಲಾಘಿಸಬೇಕು ಎಂದು ಮುರುಘರಾಜ ಶರಣ ಸ್ವಾಮೀಜಿ ಹೇಳಿದರು.

ಭಾರತದಲ್ಲಿ ಥೋರಿಯಂನ ಬಹು ದೊಡ್ಡ ಸಂಗ್ರಹವಿದೆ. ಥೋರಿಯಂನ್ನು ಪ್ಲುಟೋನಿಯಂನೊಂದಿಗೆ ಸೇರಿಸಿದಾಗ ಯುರೇನಿಯಂ ಲಭ್ಯವಾಗುತ್ತದೆ. ಇದಕ್ಕೆ ತಗಲುವ ಅವಧಿ 30 ರಿಂದ 35 ವರ್ಷಗಳು ಈ ಅವಧಿಯಲ್ಲಿ ನಮಗೆ 3,50,000 ಮೆಗಾವಾಟ್ ವಿದ್ಯುತ್ ತಯಾರಿಸುವುದು ಸಾಧ್ಯವಾಗುತ್ತದೆ ಎಂದು ಅಣು ಶಕ್ತಿ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷರಾದ ಡಾ: ಗೋಪಾಲಕೃಷ್ಣ ಹೇಳಿದರು.



ಎಸ್.ಕೆ.ಗೀತಾ

ಪೋಖ್ರಾನ್ 1 ಪರಮಾಣು ಪರೀಕ್ಷೆಯ ನಂತರ ಅಮೇರಿಕಾ ವಿಧಿಸಿದ ದಿಗ್ಬಂಧನದಿಂದಾಗಿ ನಮ್ಮ ಸಾಮರ್ಥ್ಯ ಕುಗ್ಗಿತ್ತು. ಹಾಗಿದ್ದೂ ಬಿ.ಹೆಚ್.ಇ.ಎಲ್. ಮತ್ತು ಎಲ್ ಅಂಡ್ ಟಿ ಯಂಥ ಸಂಸ್ಥೆಗಳು ದೇಶದ ಶಕ್ತಿ ಉತ್ಪಾದನೆಗೆ ಅಗಾಧ ಕೊಡುಗೆ ನೀಡಿದವು. ರಫ್ತು ಮಾಡಿಕೊಳ್ಳುವ ರಿಯಾಕ್ಟರುಗಳು ಸ್ಥಳೀಯವಾಗಿ ತಯಾರಿಸಿದ ರಿಯಾಕ್ಟರುಗಳಿಗಿಂತ ಶೇ.50 ರಷ್ಟು ದುಬಾರಿಯಾಗಿವೆ. ರಿಯಾಕ್ಟರುಗಳನ್ನು ಮಾರುವ ಅಮೇರಿಕಾ ನಮಗೆ ತಂತ್ರಜ್ಞಾನ ನೀಡುವುದಿಲ್ಲ. ಒಂದು ವೇಳೆ ಈ ರಿಯಾಕ್ಟರುಗಳು ವಿಫಲವಾದಲ್ಲಿ ಅದನ್ನು ಸರಿಪಡಿಸಲಾಗಲೀ, ಆಗಬಹುದಾದ ಅನಾಹುತ ತಡೆಯಲಾಗಲೀ ನಮಗೆ ಸಾಧ್ಯವಾಗುವುದಿಲ್ಲ. ಇದು ಇಡೀ ದೇಶದ ಜನತೆಯನ್ನು ಎಂತಹ ಅಪಾಯಕ್ಕೊಡ್ಡಲಿದೆ ಎಂಬುದನ್ನು ಊಹಿಸಲೂ ಅಸಾಧ್ಯ.

ಭಾರತದ ವಿದ್ಯುತ್ ಅಗತ್ಯಗಳನ್ನು ಬದಲೀ ವ್ಯವಸ್ಥೆಗಳಿಂದ ಶಾಖ ಮತ್ತು ಜಲ ವಿದ್ಯುತ್, ಸೌರ ಮತ್ತು ಅನಿಲ ಶಕ್ತಿಗಳನ್ನು ಬಳಸಿ ಪೂರೈಸಿಕೊಳ್ಳುವುದು ಸಾಧ್ಯವಿದೆ. ಆದರೆ ಸರ್ಕಾರ ಈ ಯೋಜನೆಗಳಿಗೆ ಹಣ ನೀಡುತ್ತಿಲ್ಲ.

ಅಮೇರಿಕಾಯೊಂದಿಗೆ ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸರ್ಕಾರ ಈ ದೇಶದ ಜನತೆಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡಿದೆ. ಈ ವಿಚಾರವನ್ನು ಬಯಲಿಗೆಳೆದು ಈ ಒಪ್ಪಂದದ ವಿರುದ್ಧ ನಾವು ಜನತೆಯನ್ನು ಒಂದುಗೂಡಿಸಬೇಕಿದೆ.

ಭಾರತದ ವಿದೇಶಾಂಗ ನೀತಿ ಸ್ವತಂತ್ರ ನೀತಿಯಾಗಿ ಉಳಿದಿಲ್ಲ. ಅಮೇರಿಕಾ ಈ ದೇಶದ ವಿದೇಶಾಂಗ ನೀತಿಯನ್ನು ನಿರ್ಧರಿಸುತ್ತಿದೆ. ಅಮೇರಿಕಾಯ ರಾಯಭಾರಿ ಇರಾನ್‌ನೊಂದಿಗೆ ನಮ್ಮ ಸಂಬಂಧಗಳನ್ನು ಕಡಿತಗೊಳಿಸುವಂತೆ ಹೇಳಿಕೆ ನೀಡಿದ್ದಾರೆ. ಅಮೇರಿಕಾದ ಒತ್ತಡಕ್ಕೆ ಮಣಿದು ಐಎಇಎ ಯಲ್ಲಿ ಭಾರತ ಇರಾನ್‌ನ ವಿರುದ್ಧ ಮತ ಚಲಾಯಿಸುವುದು. ಭಾರತದ ಸ್ವಾಭಿಮಾನಕ್ಕೆ ಬಿದ್ದಿರುವ ಪೆಟ್ಟು, ಈ ದೇಶ ಮತ್ತು ಜನತೆಯ ಹಿತಕ್ಕಾಗಿ ಭಾರತ ಸ್ವತಂತ್ರ ವಿದೇಶಾಂಗ ನೀತಿಯನ್ನನುಸರಿಸಬೇಕು ಎಂದು ಇರಾನ್ ದೇಶಕ್ಕೆ ಭಾರತದ ರಾಯಭಾರಿಯಾಗಿದ್ದ ಎ.ಎಂ.ಖಲೀಲಿ ಹೇಳಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಭಾರತ ಜನಪರ ವೇದಿಕೆಯ ಸದಸ್ಯರಾದ ಡಾ: ಎಸ್.ಚಟರ್ಜಿ ಅಧ್ಯಕ್ಷೀಯ ಭಾಷಣ ಮಾಡಿದರು. ಸಮಾರಂಭದ ಆರಂಭದಲ್ಲಿ ಭಾರತ ಜನಪರ ವೇದಿಕೆಯ ಸಂಚಾಲಕ ಸಂ: ಸುರೇಂದ್ರ ರಾವ್ ಸ್ವಾಗತ ಭಾಷಣ ಮಾಡಿದರು. ಸಹ ಸಂಚಾಲಕ ಸಂ: ಕೆ.ಗೋಪಾಲ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಸಂ: ಎಂ.ಚಂದನ್ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಈ ಸಮಾರಂಭವು ಸೆಪ್ಟೆಂಬರ್ 22 ರಂದು ನಡೆಯಿತು.

ಅಣು ಒಪ್ಪಂದ ಸಾರ್ವಭೌಮತೆಗೆ ಧಕ್ಕೆ - ಯೆಚೂರಿ

ಎಡಪಕ್ಷಗಳು ಈ ಒಪ್ಪಂದವನ್ನು ತೀವ್ರವಾಗಿ ವಿರೋಧಿಸುತ್ತವೆ ಏಕೆ? ಈ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಗೆ ಧಕ್ಕೆ ತರುತ್ತದೆ ಎಂಬುದಕ್ಕಾಗಿ ನಾವೀ ಒಪ್ಪಂದವನ್ನು ವಿರೋಧಿಸುತ್ತೇವೆ. ಪೋಖ್ರಾನ್‌ನ ಎರಡನೇ ಸ್ಫೋಟದ ನಂತರ ಅಮೇರಿಕಾ ಭಾರತದ ಮೇಲೆ ದಿಗ್ಬಂಧನ ಹೇರಿತ್ತು. ಅಮೇರಿಕಾವನ್ನು ಸುಪ್ರೀತಗೊಳಿಸಲು ಅಂದಿನ ಎನ್.ಡಿ.ಎ. ಸರ್ಕಾರ ಗುಟ್ಟಾಗಿ 8 ಸುತ್ತುಗಳ ಮಾತುಕತೆ ನಡೆಸಿತ್ತು. ಏಕಪಕ್ಷೀಯವಾಗಿ ಅಂದಿನ ಪ್ರಧಾನಿ ಶ್ರೀ ವಾಜಪೇಯಿಯವರು ಭಾರತದ ಅಮೇರಿಕಾಗೆ ಪತ್ರ ಬರೆದು ಅಮೇರಿಕಾ ತನ್ನ ಭಯೋತ್ಪಾದನೆಯ ವಿರುದ್ಧದ ಸಮರದಲ್ಲಿ ಭಾರತವನ್ನು ಬಳಸಿಕೊಳ್ಳಬಹುದೆಂದು ಆಹ್ವಾನ ನೀಡಿದ್ದರು. ಅಂದೇ ನಾವು ನಮ್ಮ ತೀವ್ರ ವಿರೋಧ ವ್ಯಕ್ತಪಡಿಸಿದ್ದೆವು. ಈ ಪರಮಾಣು ಒಪ್ಪಂದಕ್ಕೆ ಅಡಿಪಾಯ ಎನ್.ಡಿ.ಎ.ಯ ಕಾಲದಲ್ಲೇ ಆಗಿತ್ತು.

ಬುಶ್‌ನ ದೂರಾಲೋಚನೆ

ಚುನಾವಣೆಯ ನಂತರ ಯುಪಿಎ ಸರ್ಕಾರಕ್ಕೆ ನಾವು ಹೊರಗಿನಿಂದ ಬೆಂಬಲ ಸೂಚಿಸಿದ್ದು ಅದು ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಆಧಾರದಲ್ಲಿ ಈ ಕನಿಷ್ಠ ಕಾರ್ಯಕ್ರಮದನ್ವಯ ಭಾರತವು ಸ್ವತಂತ್ರ ವಿದೇಶಾಂಗ ನೀತಿಯನ್ನನುಸರಿಸಬೇಕು ಅಮೇರಿಕೆಯೊಂದಿಗೆ ಯಾವುದೇ ಮಿಲಿಟರಿ ಒಪ್ಪಂದ ಹೊಂದಕೂಡದೆಂಬ ನಿರ್ಬಂಧಕ್ಕೆ ಯುಪಿಎ ಸರ್ಕಾರ ಒಪ್ಪಿಗೆ ನೀಡಿತ್ತು. ಜುಲೈ 2005ರಲ್ಲಿ ಅಮೇರಿಕೆಯ ಅಧ್ಯಕ್ಷ ಜಾರ್ಜ್ ಬುಶ್‌ರೊಂದಿಗೆ ದೇಶದ ಪ್ರಧಾನಿಯವರು ಹೇಳಿಕೆ ನೀಡಿದಾಗ ಆ ಕುರಿತು ನಾವು ಒಂಭತ್ತು ಆತಂಕಗಳನ್ನು ಸೂಚಿಸಿದ್ದೆವು. ಇದಕ್ಕೆ ಪ್ರಧಾನಿಯವರು ಹನ್ನೆರಡು ಭರವಸೆಗಳನ್ನು ನೀಡಿ ಭಾರತ ತನ್ನ ವಿದೇಶಾಂಗ ನೀತಿಯನ್ನು ಸ್ಪಷ್ಟಪಡಿಸಿದ್ದಾರೆ. ಆದರೆ ಈಗಿನ ಈ ಒಪ್ಪಂದ ಆ ಎಲ್ಲ ಭರವಸೆಗಳಿಗೆ ವಿರುದ್ಧವಾಗಿದೆ. ಅಮೇರಿಕಾದಲ್ಲಿ ಚುನಾವಣೆ ಹತ್ತಿರವಾಗುತ್ತಿರು ವಾಗ ಪರಮಾಣು ವಾಣಿಜ್ಯ (Nuclear Commerce) ವನ್ನು ಪುನರುಜ್ಜೀವನಗೊಳಿಸಲು ಅಮೇರಿಕದ ಇಂದಿನ ಸರ್ಕಾರ ಮುಂದಾಗುತ್ತಿದೆ. ಅಮೇರಿಕಾ ಕಳೆದ ಮೂರು ದಶಕಗಳಿಂದ ಒಂದೇ ಒಂದು ಪರಮಾಣು ರಿಯಾಕ್ಟರನ್ನೂ ಮಾರಿಲ್ಲ. ಇದೀಗ ಭಾರತಕ್ಕೆ ಈ ರಿಯಾಕ್ಟರುಗಳನ್ನು ಮಾರುವ ಮೂಲಕ ಅಮೇರಿಕಾ ಅಪಾರ ಲಾಭಗಳಿಸಲಿದೆ. ರಿಯಾಕ್ಟರುಗಳ ತಯಾರಿ ಅಮೇರಿಕಾದ ಯುವಜನತೆಗೆ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಲಿದೆ. ಇದರ ಲಾಭಗಳಿಸಿ ತಾನು ಚುನಾವಣೆಯಲ್ಲಿ ಗೆಲ್ಲಬಹುದೆಂಬುದು ಬುಶ್‌ರ ದೂರಾಲೋಚನೆ.

ದೇಶದ ಪ್ರಧಾನಿಯವರ ಹೇಳಿಕೆಯಂತೆ ಈ ಒಪ್ಪಂದದಿಂದ 40000 ಮೆಗಾವಾಟ್ ಪರಮಾಣು ವಿದ್ಯುತ್ ಉತ್ಪಾದಿಸುವುದು ಸಾಧ್ಯವಾಗುತ್ತದೆ. ಇದರಲ್ಲಿ 10,000 ಮೆಗಾಮೆಟ್ ಭಾರತದ ಸ್ಥಾವರಗಳಿಂದಲೇ ಉತ್ಪಾದನೆಯಾಗುತ್ತದೆಯಾದರೆ ಉಳಿದ 30000 ಮೆಗಾವಾಟ್‌ಗೆ ತಗಲುವ ವೆಚ್ಚ 3,30,000 ಕೋಟಿ ರೂ.ಗಳು ಇದೇ ಮೊತ್ತದ ವಿದ್ಯುತ್‌ನ್ನು ಕಲ್ಲಿದ್ದಲು ಬಳಸಿದಲ್ಲಿ ತಗಲುವ ವೆಚ್ಚ ಕೇವಲ 1,20,000 ಕೋಟಿ.ರೂಗಳು ಅನಿಲ ಅಥವಾ ಜಲ ಶಕ್ತಿ ಬಳಸಿದರೆ 90,000 ಕೋಟಿ ರೂ.ಗಳಲ್ಲೇ ಉತ್ಪಾದಿಸಬಹುದು.

ವಿದ್ಯುತ್ ಉತ್ಪಾದನೆಗೆ ಪರ್ಯಾಯ ದಾರಿಗಳಿರುವಾಗ ಹೀಗೆ ಅಪಾರವಾದ ಮೊತ್ತವನ್ನು ವೆಚ್ಚ ಮಾಡುವ ಅಗತ್ಯವಿದೆಯೇ? ಬದಲಿ ವಿಧಾನ ಬಳಸಿ ವಿದ್ಯುತ್ ತಯಾರಿಸಿದಲ್ಲಿ ಉಳಿಯುವ ಹಣದಿಂದ 100 ಹಾಸಿಗೆಯುಳ್ಳ 100 ಹಾಸಿಗೆಯುಳ್ಳ 25,000 ಆಸ್ಪತ್ರೆಗಳನ್ನು ಕಟ್ಟಬಹುದು ಅಥವಾ ಪ್ರತಿ ನೂರು ವಿದ್ಯಾರ್ಥಿಗಳಿರುವ 2,50,000 ಶಾಲೆಗಳನ್ನು ಕಟ್ಟಬಹುದು. ಮೇಲಾಗಿ ಸ್ಥಳೀಯ ಬದಲಿ ಮಾರ್ಗಗಳಿಂದ ವಿದ್ಯುತ್ ತಯಾರಿಸಿದರೆ ಸೃಷ್ಟಿಯಾಗುವ ಉದ್ಯೋಗಾವಕಾಶಗಳು ನಮ್ಮ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಈ ಅಣು ಒಪ್ಪಂದ ಜಾರಿಯಾದಲ್ಲಿ ನಾವು ಈ ಎಲ್ಲ ಅವಕಾಶಗಳಿಂದ ವಂಚಿತರಾಗುತ್ತೇವೆ. ಈ ಅಣು ಒಪ್ಪಂದದ ಮೂಲಕ ದೇಶಕ್ಕೆ ಹೊಸ ಪರಮಾಣು ತಂತ್ರಜ್ಞಾನ ದೊರೆಯುತ್ತದೆ ಮತ್ತು ನಿರಂತರ ಪರಮಾಣು ಇಂಧನ ಪೂರೈಕೆಯಾಗುತ್ತದೆಯೆಂದೆಲ್ಲ ಹೇಳಲಾಗುತ್ತಿದೆ. ಇಡೀ ಜಗತ್ತಿನ ಶೇ.70ರಷ್ಟು ಥೋರಿಯಂ ನಮ್ಮಲ್ಲಿದೆ. ಇಂಧನ ಪೂರೈಕೆಗಾಗಿ ನಾವು ಯಾರನ್ನೂ ಅವಲಂಬಿಸಬೇಕಿಲ್ಲ. ಆದರೆ ಅಮೇರಿಕೆಯ ಆಸಕ್ತಿ ನಾವು ಇತರ ದೇಶಗಳಿಂದ ಯುರೇನಿಯಂ ಕೊಳ್ಳುವಂತಾಗಬೇಕೆಂಬುದಾಗಿದೆ.

ಈ ಒಪ್ಪಂದವನ್ನು ವಿರೋಧಿಸುವ ಮೂಲಕ ನಾವು ಚೀನಾಕ್ಕೆ ಸಹಾಯ ಮಾಡುತ್ತಿದ್ದೇವೆ ಎಂಬ ಆರೋಪವಿದೆ. ಭಾರತದ ಪರಮಾಣು ಶಕ್ತಿ ಕುಗ್ಗುವುದರಲ್ಲಿ ಚೀನಾದ ಹಿತವಿದೆ. 123 ಒಪ್ಪಂದ ನಮ್ಮ ದೇಶದ ಪರಮಾಣು ಸಾಮರ್ಥ್ಯವನ್ನು ನಿಯಂತ್ರಿಸುವಾಗ ಈ ಆರೋಪ ಅರ್ಥಹೀನವೆಂದು ಅರಿವಾಗುತ್ತದೆ.

ನಾವು ವಿರೋಧಿಸುತ್ತೇವೆ, ನೀವು?

ಪರಮಾಣು ಒಪ್ಪಂದವನ್ನು ವಿರೋಧಿಸಿ ಸರ್ಕಾರವನ್ನು ಕೆಳಗಿಳಿಸುವುದು ನಮ್ಮ ಉದ್ದೇಶವಲ್ಲ. ದೇಶದ ಸಮಗ್ರಜನತೆಯ ಹಿತ ನಮ್ಮ ಉದ್ದೇಶ. ಜನತೆಯ ಹಿತ ಮತ್ತು ದೇಶದ ಸಮಗ್ರತೆಯ ಉದ್ದೇಶದಿಂದ ನಾವೀ ಒಪ್ಪಂದವನ್ನು ವಿರೋಧಿಸುತ್ತೇವೆ. ನೀವೆಲ್ಲ ನಮ್ಮ ಈ ಕಾರ್ಯದಲ್ಲಿ ಕೈ ಜೋಡಿಸಿ

- ಸೀತಾರಾಮ್ ಯೆಚೂರಿ


ಸಭಾಂಗಣದಲ್ಲಿ ಕಿಕ್ಕಿರಿದ ಜನಸಮೂಹ



JANASHAKTHI KANNADA VARA PATRIKE OCT, 07, 2007 Price : Rs. 5/- No. KARKAN /2006/17926

ವಿಶೇಷವೇನಿಲ್ಲ - ಸಾಮಾನ್ಯ ಚಿತ್ರ





'ಹಮ್ ದಿಲ್ ದೇ ಚುಕೆ ಸನಮ್' - ಹಿಂದಿಯ ಅತ್ಯಂತ ಯಶಸ್ವಿ ಚಿತ್ರ. 'ಭಾರತೀಯ ಸಂಸತಿಯಲ್ಲಿ ವೈವಾಹಿಕ ಜೀವನದ ಉತಷ್ಟತ'ಯನ್ನು ನಿರೂಪಿಸುತ್ತಲೇ, ವಿವಾಹ ಪೂರ್ವದಲ್ಲಿ ಪ್ರೀತಿ -ಪ್ರಣಯಗಳು ಏನೇ ಇದ್ದರೂ ನಂತರದಲ್ಲಿ ಗಂಡನೇ ಸರ್ವಸ್ವ, ಆತನೇ ದಿಕ್ಕು ಎಂದು ಬಿಂಬಿಸಿದ ಚಿತ್ರ ಅದು. ಸಂಜಯ ಲೀಲಾ ಬನ್ಸಾಲಿಯವರ ಕಲಾತ್ಮಕ ಅದ್ಭುತ ನಿರೂಪಣೆಯಿಂದಾಗಿ ಆ ಚಿತ್ರ ಸಾಕಷ್ಟು ಜನಮನ್ನಣೆ ಗಳಿಸಿತ್ತು. ಅಂತದ್ದೇ ಕಥೆಯ ಸಾರವುಳ್ಳ ಚಿತ್ರ 'ಮಿಲನ'. ಆ ಚಿತ್ರದ ಪ್ರಭಾವ ಈ ಚಿತ್ರದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಆಕಾಶ್(ಪುನೀತ್) ಒಬ್ಬ ರೇಡಿಯೋ ಜಾಕಿ. ತಾನು ಪ್ರೇಮಿಸಿದ ಹುಡುಗಿ ಕೈಕೊಟ್ಟು, ವಿರಹ ವೇದನೆಯಲ್ಲಿರುವಾಗಲೇ ತಂದೆ ತಾಯಿಯರ ಒತ್ತಾಯಕ್ಕೆ ಕಟ್ಟುಬಿದ್ದು, ಅವರಿಗೆ ನೋವು ಕೊಡಬಾರದೆಂಬ ಉದ್ದೇಶದಿಂದ ಅಂಜಲಿ(ಪಾರ್ವತಿ) ಎಂಬ ಹುಡುಗಿಯನ್ನು ಮದುವೆಯಾಗುತ್ತಾನೆ. ಮದುವೆಯಾದ ಮೊದಲ ದಿನವೇ ಆಕೆ, ತಾನು ಬೇರೊಬ್ಬನನ್ನು ಪ್ರೀತಿಸುತ್ತಿದ್ದು, ಈ ಮದುವೆ ಇಷ್ಟವಿಲ್ಲವೆಂದು ಹೇಳುತ್ತಾಳೆ ಮತ್ತು ವಿಚ್ಛೇದನ ಕೊಡಲು ಕೇಳಿಕೊಳ್ಳುತ್ತಾಳೆ.

ಸ್ವಭಾವತಃ ಸಭ್ಯನೂ, ಮಹಿಳೆಯರ ಬಗ್ಗೆ ಗೌರವಾದರಗಳನ್ನು ಹೊಂದಿರುವ ನಾಯಕ ಆಕಾಶ್ ಅವಳ ಬೇಡಿಕೆಗೆ ಒಪ್ಪುತ್ತಾನೆ. ಅವರಿಬ್ಬರೂ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಾಗ, ಆರು ತಿಂಗಳುಗಳ ಕಾಲ ಕಾಯುವುದು ಅನಿವಾರ್ಯವಾಗುತ್ತದೆ. ಒಟ್ಟಿಗೆ ಇರಬೇಕಾದ ಸಂದರ್ಭದಲ್ಲಿ ಅವಳ ಇಚ್ಛೆಯಂತೆ ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳುವುದಲ್ಲದೇ ಆಕೆಯ ಪ್ರಿಯಕರ ಹೇಮಂತ್ (ದಿಲೀಪ್‌ರಾಜ್)ನನ್ನು ಹುಡುಕಿ ಇಬ್ಬರನ್ನು ಒಂದು ಮಾಡುವುದಾಗಿ ಭರವಸೆ ನೀಡುತ್ತಾನೆ.

ಅಂಜಲಿಯ ಪ್ರಿಯಕರ ಹೇಮಂತ್ ಸಿಗುತ್ತಾನೆ. ಆದರೆ ಆತನೊಬ್ಬ ದುಷ್ಟನೆಂದು, ತನ್ನ ಶ್ರೀಮಂತಿಕೆ ನೋಡಿ ತನ್ನನ್ನು ಬಯಸಿದವನು ಎಂಬುದು ಅವಳಿಗೆ ಅರಿವಾಗುತ್ತದೆ, ಮತ್ತು ಆಕಾಶ್‌ನೊಂದಿಗಿನ ಅವಳ ಜೀವನ ಕುರಿತು ಕೀಳಾಗಿ ಮಾತನಾಡಿ, ಅವಳೊಂದಿಗೆ ಅನುಚಿತವಾಗಿ ವರ್ತಿಸುತ್ತಾನೆ. ಆಗ ಆಕಾಶ್ ಅವನಿಂದ ಅಂಜಲಿಯನ್ನು ರಕ್ಷಿಸಿ ಕರೆತಂದು, ಬಯ್ಯುತ್ತಾನೆ. ಮನಸಾರೆ ಮೆಚ್ಚಿದ ಪ್ರಿಯಕರನ ವರ್ತನೆಯಿಂದ ಬೇಸತ್ತು ಆತ್ಮಹತ್ಯೆಗೆ ಯತ್ನಿಸುತ್ತಾಳೆ. ಆಕಾಶ್ ಅವಳನ್ನು ಬದುಕಿಸಿ, ಬದುಕುವ ಛಲ ತುಂಬುತ್ತಾನೆ. ಅವಳ ವಿದ್ಯಾಭ್ಯಾಸ ಮುಂದುವರೆಸಿ ತಲೆ ಎತ್ತಿ ನಿಲ್ಲುವಂತೆ ಹುರಿದುಂಬಿಸುತ್ತಾನೆ.

ಈ ಸಂದರ್ಭದಲ್ಲಿ ಆಕಾಶ್‌ನ ಗುಣವಂತಿಕೆಯನ್ನು ನೋಡಿ, ಅಂಜಲಿ ಅವನನ್ನು ಮೆಚ್ಚುತ್ತಾಳೆ. ಆದರೆ ಹಿಂದೆಲ್ಲಾ ಅವನನ್ನು ಕೀಳಾಗಿ ಕಂಡು ಈಗ, ಒಲವನ್ನು ಬೇಡಲು ಹಿಂಜರಿಯುತ್ತಾಳೆ. ಆಕಾಶ್‌ನೂ ಆಕೆಗೆ ತನ್ನಲ್ಲಿ ಪ್ರೀತಿ ಇದೆಯೋ, ಇಲ್ಲವೋ ಎಂಬ ಅನುಮಾನದಲ್ಲಿ, ಅವಳನ್ನು ನೋಯಿಸಬಾರದೆಂಬಂತೆ ವರ್ತಿಸುತ್ತಾನೆ.

ಅಂತಿಮವಾಗಿ ಶಿಕ್ಷಣಕ್ಕೆ ವಿದೇಶಕ್ಕೆ ಹೊರಟು ನಿಲ್ಲುವ ಸಂದರ್ಭದಲ್ಲಿ ಅವರಿಗೆ ವಿಚ್ಛೇದನವೂ ಸಿಗುತ್ತದೆ. ಅಂಜಲಿ ಒಲ್ಲದ ಮನಸ್ಸಿನಿಂದಲೇ ಹೊರಟು ನಿಲ್ಲುತ್ತಾಳೆ. ಕೊನೆಗೆ ನಾಯಕ ಆಕಾಶ್‌ಗೆ ಈಕೆಯನ್ನು ಬಿಟ್ಟುಕೊಡುವ ಮನಸ್ಸಾಗದೇ ವಿಮಾನ ನಿಲ್ದಾಣಕ್ಕೆ ತೆರಳಿ ಅವಳಿಗಾಗಿ ಹುಡುಕಾಡುತ್ತಾನೆ. ಆಕೆಯೂ ವಿಮಾನವನ್ನೇರದೆ ಕುಳಿತಿರುತ್ತಾಳೆ. ಅಂತಿಮವಾಗಿ ಇಬ್ಬರೂ ಒಂದಾಗುತ್ತಾರೆ.

ಹೆಣ್ಣಿಗೆ ತಾಳಿ, ಕಾಲುಂಗುರಳಿಂದಲೇ ರಕ್ಷಣೆ ಎಂಬ ಹೆಣ್ಣಿನ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹ ಹಳಸಲು ಮೌಲ್ಯದ ಸಂಭಾಷಣೆ ಚಿತ್ರದಲ್ಲಿದ್ದ ಹೆಣ್ಣನ್ನು ಆದರದಿಂದ ಕಾಣುವ, ಪ್ರೀತಿಯ ಅಭಿವ್ಯಕ್ತಿಯ ಭಾವನಾತ್ಮಕ ಸನ್ನಿವೇಶಗಳಿಂದ ಈ ಅಂಶ ಸ್ವಲ್ಪ ಮಸುಕಾಗಿದೆ. ಪುನೀತ್, ತ ರಾಜ್‌ರ ಮೇಲ್ಪಂಕ್ತಿಯನ್ನು ಅನುಸರಿಸಿ, ತಮ ಚಿತ್ರಗಳಲ್ಲಿ ತೀರಾ ಅಸಭ್ಯ ದೃಶ್ಯಗಳಿಲ್ಲದಂತೆ ರೂಪಿಸಿದ್ದಾರೆ. ನಾಯಕಿ ಪಾರ್ವತಿ ತನ್ನ ಭಾವಾಭಿನಯದಿಂದ ಮನಸೂರೆಗೊಳ್ಳುತ್ತಾ

ಒಂದೊಮ್ಮೆ ಒತ್ತಾಯಕ್ಕೆ ಮದುವೆಯಾದ ಗಂಡನಂತೆ ಒಂದುಗೂಡಲು ಬಯಸುವ ಪ್ರಿಯತಮನೂ ಸಭ್ಯಸ್ಥನೂ, ಪ್ರಾಮಾಣಿಕನ ಆಗಿದ್ದರೆ ಏನಾಗುತ್ತಿತ್ತು? ಅಂತಹ ಸಂದರ್ಭದ ವಿಚ್ಛೇದನ ಪಡೆದು ಮೆಚ್ಚಿದವನನ್ನು ಮದುವೆಯಾಗಬಹುದೇ?

ಆಗ ತಾಳಿ, ಕಾಲುಂಗರಗಳ ಪಾವಿತ್ರತೆ ಹೇಗೆ ನೋಡಲಾಗುತ್ತದೆ. ಇಂತಹ ಪ್ರಶ್ನೆಗಳ ಏಳಬಾರದೆಂದೆ ಪ್ರಿಯಕರನನ್ನು ಅಪ್ರಾಮಾಣಿಕನನ್ನಾಗಿಸಲಾಗಿದೆ. ಒಂದು ಗ ಹೆಣ್ಣಿಗೆ ಮದುವೆ - ಸಮಾಜದ ಒಪ್ಪಿಗೆ ಮುಂತಾದ ಆರೋಗ್ಯಕರ ಚೌಕಟ್ಟುಗಳು ಅಗತ್ಯವೇ. ಆದರೆ ಮದುವೆ ಮುಂತಾದ ಬಂಧನಗಳು ಯಾವ ಕಾರಣಕ್ಕೂ ಮುರಿಯಲಾಗದ ಪವಿತ್ರ ಬಂಧನ ಎಂಬ ಸಿದ್ಧಾಂತ ಯಥಾಸ್ಥಿತಿವಾದದ ಕರಾಳ ಮೌಲ್ಯ ಆಗುತ್ತದೆ.

ನಿರ್ದೇಶಕ ಪ್ರಕಾಶ್ ಸರಳ ಕಥೆಯನ್ನು, ಯಾವುದೇ ಉತ್ಪ್ರೇಕ್ಷೆಯಿಲ್ಲದೆ ಸರಳವಾಗೇ ನಿರೂಪಿಸಿದ್ದಾರೆ. ಆದ್ದರಿಂದಲೇ ಇದು ಅದ್ಭುತವೇನಲ್ಲದ ಒಂದು ಸಾಮಾನ್ಯ ಚಿತ್ರ. ಸಂಗೀತ ನಿರ್ದೇಶಕ ಮನೋಮೂರ್ತಿಯವ ಕಥೆಗೆ ಪೂರಕವಾದ ಎರಡು ಹಾಡುಗಳು ಗುನುಗುವಂತಿದೆ, ಅದರಲ್ಲೂ 'ಮಳೆ ನಿಂತ ಹೋದ ಮೇಲೆ' ಸದಾ ಕಾಡುವ ಹಾಡಿನಿಂದ ಜಯಂತ್ ಕಾಯ್ಕಿಣಿ ತಮ್ಮ ಸಾಹಿತ್ಯದಿಂದ ಮಿಂಚಿದ್ದಾರೆ.

ಹೂವ ನಗುವ ಕದ್ದವರು

ಮಂದಿರದ ಘಂಟಾನಾದ
ಮಸೀದಿಯ ನಮಾಜು
ಎಬ್ಬಿಸಿದ ಜ್ವಾಲೆ ಆರಿ
ಕಾವು ಕಮರಿ
ಹಬ್ಬಿದ ಮಸುಕು ಹರಿದು
ಬೆಳಗು ಮೂಡೋ ಹೊತ್ತು

ಸುರಿದ ರಕ್ತದ ಮೇಲೆ
ಬೂಟುಗಾಲಿನ ಹೆಜ್ಜೆ ಗುರುತು
ಮೂಡಿದ ನೆಲದಲ್ಲಿ
ಸೆಗಣಿ ಸಾರಿಸಿ
ಅವ್ವ ಇಟ್ಟ ರಂಗವಲ್ಲಿ
ನಗುವ ಹೊತ್ತು

ಬಿತ್ತಿದ ಬೀಜ
ಅಪ್ಪನೆದೆಗೂಡಲ್ಲಿ
ಮೊಳಕೆಯೊಡೆವ ಕ್ಷಣ



ಕಣ್ಣ ತುಂಬಾ
ಹಸಿರು ಹೊಲದ ಘಮ ಘಮ

ಸುಟ್ಟರೆಕ್ಕೆಗಳ
ಪಟಪಟನೆ ಬಡಿದು
ಹೊಸಗೂಡನು ಕಟ್ಟಿ
ಮತ್ತೆ ಚಿಗುರುವ
ಹಕ್ಕಿಗಳ ಸಂಭ್ರಮ
ಮೊಗ್ಗು ಅರಳಿ ಹೂವು
ನಗುವ ಹೊತ್ತು
ಅಲ್ಲಿ
ಸೇತು ಸಮುದ್ರದಲ್ಲಿ
ಸುರಿದ ಮಳೆಗೆ
ಇಲ್ಲಿ
ತೇಲಿ ಹೋಗಿದೆ
ಬದುಕು.

ವೈರಿಗೂ ಸೇತುವಾದವನಿಗೆ
ಧರೆ ಹತ್ತಿ ಉರಿಸಿ
ಕರ್ಪೂರದಾರತಿ ಬೆಳಗಿಸಿ
ಆರ್ತನಾದ ಮೊಳಗಿಸಿ

ಜೈ....ರಾ......ಮ್
ಎಂದು
ನನ್ನವರೊಂದಿಗೆ
ನಿನ್ನನ್ನು
ಬೀದಿಗೆ ತಂದವರು
ಯಾರವರು....?

ಹೂವ
ನಗುವ
ಕದ್ದವರು....?

ನಿನ್ನ ಸೇತುವಿನಲ್ಲಿ
ರಕ್ತದ ಕೋಡಿ
ಹರಿಸಿದವರು.....?



ಅಯ್ಯೋ ರಾಮ ರಾಮಾ!
ಸೀತಾರಾಮ
ಬದಲಾಗಲಾರೆಯಾ
ಬೀದಿಗೆ ಬಿದ್ದ
ರಾಮ ರಹೀಮರ
ಸೇತು
ರಾಮನಾಗಿ

ಬಿ.ಶ್ರೀನಿವಾ
ಹಾವ

NASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
lished by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
ARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE
12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
tor: S.Y.GURUSHANTH